ರವಿ ಬೆಳಗೆರೆಯವರ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ಸ್ವರೂಪ

(ಕನ್ನಡ ವಿಶ್ವ ವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ನಿಂಗಪ್ಪ. ಬ. ಸಂಗ್ರೇಜಿಕೊಪ್ಪ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ. ಬಿ ಎಂ. ಪುಟ್ಟಯ್ಯ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬
ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ

೨೦೧೧-೧೨

1016

ರವಿ ಬೆಳಗೆರೆಯವರ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ಸ್ವರೂಪ

(ಕನ್ನಡ ವಿಶ್ವ ವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ನಿಂಗಪ್ಪ. ಬ. ಸಂಗ್ರೇಜಿಕೊಪ್ಪ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ. ಬಿ. ಎಂ. ಪುಟ್ಟಯ್ಯ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬
ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ

೨೦೧೧-೧೨

1016

ಪ್ರಮಾಣ ಪತ್ರ

'ರವಿ ಬೆಳಗೆರೆಯವರ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ಸ್ವರೂಪ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಬಿ.ಎಂ. ಪುಟ್ಟಯ್ಯ ಅವರ ಮಾರ್ಗದರ್ಶನದಲ್ಲಿ ಬರೆದು ಸಿದ್ಧಪಡಿಸಲಾಗಿದೆ. ಇದನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಪ್ರಬಂಧವನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ ಹಂಪಿ
ದಿನಾಂಕ: 29-06-12

ನಿಂಗಪ್ಪ ಬ. ಸಂಗ್ರೇಜಿಕೊಪ್ಪ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ಶ್ರೀ ನಿಂಗಪ್ಪ. ಬ. ಸಂಗ್ರೇಜಿಕೊಪ್ಪ ಇವರು 'ರವಿ ಬೆಳಗೆರೆಯವರ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ಸ್ವರೂಪ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಇದನ್ನು ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗೆ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಬಿ. ಎಂ. ಪುಟ್ಟಯ್ಯ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ ಹಂಪಿ
ದಿನಾಂಕ: 29-06-2012

ರವಿ ಬೆಳಗೆರೆಯವರ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣದ ಸ್ವರೂಪ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಾಯ ೧

ಅಧ್ಯಯನ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನ

ಉದ್ದೇಶ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾದಂಬರಿ ಪ್ರಕಾರಕ್ಕೆ ಮಹತ್ವದ ಸ್ಥಾನವಿದೆ. ಆರಂಭದಲ್ಲಿ ಬಂದ ಕಾದಂಬರಿಗಳಲ್ಲಿ ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿ, ವಾಸ್ತವ ಬದುಕಿನ ಚಿತ್ರಣ, ಸಮಾಜದ ಜ್ವಲಂತ ಸಮಸ್ಯೆಗಳಾದ ಬಾಲ್ಯವಿವಾಹ, ವಿಧವಾ ವಿವಾಹ, ಅಧಿಕಾರಿ ವರ್ಗದ ದರ್ಪ, ಸ್ವಾರ್ಥ, ಮಾನವ ಸಂಬಂಧ, ಐತಿಹಾಸಿಕ, ಸಾಂಸ್ಕೃತಿಕ, ನಿಸರ್ಗದ ಕಲ್ಪನೆ, ಧರ್ಮ, ಆಚರಣೆ, ಮೂಢನಂಬಿಕೆ, ರಾಷ್ಟ್ರೀಯ ಪ್ರಜ್ಞೆ ಸಾವು–ನೋವು, ಪ್ರೀತಿ ವಿಶ್ವಾಸ ಮುಂತಾದ ವಸ್ತು ವಿಷಯವನ್ನು ತಮ್ಮ ಕಾದಂಬರಿಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ.

ಆದರೆ ಯಾವಾಗ ಕಾದಂಬರಿಗಳು ಚಿತ್ರೋದ್ಯಮವನ್ನು ಪ್ರವೇಶಿಸಿದವೋ ಅಲ್ಲಿಂದ ಒಂದು ಬೇರೆ ಪರಂಪರೆಯೇ ನಿರ್ಮಾಣವಾದಂತೆ ಕಂಡುಬರುತ್ತದೆ. ಉದಾಹರಣೆಗೆ ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ', 'ಅವಸ್ಥೆ', 'ಬರ', 'ಘಟಶ್ರಾದ್ಧ' ಪ್ರಸಿದ್ಧ ಚಲನಚಿತ್ರಗಳಾಗಿವೆ. ಆದ್ದರಿಂದ ಕನ್ನಡ ಕಾದಂಬರಿಯಲ್ಲಿ ವಸ್ತುವಿಷಯದ ದೃಷ್ಟಿಯಿಂದ ಎರಡು ತೆರನಾದ ಕಾದಂಬರಿಗಳನ್ನು ಗಮನಿಸಬಹುದು. ಒಂದು ಗಾಂಭೀರ್ಯತೆಯ ಕಾದಂಬರಿಗಳು; ಇನ್ನೊಂದು ಜನಪ್ರಿಯ ಕಾದಂಬರಿಗಳು. ಗಾಂಭೀರ್ಯತೆಯ ಕಾದಂಬರಿಗಳಲ್ಲಿ ಸಂಸ್ಕೃತಿಯ ಚಿಂತನೆ, ದಲಿತರ ನೋವು ನಲಿವು ಮತ್ತು ಐತಿಹಾಸಿಕ ಘಟನೆಗಳು ದಾಖಲಾಗಿರುವುದನ್ನು ಕಾಣುತ್ತೇವೆ. ಆದರೆ ಜನಪ್ರಿಯತೆ ಕಾದಂಬರಿಗಳಲ್ಲಿ ವಾಸ್ತವ ಬದುಕಿನ ಚಿತ್ರಣ, ಪ್ರಸ್ತುತ ಘಟನೆಗಳು ದಾಖಲಾಗಿರುತ್ತವೆ. ರವಿ ಬೆಳಗೆರೆಯವರ ಕಾದಂಬರಿಗಳನ್ನು ಜನಪ್ರಿಯತೆಯ ದೃಷ್ಟಿಯಿಂದ ನೋಡಲಾಗುತ್ತದೆ. ಹಾಗೆ ನೋಡಲು ಹಲವಾರು ಕಾರಣಗಳಿರಬಹುದು. ಉದಾಹರಣೆಗೆ ಆಕರ್ಷಕ ಶೀರ್ಷಿಕೆ, ಪತ್ರಿಕೆಯ ಪ್ರಭಾವ, ಮಾರುಕಟ್ಟೆಯ ವ್ಯವಸ್ಥೆ, ಜನರ ಅಭಿರುಚಿ ಅಥವಾ ಯುವಜನತೆಯ ಕುರಿತು ಬರವಣಿಗೆ, ಸ್ತ್ರೀ ಪಾತ್ರವನ್ನು ವಿಭಿನ್ನ ನೆಲೆ ಅಥವಾ ವಿಭಿನ್ನ ದೃಷ್ಟಿಕೋನದಿಂದ ಚಿತ್ರಿಸುವುದು, ಪತ್ರಿಕಾ ಧಾರಾವಾಹಿಯಾಗಿ ಪ್ರಕಟಗೊಂಡಿರುವುದರಿಂದ ಜನಮನ್ನಣೆ ಪಡೆದು ಮನೆ ಮನೆಯ ಮಾತಾಗಿರಬಹುದು. ಯಾಕೆಂದರೆ ಇವತ್ತಿನ ದಿನಮಾನಗಳಲ್ಲಿ ಟಿ.ವಿ. ಪ್ರಸಾರ ಕಾರ್ಯಕ್ರಮದಲ್ಲಿ ದೇಶದ ಗಂಭೀರ ವಿಚಾರಗಳ ಚಿಂತನೆ, ಯುದ್ಧ ಸನ್ನದ್ಧ ಸ್ಥಿತಿ, ನಾಡಿನ ಒಳಿತು ಕೆಡಕು, ಗುಟಕಾ, ತಂಬಾಕು ಕಾರ್ಯಕ್ರಮವಿದ್ದರೆ ಅವುಗಳನ್ನು ನೋಡುವುದಕ್ಕಿಂತ ಹೆಚ್ಚಾಗಿ ಧಾರಾವಾಹಿಗಳನ್ನು ನೋಡುವುದು ಅವುಗಳ

ಪಾತ್ರಗಳೊಂದಿಗೆ ತಮ್ಮನ್ನು ಹೋಲಿಸಿಕೊಂಡು ಹರಟೆ ಹೊಡೆಯುವುದು ಕಂಡುಬರುತ್ತದೆ.

ರವಿ ಬೆಳಗೆರೆಯವರ ಕಾದಂಬರಿಗಳು ವಿಶಿಷ್ಟ ರೀತಿಯಿಂದ ಜನರ ಗಮನ ಸೆಳೆದಿವೆ. ಪ್ರಸ್ತುತ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಪ್ರೀತಿ, ಪ್ರೀತಿಯಿಂದ ಬದುಕು ಕಟ್ಟಿಕೊಳ್ಳುವ ಬದುಕನ್ನು ಗಟ್ಟಿಗೊಳಿಸಿಕೊಳ್ಳುವುದರೊಂದಿಗೆ ಪ್ರೀತಿ ಎಂಬುದನ್ನು ಶಾಶ್ವತವಾಗಿ ಪಡೆಯಲು ಹಂಬಲಿಸುವ ತುಡಿತವಿದೆ. ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಜನಜೀವನ ಒಂದು ನಿರ್ದಿಷ್ಟ ಸನ್ನಿವೇಶದಿಂದ ಆಧುನಿಕ ಜಾಗತೀಕರಣ ದಿನಗಳಲ್ಲಿ ಕಾಣಲಾಗದ ಅನೇಕ ಸಂಗತಿಗಳ ಮೂಲಕವೇ ಬದುಕಿನ ಅನೇಕ ಪಾತ್ರಗಳು ಕಾದಂಬರಿಗಳಲ್ಲಿ ದಾಖಲಾಗಿದೆ. ಅವುಗಳು ಸೃಷ್ಟಿಸುತ್ತಿರುವ ಸೃಜನಶೀಲತೆಗಳು ಬದುಕನ್ನು ಎದುರಿಸುತ್ತಿರುವಾಗ ಸಮಸ್ಯೆಗಳಿಗೆ ಮುಖಾಮುಖಿಯಾದ ಸಂಗತಿಗಳು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಪರಿ ಇತ್ಯಾದಿಗಳೆಲ್ಲವು ಇಂದಿಗೂ ಕುತೂಹಲವಾಗಿವೆ.

ರವಿ ಬೆಳಗೆರೆಯವರು ಮೂಲತಃ ಪತ್ರಕರ್ತರು. ಪ್ರಸ್ತುತ ಹಾಯ್ ಬೆಂಗಳೂರ್! ವಾರ ಪತ್ರಿಕೆಯ ಸಂಪಾದಕರು. 'ಪತ್ರಿಕೋದ್ಯಮದ ಭಾಷೆ ಸೃಜನಶೀಲತೆಯನ್ನು ಮೊಟಕುಗೊಳಿಸುತ್ತದೆ' ಎಂಬ ಮಾತಿಗೆ ಅಪವಾದವಾಗಿರುವ ಅವರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾದಂಬರಿ, ಪ್ರವಾಸ ಕಥನ, ಅನುವಾದ, ಜೀವನ ಚರಿತ್ರೆ, ಆತ್ಮಕಥನ, ಅಂಕಣ ಬರಹ, ಪತ್ರ ಸಾಹಿತ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸಾಹಿತ್ಯ ರಚನೆ ಮಾಡಿದ ಬಹುಮುಖ ಪ್ರತಿಭೆಯುಳ್ಳವರು. ತಮ್ಮ ವಿಭಿನ್ನವಾದ ಬರವಣಿಗೆಯ ಶೈಲಿಯಿಂದ ತಮ್ಮದೇ ಆದ ಓದುಗ ಸಮೂಸವನ್ನು ಸೃಷ್ಟಿಸಿಕೊಂಡಿರುವ ಇವರು ಕನ್ನಡದ ಅಪರೂಪದ ಕಾದಂಬರಿಕಾರರು, ಸಾಹಿತಿಗಳು ಹಾಗೂ ಜನಪ್ರಿಯ ಪತ್ರಕರ್ತರು. ಆದರೂ ಇವರ ಕಾದಂಬರಿಗಳು ವಿಮರ್ಶಕರ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ವಿಪರ್ಯಾಸ. ವಿಮರ್ಶಕರ ನಿರ್ಲಕ್ಷ್ಯಕ್ಕೆ ಒಳಗಾದರೂ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯಬಲ್ಲ ಸತ್ವ ರವಿಯವರ ಕಾದಂಬರಿಗಳಲ್ಲಿದೆ. ಗಂಡು-ಹೆಣ್ಣಿನ ಸಂಬಂಧಗಳ ಬಗ್ಗೆ ತುಂಬಾ ರೋಮ್ಯಾಂಟಿಕ್ ಆಗಿ ಬರೆಯಬಲ್ಲ ರವಿಯವರು ಬದುಕಿನ ನಿರೀಂದ್ರಿಯ ಸ್ಥಿತಿಯ ಬಗ್ಗೆಯೂ ಅಷ್ಟೇ ತೀವ್ರತೆ ಆಸಕ್ತಿಯಿಂದ ಬರೆಯಬಲ್ಲರೆಂಬುದು ಅವರ ಕಾದಂಬರಿಗಳನ್ನು ಓದಿದಾಗ ವಿದಿತವಾಗುತ್ತದೆ. ಪ್ರೀತಿ ಬದುಕು ಮತ್ತು ಮಾನವ ಸಂಬಂಧಗಳು, ಸ್ತ್ರೀಪರ ವಿಚಾರಗಳು ಆಧುನಿಕತೆಯ ಪ್ರಭಾವ ಅದರ ಪರಿಣಾಮ ಹೀಗೆ ಹತ್ತು ಹಲವು ಮುಖಗಳ ಚಿತ್ರಣವನ್ನು ಇವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ರವಿಯವರ ಕಾದಂಬರಿಗಳಲ್ಲಿ ಅನೇಕ ಸ್ತ್ರೀ ಪಾತ್ರಗಳು ಕಾಣಿಸುತ್ತವೆ. ತಾಯಿ, ಮಗಳು, ಗೆಳತಿ, ಸಾಕುತಾಯಿ, ಅಜ್ಜಿ, ಅತ್ತೆ, ಪ್ರೇಯಸಿ, ಸೂಳೆ, ಹೆಂಡತಿ ಈ ರೀತಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಗಳಿಂದ ಪುರುಷ ಸಂಬಂಧದ ಮೂಲಕ ಕಾಣಿಸಿಕೊಳ್ಳುವ ಪಾತ್ರಗಳು ಕಾದಂಬರಿಗಳಲ್ಲಿ ಪ್ರಧಾನ

ಭೂಮಿಕೆಯ ಸ್ತ್ರೀ ಪಾತ್ರ ಚಿತ್ರಣದಲ್ಲಿ ಪುರುಷ ಪ್ರಧಾನ ಸಮಾಜದ ಪ್ರಭಾವ ಎಷ್ಟರ ಮಟ್ಟಿಗಾಗಿದೆ ಎಂಬುದನ್ನು ಗುರುತಿಸಲು ಉದ್ದೇಶಿಸಲಾಗಿದೆ.

ರವಿಯಯವರು ಸ್ತ್ರೀ ಪಾತ್ರಗಳನ್ನು ಬದುಕಿನ ನೆಲೆಯಿಂದ ಚಿತ್ರಿಸಿದ್ದಾರೆ. ಒಬ್ಬರು ಮತ್ತೊಬ್ಬರಿಗೆ ಪೂರಕವಾಗಿ ಬದುಕುವುದರಿಂದ ಜೀವನ ಆನಂದಮಯವಾಗಿರಲು ಸಾಧ್ಯ. 'ಹೆಣ್ಣಿಗೆ ಹೆಣ್ಣು ಶತ್ರು' ಎಂಬ ಪರಂಪರಾಗತ ನಂಬಿಕೆಯನ್ನು ಸುಳ್ಳಾಗಿಸಲು ಪ್ರಯತ್ನಿಸಿರುವುದು ಸ್ಪಷ್ಟವಾಗುತ್ತದೆ. ಹೆಣ್ಣಿಗೆ ಹೆಣ್ಣು ಆಶ್ರಯ ನೀಡಿ ಬದುಕಿನ ದಾರಿಗಳನ್ನು ಹುಡುಕಿ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಹಂಬಲವಿದೆಯಾದ್ದರಿಂದ 'ಅನುಭವವು ಒದಗಿಸುವ ಮೂಲ ದ್ರವ್ಯವೇ ವೈಚಾರಿಕತೆಗೆ ಪ್ರೇರಣೆ ನೀಡುತ್ತದೆ ಎಂಬ ಕಾದಂಬರಿಕಾರರ ಧೋರಣೆಗಳನ್ನು ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮುದುಕಿ ಮತ್ತು ಪ್ರಶಾಂತಿನಿಯ ಪಾತ್ರಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ರವಿಯವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣವು ವಿಶಿಷ್ಟವು, ವಿನೂತನವು ಆಗಿವೆ. ಅದರಲ್ಲಿಯೂ ವಿವಿಧ ವಯೋಮಾನದ ಸ್ತ್ರೀಯರನ್ನು, ವೈವಿಧ್ಯಮಯವಾದ ಆಚಾರ–ವಿಚಾರಗಳನ್ನು ಹೊಂದಿದಂತ ಮಹಿಳೆಯರನ್ನು ಗುರುತಿಸಬಹುದು. ಸ್ತ್ರೀ ಮತ್ತು ಪುರುಷರು ದೈಹಿಕವಾಗಿ ಮಾತ್ರವಲ್ಲ ಮಾನಸಿಕವಾಗಿಯೂ ಭಿನ್ನರಾಗಿರುತ್ತಾರೆ. ಅಲ್ಲದೇ ಯಾವುದೇ ಒಂದು ಪರಿಸ್ಥಿತಿಗೆ ಸ್ತ್ರೀಯರು ಸ್ಪಂದಿಸುವ ರೀತಿಯೇ ಬೇರೆ, ಪುರುಷ ಸ್ತ್ರೀಯರಿಗೆ ಸ್ಪಂದಿಸುವ ರೀತಿಯೇ ಬೇರೆ. ಅದರೊಂದಿಗೆ ಜೀವನವನ್ನು ನೋಡುವ, ಬಾಳುವ ದೃಷ್ಟಿಕೋನಗಳು ಬೇರೆ ಬೇರೆಯಾಗಿರುತ್ತವೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಪ್ರೀತಿ ಎಂದರೆ ಒಬ್ಬರನ್ನು ಕೇವಲ ಭರಿಸುವಂತಹದಲ್ಲ, ಪ್ರೀತಿ ತಬ್ಬುಗೆಯಲ್ಲ, ಪ್ರೀತಿ ಉನ್ಮಾದವಲ್ಲ, ಪ್ರೀತಿ ನಿಟ್ಟುಸಿರೂ ಅಲ್ಲ. ಅದು ಸದ್ದಿಲ್ಲದೆ ಸಂಭವಿಸುವ ಸಂಗತಿ. 'ಅತಿಯಾದರೆ ಅಮೃತವು ವಿಷವಾಗುತ್ತದೆ' ಎಂಬ ಯುಕ್ತಿಯಂತೆ ಜೀವನದಲ್ಲಿ 'ಕಾಮದಾಹವು ನೈತಿಕತೆಯ ಎಲ್ಲೆಯನ್ನು ಮೀರಬಾರದು ಮಿರಿದ್ದೆ ಆದರೆ ಬದುಕು ಅಧಃಪತನದತ್ತ ಸಾಗುವುದು ಹಾಗೂ ಸಮಾಜದಲ್ಲಿ ಮಾನವೀಯ ಮೌಲ್ಯ ಸ್ಥಾನಪಲ್ಲಟಗಳಾಗುವುವು. ವಿವಾಹ ಬಾಹಿರ ಸಂಬಂಧಗಳ ಲೈಂಗಿಕ ಸುಖಕ್ಕಾಗಿಯೇ ನಡೆಸುವ ಸಂಬಂಧಗಳು ಇತ್ಯಾದಿ ತೂಗಿ ನೋಡುವ ಉದ್ದೇಶ ಹೊಂದಲಾಗಿದೆ. ಅಲ್ಲದೇ ಸ್ತ್ರೀಯರ ಬಾಲ್ಯ ಜೀವನ, ಸಂಸಾರ, ದಾಂಪತ್ಯ ಜೀವನದ ಸಿಹಿ–ಕಹಿ ಘಟನೆಗಳು, ಮಕ್ಕಳ ಲಾಲನೆ–ಪಾಲನೆ ವಿವಾಹೇತರ ಸಂಬಂಧಗಳು ಅದರಿಂದುಟಾಗುವ ಪರಿಣಾಮಗಳು, ವೇಶ್ಯಾವೃತ್ತಿಯ ಆಚಾರ–ವಿಚಾರ ಅವರ ನೋವು–ನಲಿವುಗಳು, ದುಡಿಮೆಯ ಅನಿವಾರ್ಯತೆ, ಅದರ ತಾಪತ್ರಯ ಅದರಿಂದ ಹುಟ್ಟಿಕೊಳ್ಳುವ ಜೀವನ ಶ್ರದ್ಧೆ ಮೌಢ್ಯ ಆಧುನಿಕ ಪ್ರಗತಿಪರ ವಿಚಾರಧಾರೆಗಳು ಮುಂತಾದವು ಸ್ತ್ರೀ ಪ್ರಪಂಚದ ಪ್ರಮುಖ ನೆಲೆಗಳಾಗಿವೆ. ಅವುಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಪರಿಶೀಲಿಸಲಾಗುವುದು.

ಇವರ ಕಾದಂಬರಿಗಳಲ್ಲಿ ವೇಶಾವೃತ್ತಿಯನ್ನೆ ಪಾಲಿಸುವ ಪಾತ್ರಗಳಲ್ಲಿ ಮಾನವೀಯತೆ ಮೌಲ್ಯದೊಂದಿಗೆ ಸಾಮಾಜಿಕ ಕಳಕಳಿಯು ವ್ಯಕ್ತವಾಗಿರುವುದು ಅವರ ಕಾದಂಬರಿಯ ಕೆಲವೊಂದು ಪಾತ್ರಗಳಲ್ಲಿ ಗುರುತಿಸಬಹುದು. ಇವರ ಸ್ತ್ರೀ ಪಾತ್ರಗಳಲ್ಲಿ ಮಾನವೀಯತೆ ಒಂದು ಮುಖವಾದರೆ ವೃತ್ತಿ ಇನ್ನೊಂದು ಮುಖ. ಆದರೆ ವೃತ್ತಿ ಎಂಬುದು ಬದುಕಲು ಮಾಡಿಕೊಂಡ ದಾರಿ. ವೇಶ್ಯಯರಲ್ಲಿಯು ಮಾನವೀಯತೆಯ, ಪೂಜ್ಯತೆಯ, ವಿನಯತೆಯ ಭಾವನೆಗಳು ಜೀವಂತವಿರುತ್ತವೆಂಬುದನ್ನು ಅವರ ಕಾದಂಬರಿ ಸ್ತ್ರೀ ಪಾತ್ರಗಳಲ್ಲಿ ಹಿಡಿದಿಡಲು ಪ್ರಯತ್ನಿಸಿರುವುದನ್ನು ಗುರುತಿಸಬಹುದು. ಎರಡು ಕಾದಂಬರಿಯ ಪ್ರಮುಖ ಸ್ತ್ರೀ ಪಾತ್ರಗಳ ಮೂಲಕ ಮಹಿಳೆಗೆ ವಿದ್ಯೆಯ ಅಗತ್ಯದ ಪ್ರತಿಪಾದನೆ ಇರುವುದನ್ನು ಲಕ್ಷಿಸಲಾಗಿದೆ.

ವ್ಯಾಪ್ತಿ

'ಬರವಣಿಗೆಯೊಂದರಿಂದಲೆ ಅನ್ನ ಮತ್ತು ಆತ್ಮಸಂತೋಷ ದುಡಿದುಕೊಳ್ಳಲು ತೀರ್ಮಾನಿಸಿದಂತೆ ಬದುಕುತ್ತಿರುವವನು ನಾನು. ಬರವಣಿಗೆ ಬಿಟ್ಟು ಬೇರೆ ಏನನ್ನು ಮಾಡಲು ನನಗೆ ಬಾರದು ಅಂತ ತೀರ್ಮಾನಿಸಿ ಆಗಿದೆ' ಎಂದು ಪರಿಚಯಿಸಿಕೊಳ್ಳುವ ರವಿಯವರು ಸುಮಾರು ಆರವತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಆದರೆ ರವಿಯವರು ಯಾವುದೇ ಒಂದು ಪ್ರಕಾರದ ಸರಕನ್ನು ಬೆನ್ನಟ್ಟಿ ಹೋದವರಲ್ಲ. ಖಾಸ್‌ಬಾತ್, ಬಾಟಮ್ ಐಟಮ್, ಹಾಗೂ 'ಓ ಮನಸೇ', ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆಯುವುದನ್ನು ರೂಢಿಸಿಕೊಂಡಾಗಲು ಪತ್ರಿಕೆಗಳ ಅಂಕಣಗಳಲ್ಲಿ ಪತ್ರಿಕಾ ಧಾರಾವಾಹಿಗಳನ್ನು ಬರೆಯುವ ಹವ್ಯಾಸ ಬೆಳೆಸಿಕೊಂಡು ಜನಪ್ರಿಯ ಕಾದಂಬರಿಕಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದು ಎಲ್ಲರಿಗೂ ಎಲ್ಲ ಕಾಲಕ್ಕೂ ಸಾಧ್ಯವಾಗುವುದಿಲ್ಲ. ಬರವಣಿಗೆ ಎಂಬುದು ರವಿ ಬೆಳಗೆರೆಯವರ ಜೀವನವನ್ನೆ ಆಕ್ರಮಿಸಿಕೊಂಡಂತೆ ಗೋಚರವಾಗುತ್ತದೆ. ಯಾಕೆಂದರೆ 'ಓ ಮನಸೇ....' ಪಾಕ್ಷಿಕದ ಬರಹವು ಯುವಜನತೆಯನ್ನು ಆಕರ್ಷಿಸಿದೆ. ಅಷ್ಟೇ ಅಲ್ಲದೆ ಹಲವಾರು ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ಇಷ್ಟವಾದ ಬರಹಗಳಲ್ಲಿ ಸಣ್ಣ ಕತೆಯು ಒಂದು.

ಇಷ್ಟೆಲ್ಲ ಬರವಣಿಗೆಯಲ್ಲಿ ಕಾದಂಬರಿ ಪ್ರಕಾರವೆಂಬ ರಗಳೆಯನ್ನು ಮೈ ಮೇಲೆ ಎಳೆದುಕೊಂಡ ರವಿಯವರು ಅವುಗಳನ್ನು ಪತ್ರಿಕೆಗಳಲ್ಲಿ ಪ್ರಕಟ ಮಾಡಿದರು. ಅವು ಪತ್ರಿಕೆಯಲ್ಲಿ ಪ್ರಕಟವಾಗಿ ಜನಮನ್ನಣೆಯನ್ನು ಪಡೆದಿವೆ. ಅವರೆ ಹೇಳುವಂತೆ 'ಧಾರಾವಾಹಿಗಳು ನನ್ನ ಪತ್ರಿಕೆಯ ದೊಡ್ಡ ಆಧಾರಸ್ತಂಭಗಳು ಎಂದು ಹೇಳಿಕೊಂಡಿದ್ದಾರೆ. ಈ ಪತ್ರಿಕೆಯ ಆಧಾರಸ್ತಂಭಗಳೆ ಇವರ ಕಾದಂಬರಿಗಳಾಗಿವೆ. ಇವರ ಹಲವಾರು ಕಾದಂಬರಿಗಳನ್ನು ಈ ಕೆಳಗಿನಂತೆ ನೋಡಬಹುದು.

ತೆಲುಗು ಅನುವಾದಿತ ಕಾದಂಬರಿ

ನಕ್ಷತ್ರ ಜಾರಿದಾಗ

ಮೂಲ: ಯಂಡಮೂರಿ ವಿರೇಂದ್ರನಾಥ್ ಅವರ 'ಯುಗಾಂತಂ'

ಇಂಗ್ಲೀಷ್ ಅನುವಾದಿತ ಕಾದಂಬರಿ

ದಿ ಗಾಡ್ ಫಾದರ್

ಮೂಲ: ಮಾರಿಯೋ ಫ್ಯೂಜೋ

ದಿ ಕಂಪೆನಿ ಆಫ್ ವಿಮೆನ್

ಮೂಲ: ಖುಷ್‌ವಂತ್ ಸಿಂಗ್

ಹಂತಕಿ ಐ ಲವ್ ಯೂ

ಮೂಲ: Basic Instinct ಇಂಗ್ಲೀಷ್ ಚಲನಚಿತ್ರ

ದೆಲ್ಲಿ

ಮೂಲ: ಖುಷ್‌ವಂತ್ ಸಿಂಗ್

ನಿಜ್ಜ ಪ್ರೀತಿಸ್ತೀಯಾ?

ಮೂಲ: ಆ್ಯನ್ ರೂಲ್ ಅವರ 'If you really love me'

ಕನ್ನಡ ಕಾದಂಬರಿಗಳು

ಮಾಂಡೋವಿ

ಹೇಳಿ ಹೋಗು ಕಾರಣ

ನೀ ಹಿಂಗ ನೋಡಬ್ಯಾಡ ನನ್ನ

ಅರ್ತಿ

ಮಾಟಗಾತಿ

ಸರ್ಪ ಸಂಬಂಧ

ಗೋಲಿಬಾರ್

ಒಮರ್ಟಾ

ರೇಷ್ಮೆ ರುಮಾಲು

ಕವಿರಾಜ ಮಾರ್ಗವಲ್ಲ ಇದು ಕಾಮರಾಜ ಮಾರ್ಗ

'ಹಾಯ್ ಬೆಂಗಳೂರ್' ವಾರಪತ್ರಿಕೆಯಲ್ಲಿ ಧಾರಾವಾಹಿಗಳಾಗಿ ಪ್ರಕಟಗೊಂಡ ಕಾದಂಬರಿಗಳು

ಯಂತ್ರ ತಂತ್ರ ಮಂತ್ರ

ಜೊತೆ ಜೊತೆಯಲಿ

ಮಧ್ಯರಾತ್ರಿಯ ಆ ಮಗ್ಗಲು

ಯೌವ್ವನ ಜೋಪಾನ

ದಿ ಸೆಟ್ಲಮೆಂಟ್

ಕಾಲ್ ಸೆಂಟರ್ ಕಿಲ್ಲಿಂಗ್

ಭವಾಲದ ಭೈರಾಗಿ

ಆತ್ಮಾ

ಪ್ರದೋಷ್

ಹೀಗೆ ರವಿಯವರು ಹಲವಾರು ಜನಪ್ರಿಯ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ 'ಹೇಳಿ ಹೋಗು ಕಾರಣ' ಹಾಗೂ ಪತ್ರಿಕೋದ್ಯಮದ ತಿರುಗಣಿಯ ಮಧ್ಯ ಮೂಡಿಬಂದಿರುವ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳಿಗೆ ಈ ಅಧ್ಯಯನದ ಮಿತಿಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ವಿಧಾನ

ಮಾನವ ಮತ್ತು ಸಮಾಜದ ಸಂಬಂಧವನ್ನು ಗುರುತಿಸುವುದು.

ಸ್ತ್ರೀ–ಪುರುಷ ಸಂಬಂಧವನ್ನು ಗುರುತಿಸುವುದು.

ಪುರುಷ–ಸ್ತ್ರೀ ಸಂಬಂಧವನ್ನು ಗುರುತಿಸುವುದು.

ಅಧ್ಯಾಯ ೨

ನಾಯಕಿಯರ ಪಾತ್ರದ ಸ್ವರೂಪ

ಅಧ್ಯಾಯ ೨

ನಾಯಕಿಯರ ಪಾತ್ರದ ಸ್ವರೂಪ

ಒಂದು ಪ್ರೀತಿ ಉದ್ಭವವಾಗಲಿಕ್ಕೆ ನೂರು ಜರೂರತ್ತುಗಳು ಸೃಷ್ಟಿಯಾಗಬೇಕು. ಕನಸುಗಳ ಫಸಲು ಎದ್ದು ನಿಲ್ಲಬೇಕು. ಒಬ್ಬರನ್ನೊಬ್ಬರು ಜೀವನ ಪರ್ಯಂತ ಭರಿಸುತ್ತೇವೆಂಬ ನಂಬಿಕೆ ಹುಟ್ಟಿದರೆ ಸಾಲದು. ಭರಿಸಲೇಬೇಕೆಂಬ ತಿರ್ಮಾನ ಮಾಡಿಕೊಂಡರೂ ಸಾಲದು. ಪ್ರೀತಿಯೆಂದರೆ ಒಬ್ಬರನ್ನೊಬ್ಬರು ಕೇವಲ ಭರಿಸುವಂತಹುದಲ್ಲ. ಕೂಡಿ ನಡೆಯುವಂತಹುದು ಅಲ್ಲ. ಕೈ ಹಿಡಿದು ನಡೆಸುವಂತಹದು ಅಲ್ಲ. ಪ್ರೀತಿ ತಬ್ಬುಗೆಯಲ್ಲ. ಪ್ರೀತಿ ಉನ್ಮಾದವಲ್ಲ. ಪ್ರೀತಿ ನಿಟ್ಟುಸಿರೂ ಅಲ್ಲ. ಅದು ಸದ್ದಿಲ್ಲದೆ ಸಂಭವಿಸುವ ಸಂಗತಿಯಾಗಿದೆ. ಆದ್ದರಿಂದ ರವಿ ಬೆಳಗೆರೆಯವರ 'ಹೇಳಿ ಹೋಗು ಕಾರಣ' ಕಾದಂಬರಿಯ ಪ್ರಮುಖ ಪಾತ್ರ ಪ್ರಾರ್ಥನಾ ತನ್ನ ತಂದೆ ಮತ್ತು ಅತ್ತಿಗೆಯ ಸಂಬಂಧ ತಿಳಿದು ಆ ಮನೆಯನ್ನು ದ್ವೇಷಿಸುತ್ತಾ ಮುಂದೆ ಏನು ಎಂಬುದನ್ನು ಯೋಚಿಸದೆ ಮನೆ ಬಿಟ್ಟು ಹೊರನಡೆದಳು. ಆವಾಗ ಪರಿಚಯವಾದವನೇ ಹಿಮವಂತ. ಈತ ಪರಿಚಯವಾದ ಮೇಲೆ ಮುಂದಿನ ಗೊತ್ತು ಗುರಿ ಇಲ್ಲದೇ ಚನ್ನರಾಯ ಪಟ್ಟಣದಿಂದ ಮಧ್ಯರಾತ್ರಿಯಲ್ಲೆ ಆತನ ಜೊತೆ ನಡೆದುಕೊಂಡು ಶಿವಮೊಗ್ಗೆಯನ್ನು ಸಮೀಪಿಸುತ್ತಾರೆ. ಪ್ರಾರ್ಥನಾಳ ಕಾಲ ಹೆಬ್ಬೆರಳು ಒಡೆದು ರಕ್ತ ಸೋರುತ್ತಿರುವುದನ್ನು ಕಂಡ ಹಿಮವಂತ ಯಾವ ಜನ್ಮದ ಋಣಾನುಬಂಧವೋ ಗೊತ್ತಿಲ್ಲ. ಆಕೆಗೆ ಧೈರ್ಯ ತುಂಬುತ್ತಾನೆ. ಇಲ್ಲಿ ಯಾವುದೇ ರೀತಿಯ ಪ್ರೀತಿ ಪರಿಚಯಗಳಿರದಿದ್ದರು ಮಾನವೀಯತೆಯ ಸಂಬಂಧವನ್ನು ಗುರುತಿಸಬಹುದಾಗಿದೆ.

ಒಂದು ಹೆಣ್ಣು ಪರ ಊರಿಗೆ ಹೋಗಬೇಕಾದರೆ ನೂರು ಸಲ ವಿಚಾರಿಸುವ ಮನೋಭಾವದವರಿರುವಾಗ ಇದ್ಯಾವುದನ್ನು ಲೆಕ್ಕಿಸದೆ ಅವಳು ಶಿವಮೊಗ್ಗೆಯ ಶಾಂತಯ್ಯನವರ ಮನೆಯಲ್ಲಿ ಹಿಮವಂತ ಬಾಡಿಗೆಗೆ ಇದ್ದ ಮನೆಗೆ ಬಂದು ತಲುಪಿದರು. ಇಬ್ಬರಲ್ಲಿಯು ಯಾವುದೇ ಸಂಕೋಚದ ಮನೋಭಾವವಿಲ್ಲ. ಒಬ್ಬರನೊಬ್ಬರು ತುಂಬಾ ಅರ್ಥ ಮಾಡಿಕೊಂಡವರಂತೆ ಇರುತ್ತಾರೆ. ಆ ಮನೆಯಲ್ಲಿ ಬಟ್ಟೆ ಬದಲಿಸಿಕೊಳ್ಳುವಾಗಲು ಯಾವುದೇ ಸಂಕೋಚವಿಲ್ಲದೆ ಹೀಗೆ ಹೇಳುತ್ತಾಳೆ. "ನಾನು ಪೆಟಿಕೋಟಿನ ಮೇಲೆ ಜುಬ್ಬಾ ಹಾಕಿಕೋತಿನಿ". ಹೆಂಗಸರು ಸಂಕೋಚ ಮಾಡಿಕೊಂಡು ಲೈಟ, ಆರಿಸಿಕೊಳ್ಳುವುದಿಲ್ಲ. ಹೆದರಿಕೊಂಡು ದೀಪ ತೆಗೀತಾರೆ ನಂಗೆ ನಿನ್ನ ಬಗ್ಗೆ ಹೆದರಿಕೆಗಳಿಲ್ಲ. ನನ್ನ ಬಗ್ಗೆ ನಂಬಿಕೆಯಿದೆ. ಅಂದವಳೆ ದೀಪದ ಬೆಳಕಿನಲ್ಲೇ ಸಂಕೋಚವಿಲ್ಲದೆ ಬಟ್ಟೆ ಬದಲಿಸಿದಳು. ಮಾನವ ಸಂಬಂಧಗಳ ಬೆಸುಗೆ ಯಾವ ರೀತಿಯಿಂದ ಬೆಸೆದುಕೊಳ್ಳುತ್ತದೆಯೋ ತಿಳಿಯುವುದಿಲ್ಲ. ಒಂದಿಲ್ಲೊಂದು ಘಟನೆಯಿಂದ ಅಪರಿಚಿತರು ಪರಿಚಿತವಾಗಿ ಇಷ್ಟೊಂದು ನಂಬಿಕೆ, ಅಭಿಮಾನ, ಗೌರವ,

ಆತ್ಮವಿಶ್ವಾಸದಿಂದಿರಲು ಸಾಧ್ಯವಾಗಬಹುದು ಎಂಬುದನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದು.

ಒಂದು ಜೀವ ನನ್ನನ್ನು ನಂಬಿಕೊಂಡು ಜೊತೆ ಬಂದಿದೆ. ಅದರ ಆಸೆ-ಆಕಾಂಕ್ಷೆಗಳೇನು ಎಂದು ವಿಚಾರಿಸಿದಾಗ ಹಿಮವಂತ ನಿನಗೆ ಏನಾಗಬೇಕಂತ ಆಸೆಯಿದೆ ಪ್ರಾರ್ಥನಾ? ಎಂದು ಕೇಳಿದಾಗ ನಾನು ಡಾಕ್ಟರ್ ಆಗಬೇಕು ಹಿಮವಂತ ಲಕ್ಷಾಂತರ ಮಕ್ಕಳಿಗೆ ಅಮ್ಮನಾಗಬಲ್ಲಂತಹ ಮಕ್ಕಳ ಡಾಕ್ಟ್ರು. ಆದೇನಾ ಹಿಮವಂತ? ಎಂದು ಪ್ರಶ್ನಿಸುತ್ತಾಳೆ. ಚಿಕ್ಕ ಮಕ್ಕಳು ದೇವರ ಸಮಾನವೆಂದು ಭಾವಿಸುವುದು ಭಾರತೀಯ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದು. ಅಂತಹ ವಿಶಾಲವಾದ ಆಸೆ ಮತ್ತು ಕನಸು ಕಾಣುತ್ತಿರುವ ಅವಳಿಗೆ ಆಗುತ್ತಿಯಾ ಅದರಲ್ಲಿ ಯಾವುದೇ ಸಂಶಯವೆ ಬೇಡವೆಂದ. ಆದ್ರೆ ಡಾಕ್ಟ್ರು ಆಗೋದಕ್ಕೆ ಓದೋದು, ಓದಿಸೋದು ಸಾಮಾನ್ಯ ಕೆಲಸವಾ! ಅದಕ್ಕೆ ಎಷ್ಟೊಂದು ದುಡ್ಡು ಖರ್ಚಾಗುತ್ತದೆ ಎಂಬುದು ಹಿಮವಂತ ಗೊತ್ತಿಲ್ಲದ ಮನುಷ್ಯ. ಆತನ ಹತ್ತಿರ ದುಡ್ಡು ಇಲ್ಲ. ಆದರೆ ಹೇಗಾದರೂ ಮಾಡಿ ಅವಳನ್ನು ಡಾಕ್ಟರ್‌ಳನ್ನಾಗಿ ಮಾಡಬೇಕು ಎಂಬ ದೃಢ ನಿರ್ಧಾರಮಾಡಿ ತನಗೆ ಗೊತ್ತಿದ್ದ ವೇಶಾವೃತ್ತಿಯ ಕಾವೇರಮ್ಮನ ಕದ ತಟ್ಟುತ್ತಾನೆ. ಕಾವೇರಮ್ಮನಿಗೆ ಹಿಮವಂತನೆಂದರೆ ಭಗವಂತ, ದೇವರು ಎಂದೇ ನಂಬಿದವಳು. ತನ್ನ ದೇವರು ನನ್ನನ್ನು ನಂಬಿಕೊಂಡು ಮನೆ ಬಾಗಿಲಿಗೆ ಬಂದಿದ್ದಾನೆಂದುಕೊಂಡು ಒಳಕರೆದಳು. ಆವಾಗ ಹಿಮವಂತ ನಿನ್ನಿಂದ ನನಗೊಂದು ಕೆಲಸವಾಗಬೇಕು. ನನ್ನನ್ನೆ ನಂಬಿ ಬಂದ ಹುಡುಗಿಗೆ ಮೆಡಿಕಲ್ ಸೀಟು ಕೊಡಿಸಬೇಕು ಎಂದು ವಿನಂತಿಸುತ್ತಾನೆ. ಯಾಕೆಂದರೆ ಕಾವೇರಮ್ಮ ಇಡೀ ಶ್ರೀಮಂತ ವರ್ಗಕ್ಕೆ ಬೇಕಾದವಳು. ಅದರಲ್ಲೂ ದಾವಣಗೇರೆಯ ಮೆಡಿಕಲ್ ಕಾಲೇಜಿನ ಡೈರೆಕ್ಟರ್‌ಗಳು ಅವಳ ಹತ್ತಿರ ಬರುತ್ತಿದ್ದರು. ಇಷ್ಟೆಲ್ಲ ಗೊತ್ತಿದ್ದ ಕಾವೇರಮ್ಮ ತಕ್ಷಣ ಒಪ್ಪಿಕೊಂಡಳು. ನಂತರ ಹೊರನಡೆದು ಬಂದು ಬಿಟ್ಟ ತಾನು ಬಾಡಿಗೆ ಇದ್ದ ಮನೆಯ ಯಜಮಾನ ಶಾಂತಪ್ಪನಲ್ಲಿಗೆ ಬಂದು ಗಾದಿಗೊಪ್ಪದ ಖಾಲಿ ಜಮೀನಿನಲ್ಲಿ ಎಸ್ಟೇಟ್ ನಿರ್ಮಾಣ ಮಾಡ್ತಿನಿ ಅಲ್ಲಿಯವರೆಗೂ ಪ್ರಾರ್ಥನಾ ಓದಿಗೆ ಅಂತ ಅವಶ್ಯಕತೆ ಬಿದ್ದರೆ ಒಂದು ಲಕ್ಷ ರೂಪಾಯಿ ಕೊಡಬೇಕು ಎಂದು ವಿನಂತಿಸಿಕೊಂಡಿದ್ದ.

ನನಗೋಸ್ಕರ ಇಷ್ಟೊಂದು ತೊಂದರೆ ತೆಗೆದುಕೊಳ್ಳುತ್ತಿರುವ ಹಿಮವಂತನನ್ನೇ ಪ್ರೀತಿಸಬೇಕೆಂದು ನಿರ್ಧರಿಸಿದ ಪ್ರಾರ್ಥನಾ ಒಂದು ದಿನ ಕೇಳಿಯೆ ಬಿಟ್ಟಳು. ಮನೆಯಿಂದ ಹೊರಬಿದ್ದ ಹುಡುಗಿನ ಇಲ್ಲಿ ತನಕಾ ಕರ್‍ಕೊಂಡು ಬಂದು ನಿನ್ನನ್ನ ಡಾಕ್ಟ್ರ ಮಾಡ್ತಿನಿ ಅಂತ ಓಡಾಡ್ತಿದೀಯಲ್ಲ? ನಿನಗ್ಯಾವ ಅವಶ್ಯಕತೆ ಇತ್ತು ಹಿಮವಂತ? ಕಡೆ ಪಕ್ಷ, ನಿನಗೆ ನನ್ನ ಮೇಲಿರುವುದು ಪ್ರೀತಿ ಅಂತ ಒಪ್ಕೋತಿಯಾ? ಎಂದು ಕೇಳಿದಳು. ಪ್ರೀತಿ ಹೌದೆಂದು ಒಪ್ಪಿಕೊಂಡರೆ ಎಲ್ಲಿ ಇವಳು ಡಾಕ್ಟರ್ ಆಗುವ ಕನಸು ಕಮರಿ ಹೋದೀತು ಎಂದು ನಿರ್ಧರಿಸಿ, ಅವಳು ಹೇಳಿದಕ್ಕೆ ತಲೆ ಕೆಡಿಸಿಕೊಳ್ಳದೆ ಮೊದಲು

ನೀನು ಡಾಕ್ಟರ್ ಆಗು. ಅದಕ್ಕೆ ಬೇಕಾದ ಸೌಕರ್ಯ ನಾನು ಒದಗಿಸುತ್ತೇನೆಂದಷ್ಟೆ ಹೇಳಿ ಸುಮ್ಮನಾದನು.

ರವಿ ಬೆಳಗೆರೆಯವರ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಪ್ರಮುಖ ಪಾತ್ರ ಶ್ರಾವಣಿಯದು. ಪವರ್ ಟಾವರ್ಸ್‌ನ ಮಾಲಿಕ ಜಗನ್ಮೋಹನರಾವ್‌ನ ಏಕಮಾತ್ರ ಪುತ್ರಿ. ಇದು ಸಮಾಜದಲ್ಲಿ ಜನರಿಗೆ ಗೊತ್ತಿರುವ ವಿಚಾರ. ಆದರೆ ಶ್ರಾವಣಿ ತಾಯಿಯ ಅಕ್ರಮ ಸಂಬಂಧದಿಂದ ಇವಳು ಜನಿಸಿರುತ್ತಾಳೆ. ಅದು ತಾಯಿ ಮತ್ತು ಮನೆಯವರಿಗೆ ಮಾತ್ರ ಗೊತ್ತಿರುವ ವಿಚಾರ ಆದರೆ ಕಾದಂಬರಿ ಸಮಾಜ ವಿಚಾರದಲ್ಲಿ ಅವಳು ಆಗರ್ಭ ಶ್ರೀಮಂತನ ಮಗಳು. ಪ್ರೀತಿ ಎಂಬುವುದು ಸದ್ದಿಲ್ಲದೆ ಸಂಭವಿಸುವ ಸಂಗತಿ ಎಂಬುದು ಈ ಕಾದಂಬರಿಯ ಸ್ತ್ರೀ ಪಾತ್ರಕ್ಕೂ ನೂರಕ್ಕೆ ನೂರರಷ್ಟು ಒಪ್ಪುವ ಸಂಗತಿಯಾಗಿದೆ. ಶ್ರಾವಣಿ ವಾರ್ಡಿ ಜೇಮ್ಸ್ ಕಾಲೇಜಿನ ವಿದ್ಯಾರ್ಥಿನಿ. ಇವಳ ಗೆಳತಿ ವಳ್ಳಿ ಶಿಶಿರಚಂದ್ರನ ಬಗ್ಗೆ ಮಾತನಾಡುತ್ತಿರುತ್ತಾಳೆ. ಶ್ರಾವಣಿ ತುಂಬಾ ಸೌಂದರ್ಯ ಯುವತಿ ಗೆಳತಿಯರೊಂದಿಗೆ ಬಂದು ಅವರ ಜೊತೆಯಲ್ಲೆ ಮರಳಿ ಹೋಗುತ್ತಿದ್ದಳು. ಒಂದು ದಿನ ಶ್ರಾವಣಿ ಶಿಶಿರಚಂದ್ರನ ಕಣ್ಣಿಗೆ ಬಿದ್ದಳು. ಶಿಶಿರಗೆ ಯಾವಾಗಲೂ ಬೆಟ್ ಕಟ್ಟುವ ಹಂಬಲ. ಮೂರು ವರ್ಷ ಡಿಗ್ರಿ ಮುಗಿಯುವದರೊಳಗೆ ಇವಳನ್ನು ಲವ್ ಮಾಡುತ್ತೇನೆ ಎಂದು ಗೆಳೆಯರೊಂದಿಗೆ ಬೆಟ್ ಕಟ್ಟಿದ. ಇದರ ಹಿಂದೆ ಶ್ರಾವಣಿ ಮನೆಯಲ್ಲಿದ್ದ ಗಿರಿ ಅಂಕಲ್ ಕೈವಾಡವು ಇರುವುದು. ಶಿಶಿರ ಒಬ್ಬ ವೇಶ್ಯೆಯ ಮಗನಾಗಿದ್ದನ್ನಲ್ಲದೆ ಕಳ್ಳತನದಲ್ಲಿಯೂ ಚಾಣಾಕ್ಷನಾಗಿದ್ದ.

ನಾಳೆ ಅಮ್ಮನ ಬರ್ತಡೇ! ಹಾಗಂತ ನೆನಪಾಗುತ್ತಿದ್ದಂತೆಯೇ ಅದೊಂದು ವಿಲಕ್ಷಣ ಭಾವ ಅವಳನ್ನು ಆವರಿಸಿಕೊಂಡು ಬಿಟಿತು. ಸಾಯಂಕಾಲವೇ ನೆನಪಾಗಿದ್ದರೆ ವಳ್ಳಿಯ ಜೊತೆಗೆ ಹೋಗಿ ಗಾಂಧಿ ಬಜಾರ್ ನಿಂದ ಅಮ್ಮನಿಗೇನಾದರೂ ಗಿಫ್ಟು ತರಬಹುದಾಗಿತ್ತು. ಅಂತ ಯೋಚಿಸಿದಳು. ನಂತರ ಮಳೆ ನಿಂತಮೇಲೆ ಕೈನಿಯ ಸೀಟಿನಡಿಯಿರುವ ಬಾಕ್ಸ್‌ನಲ್ಲಿ ರೈನ ಕೋಟೇನಾದರೂ ಇಟ್ಟು ಮರೆತಿದ್ದೆನಾ ಎಂಬ ಅನುಮಾನದಿಂದ ತೆಗೆದು ನೋಡಿದಳು. ಅದರಲ್ಲಿ ಒಂದು ಗಿಫ್ಟು ಇತ್ತು. ಅದರೊಂದಿಗೆ "ಬರ್ತಡೆ ದಿವಸ ಎಂತಹ ತಾಯಿಯೂ ಕೆಲವು ಮಟ್ಟಿಗೆ ಮಗಳಾಗ ಬಯಸುತ್ತಾಳೆ. ಅಂತಹದೊಂದು ಸಂತೋಷ ಆಕೆಯ ಕಣ್ಣುಗಳಲ್ಲಿ ಮಿನುಗಿ ಎಷ್ಟು ವರ್ಷಗಳಾಗಿವೆಯೋ?" ಎಂಬ ಪತ್ರವಿತ್ತು. ಇದನ್ನು ಕಂಡು ಆಶ್ಚರ್ಯ ಚಕಿತಳಾದ ಶ್ರಾವಣಿ ಇದು ಶಿಶಿರಚಂದ್ರ ಬರೆದ ಪತ್ರ ಎಂದು ನಿರ್ಧರಿಸಿದಳು. ನಂತರ ಎಂದೂ ಕಾಲೇಜು ಕ್ಲಾಸಿನೊಳಕ್ಕೆ ಕಾಲಿಟ್ಟಿರದ ಶಿಶಿರ ಇಂಗ್ಲೀಷ್ ಕ್ಲಾಸಿಗೆ ಬಂದು ಕೂತುಕೊಂಡ ಶ್ರಾವಣಿ ತನ್ನ ಮೇಯ್ಲ್‌ನ ಪಾಸ್‌ವರ್ಡ್ ಬದಲಾಯಿಸಬೇಕು ಅಂತಾ ನೆನಪಾಗಿ ಶ್ರಾವಣಿ ತನಗೆ ಅರಿವಿಲ್ಲದೆ ಸರಸರನೆ ಆ ಎಂಟು ಅಕ್ಷರಗಳನ್ನು ಟೈಪ್ ಮಾಡಿದಳು. ಅದನ್ನು ಓದಿಕೊಂಡು ತಾನೇ ಬೆಚ್ಚಿ ಬಿದ್ದಿದಳು. ಅದು ಈ ಪಾರ್ಸ್‌ವರ್ಡ್‌ಗೂ, ಬೆಳಗ್ಗೆ ಕ್ಲಾಸ್ ರೂಮಿನಲ್ಲಿ ತಾನು ಗಮನಿಸಿದ ಶಿಶಿರ್‌ನ ತಣ್ಣನೆಯ, ಪ್ರಶಾಂತವಾದ

ಕಣ್ಣುಗಳಿಗೂ ಸಂಬಂಧವಿದೆಯಾ ಎಂದು ಚಿಂತೆಗೀಡಾದಳು. ನಂತರ ಇದುವೇ ಪ್ರೀತಿಗೆ ನಾಂದಿಯಾಯಿತು.

ರವಿ ಬೆಳಗೆರೆಯವರ ಎರಡು ಕಾದಂಬರಿಗಳ ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಸಾಮಾನ್ಯವಾಗಿ ಕೆಲವೊಂದು ಭಿನ್ನತೆಗಳನ್ನು ಗುರುತಿಸಬಹುದು. 'ಹೇಳಿ ಹೋಗು ಕಾರಣ' ಕಾದಂಬರಿಯ ಪ್ರಾರ್ಥನಾ ಬಡತನದಲ್ಲಿ ಹುಟ್ಟಿ ಗೆಳೆಯನೊಂದಿಗೆ ಕೂಡಿ ಪ್ರೀತಿಗೆ ಪಾತ್ರಳಾಗುತ್ತಾಳೆ. ಆದರೆ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಶ್ರಾವಣಿ ಶ್ರೀಮಂತ ವರ್ಗಕ್ಕೆ ಸೇರಿದವಳು. ಆದರೆ ಆಕೆಯಲ್ಲಿ ಶ್ರೀಮಂತಿಕೆಯ ಗರ್ವವಿಲ್ಲ. ಆದರೆ ತಾನು ಶಿಶಿರಚಂದ್ರನನ್ನು ಅದು ಸರಗಳ್ಳನನ್ನು ಪ್ರೀತಿಸಬಹುದಾ ಎಂಬುದನ್ನು ಯೋಚಿಸದೆ ಪ್ರೀತಿಯಲ್ಲಿ ತನಗರಿವಿಲ್ಲದಂತೆ ತನ್ಮಯಲಾಗಿರುವುದು ಕಂಡುಬರುತ್ತದೆ. ಶ್ರಾವಣಿ ಮನಸ್ಸಿನಲ್ಲೇ ಪ್ರೀತಿಯನ್ನು ಅದಿಮಿಡುತ್ತಾಳೆ, ಪ್ರಾರ್ಥನಾ ಬಹಿರಂಗವಾಗಿ ವ್ಯಕ್ತಪಡಿಸುತ್ತಾಳೆ. ಪ್ರೀತಿ ಯಾವುದೇ ಒಂದು ಕ್ಷಣದಲ್ಲಿ ಹುಟ್ಟಿಕೊಳ್ಳಬಹುದು ಎಂಬುದನ್ನು ರವಿಯವರ ಎರಡು ಕಾದಂಬರಿಯ ಸ್ತ್ರೀ ಪಾತ್ರಗಳನ್ನು ಹೋಲಿಸಿದಾಗ ತಿಳಿದುಬರುತ್ತದೆ.

ಸಮಾಜದಲ್ಲಿ ಮಾನವ ಸಂಬಂಧಗಳು ಹೇಗೆ ಬೆಸೆದುಕೊಳ್ಳುತ್ತವೆ ಎಂಬುದನ್ನು ಮೇಲಿನ ಎರಡು ಕಾದಂಬರಿಯ ಸ್ತ್ರೀ ಪಾತ್ರಗಳಿಂದ ಗುರುತಿಸಬಹುದಾಗಿದೆ. ಮೊದಲಿಗೆ ಹೇಳಿದಂತೆ ಪ್ರೀತಿಯೆಂದರೆ ಸದ್ದಿಲ್ಲದೇ ಸಂಭವಿಸುವ ಸಂಗತಿಯಂತೆ ಇಬ್ಬರಲ್ಲೂ ಪ್ರೀತಿ ಎಂಬುದು ಹುಟ್ಟಿದರು. ಒಬ್ಬರಿಗೊಬ್ಬರು ಒಪ್ಪಿಕೊಳ್ಳದೆ ಸಾಗಿದ ದೋಣಿ ಮುಂದಿನ ದಾರಿಗೆ ಕಾತರಿಸುತ್ತಿವೆ. ಕೊನೆಗೂ ಡಾಕ್ಟರ್ ಎಂಟ್ರೆನ್ಸ್ ಪರೀಕ್ಷೆಯ ಫೀ ಕಟ್ಟಿ ಬಂದ ಹಿಮವಂತ. ಪ್ರಾರ್ಥನಾಳಿಗೆ ಓದಲು ಬೇಕಾದ ಸೌಲಭ್ಯವನ್ನು ಒದಗಿಸುತ್ತಾನೆ. ಮುಂಜಾನೆಯಿಂದ ಸಂಜೆಯವರೆಗೂ ದಾವಣಗೆರೆ ಗ್ರಂಥಾಲಯದಲ್ಲಿಯೇ ಶ್ರದ್ದೆಯಿಂದ ಓದುತ್ತಿದ್ದ ಅವಳನ್ನು ಸಾಯಂಕಾಲ ತಾನೆ ಮನೆಗೆ ಕರೆದುಕೊಂಡು ಬರುತ್ತಿದ್ದ. 'ಪ್ರಯತ್ನವಿಲ್ಲದೆ ಏನನ್ನು ಸಾಧಿಸಲಾಗುವುದಿಲ್ಲ' ಎಂಬ ರವಿ ಬೆಳಗೆರೆಯವರ ಸಿದ್ಧಾಂತದಂತೆ ಸತತ ಪ್ರಯತ್ನ ಶ್ರದ್ದೆಯಿಂದ ಓದಿದ ಪ್ರಾರ್ಥನಾ ಕೊನೆಗೂ ಎಂಟ್ರೆನ್ಸ್ ಪರೀಕ್ಷೆ ಮುಗಿಸಿದ ದಿನ ಗಾಜನೂರು ಡ್ಯಾಮ ನೋಡಲು ಹೋದಾಗ ಹಿಮವಂತ ಪಕ್ಕದಲ್ಲಿಯೇ ಕುಳಿತು ಪ್ರಾರ್ಥನಾಳ ಭುಜದ ಮೇಲೆ ಮೆಲ್ಲನೆ ಕೈ ಹಾಕಿದ. ಕೈ ಭಾರವಾಗುತ್ತದೆಯೋ ಏನೋ ಅನಿಸತೊಡಗಿ, ತನ್ನ ಭಾವೋದ್ವೇಗವನ್ನು ಈ ಪರೀಕ್ಷೆ ಮುಗಿಯಲೆಂದೆ ಅದುವಿಟ್ಟಿದ್ದನಾ? ಇವತ್ತು ಅದೆಲ್ಲ ಕಟ್ಟೆಯೊಡೆದು "ಪ್ರೀತಿಯಿಲ್ಲದಿದ್ದರೆ ನಿನ್ನನ್ನು ಇಷ್ಟು ದೂರ ಕರೆತರುತ್ತಿದ್ದೆನೇನೆ ಹುಚ್ಚಿ! ಇನ್ನು ಸೆಡವು ಸಾಕು ಐ ಲವ್ ಯೂ" ಅಂದು ಬಿಡುತ್ತಾನಾ? ಯೋಚಿಸಿದಳು. ಎದೆಯಿಂದ ಉಬುಕೆದ್ದು ಬಂದ ಮಾತುಗಳನ್ನು ಹೇಳಲಾಗದೆ ಚಡಪಡಿಸುತ್ತಿದ್ದಾನೆಯೋ? ನಾನೇ ಕೇಳಿ ಬಿಡಲಾ ಎಂದು ಆಲೋಚಿಸಿ ಡು ಯು ಲವ್ ಮಿ ಹೀಮೂ ಎಂದು ಮತ್ತೇ ಪ್ರೀತಿಯ ಪ್ರಸ್ತಾಪ ತೆಗೆದಳು.

ಆದರೆ ರವಿಯವರ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಶ್ರಾವಣಿಯ ಪಾತ್ರ ಮಾತ್ರ ವಿಶೇಷ ಒಲವಿನಿಂದ ಕೂಡಿದೆ. ಶಿಶಿರಚಂದ್ರ ಶ್ರಾವಣಿಯನ್ನು ಬೆಟ್ ಗೊಸ್ಕರ ಪ್ರೀತಿಸುತ್ತಿರುತ್ತಾನೆ. ಆದರೆ ಶ್ರಾವಣಿ ನಿಜವಾಗಿಯು ಮೌನದಲ್ಲಿಯೇ ಪ್ರೀತಿಯನ್ನು ಒಪ್ಪಿಕೊಂಡಿರುತ್ತಾಳೆ. ಪ್ರತಿ ದಿನ ಶಿಶಿರ ಶ್ರಾವಣಿ ಬಂಗಲೆಯಿಂದ ಅನತಿ ದೂರದ ಬಯಲಿನಲ್ಲಿ ಬಂಗಲೆಯ ಕಿಟಕಿಯಲ್ಲಿ ಆಕೆಗೆ ಕಾಣದಂತೆ ನಿಂತಿದ್ದ. ಆತನನ್ನು ನೋಡಿದ ಅವಳೆಡೆಗೆ ಕೈ ಬೀಸಿದ. ರಪ್ಪನೆ ಕಿಟಕಿಯ ಕದವೆಳೆದುಕೊಂಡಳು. ಆದರೆ ಪ್ರೀತಿ ಒಮ್ಮೆ ಉದ್ಭವವಾಗಿ ಬಿಟ್ಟರೆ ಅದನ್ನು ಮರೆಯಲು ಸಾಧ್ಯವೇ ಇಲ್ಲವೆಂಬಂತೆ ರಾತ್ರಿಯ ಜಾವದಲ್ಲಿ ಎದ್ದು ಹೋಗಿ ಕಿಟಕಿಗೆ ಹಾಕಿದ್ದ ಭಾರವಾದ ಕರ್ಟನ ಒಮ್ಮೆ ಸರಿಸಿ ನೋಡಿದಳು ಶಿಶಿರ್ ಅಲ್ಲಿರಲಿಲ್ಲ. ಆದರೆ ಮಾರನೆಯ ಬೆಳಗ್ಗೆ ಅವನು ಮತ್ತೆ ಮಲ್ಲೇಶ್ವರದ ರಸ್ತೆಯ ತಿರುವಿನಲ್ಲಿ ಇದಿರಾಗಿದ್ದ. ಶಿಶಿರ್ ಎಂಬ ಆಫ್ಟರ್ ಆಲ್ ಸರಗಳ್ಳ ಕಳೆದ ಎರಡು ದಿನಗಳಿಂದ ತನ್ನನ್ನೇಕೆ ಈ ಪರಿ ಆವರಿಸಿಕೊಂಡಿದ್ದಾನೆ? ಇವತ್ತು ಕ್ಲಾಸಿನಲ್ಲಿ ಕುಳಿತು ಕೇಳಿದ ಪಾಠ ಮನಸ್ಸಿಗೆ ನಾಟಲಿಲ್ಲ ಎಂದು ಪ್ರೀತಿಯ ಬಲೆಯಲೆ ಸಿಕ್ಕಿ ಒದ್ದಾಡುತ್ತಿದ್ದಳು ಶ್ರಾವಣಿ.

'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಬಹಿರಂಗವಾಗಿಯೇ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ ಪ್ರಾರ್ಥನಾ. ಆದರೆ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಶ್ರಾವಣಿ ಪ್ರೀತಿಯ ಅಲೆ ಉಕ್ಕುತ್ತಿರುತ್ತದೆ ಆದರೆ ಬಹಿರಂಗವಾಗಿ ಎಲ್ಲಿಯೂ ವ್ಯಕ್ತಪಡಿಸುವುದಿಲ್ಲ. ಅದು ಮೌನ ಪ್ರೀತಿ. ಪ್ರೀತಿ ಉದ್ಭವವಾಗಲಿಕ್ಕೆ ಯಾವುದೇ ಜಾತಿ, ಆಸ್ತಿ, ಅಂತಸ್ತು, ಮೇಲು-ಕೀಳು, ಸೌಂದರ್ಯ ಇವ್ಯಾವು ಅಷ್ಟೊಂದು ಮಹತ್ವ ಪಡೆದುಕೊಳ್ಳುವುದಿಲ್ಲ. ಇದನ್ನು ರವಿಯವರು ತಮ್ಮ ಕಾದಂಬರಿಗಳಲ್ಲಿ ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ಆದರೆ ಶ್ರಾವಣಿ ತನಗೆ ಗೊತ್ತಿಲ್ಲದೆ ಪ್ರೀತಿಯ ಬಲೆಗೆ ಬಿದ್ದಿದ್ದಾಳೆ. ಶಿಶಿರ ಮಾತ್ರ ಬೆಟ್‌ಗೋಸ್ಕರ ಪ್ರೀತಿಸುತ್ತಿದ್ದಾನೆ ಎಂಬುದು ಗೊತ್ತಿಲ್ಲದ ವಿಚಾರ. ಈ ಸಂಗತಿಯನ್ನು ಅಷ್ಟೇ ಜಾಣ್ಮೆಯಿಂದ ಚಿತ್ರಿಸಿದ್ದಾರೆ.

'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಪ್ರಾರ್ಥನಾಳ ಮೇಲೆ ಹಿಮವಂತನಿಗೆ ಪ್ರೀತಿ ಇತ್ತು. ಆದರೆ ಎಂ.ಬಿ.ಬಿ.ಎಸ್. ಮುಗಿಯಲಿ, ಡಾಕ್ಟರಿಕೆಯ ಕೋರ್ಸೆಂದರೆ ಸುಮ್ಮನೆ ಅಲ್ಲ. ಅವಳು ಓದು ಮುಗಿಸಿ ಹಿಂತಿರುಗಲಿ ಆವಾಗ ಪ್ರೀತಿಯ ವಿಷಯ ಹೇಳಿದರಾಯಿತು ಎಂದು ಸುಮ್ಮನಿದ್ದ. ಮನೆಗೆ ಬಂದ ನಂತರ ಹಿಮೂ ನೀನು ಸ್ನಾನ ಮಾಡಿ ಮುಗಿಸು ನಾನು ನಂದಕ್ಕನ ಮನೇಲಿ ಕೂತು ಹೂ ಕಟ್ಟಿ ಅವರಿಗರ್ಧ ಕೊಟ್ಟ ಬರ್ತೀನಿ ಎಂದಳು. 'ಹೂ ಕಟ್ಟೋಕೆ ನಿಂಗೆ ಪ್ರೈವೆಸಿ ಬೇಕು ಅನಿಸಿದ್ದರೆ ನಂದಕ್ಕನ ಮನೆಗೆ ಹೋಗು. ಆದರೆ ನನ್ನ ಸ್ನಾನಕ್ಕೆ ಪ್ರೈವೆಸಿಯೇನೋ ಬೇಕಾಗಿಲ್ಲ. ನೀನು ಇಲ್ಲೇ ಕೂತು ಹೂ ಕಟ್ಟಿದರೆ ನಂಗೂ ಸಂತೋಷವಾಗುತ್ತೆ' ಅಂದವನೆ ಸ್ನಾನಕ್ಕೆ ಹೋದ. ಆವೇಶಕ್ಕೆ ಕರಗುವ ವ್ಯಕ್ತಿತ್ವವೇ ಅಲ್ಲ ಹಿಮವಂತನದು. ಅವನು ಹೆಸರಿಗೆ ಮಾತ್ರ ಹಿಮವಂತ. ಸಂಯಮದ ವಿಷಯದಲ್ಲಿ ಕಲ್ಲುಬಂಡೆ. ಅವನ ಜಾಗದಲ್ಲಿ ಮತ್ತೊಬ್ಬ ಗಂಡಸಿದ್ದಿದ್ದರೆ ಇಷ್ಟು ಹೊತ್ತಿಗೆ ಆ ಹರವಾದ ಎದೆಯ ಮೇಲೆ

ತಾನು ಮುಖವಿಕ್ಕಿ ಮಲಗಿ ಕಾಲವೇ ಆಗಿರುತ್ತಿತ್ತು. ಒಂದೇ ಒಂದು ಸಲ ಎದ್ದು ಹೋಗಿ ಹಿಮವಂತನ ಬೆನ್ನ ಉಜ್ಜೋಣವೆಂದುಕೊಂಡಳು, ಧೈರ್ಯವಾಗಲಿಲ್ಲ. ಅಷ್ಟೊತ್ತಿಗೆ ಹಿಮವಂತ 'ಸ್ನಾನ ಮುಗಿದ ಮೇಲೆ, ನಾನು ಹೋಗಿ ಬರ್ತೇನೆ' ಎಂದು ಮನೆಯಿಂದ ಹೊರಬಿದ್ದು ಗಾದಿಗೊಪ್ಪಕ್ಕೆ ಹೋಗಿ ಸಂಜೆ ಹೊತ್ತಿಗೆ ಮರಳಿ ಬಂದ ಊಟ ಮಾಡಿ ಭುಜಕ್ಕೆ ಭುಜ ತಾಕಿ ಮಲಗಿಕೊಳ್ಳುವ ಸಮಯದಲ್ಲಿ "ನಿನ್ನನ್ನು ಪ್ರೀತಿಸ್ತಿನಿ ಅಂತ ನಂಗೆ ಒಂದೇ ಒಂದು ಸಲ ಹೇಳೋಕೆ ನಿನಗೆ ಕಷ್ಟವಾಗ್ತದಾ ಹಿಮೂ.... ಎಂದಾಗ 'ಐ ಲವ್ ಯೂ ಪ್ರಾರ್ಥನಾ" ಅಂದವನೇ ಇದ್ದಕ್ಕಿದಂತೆ ಮಗ್ಗಲು ಬದಲಿಸಿ ಬಿಟ್ಟ. ಆದರೆ ಅವಳಿಗೆ ಬೆಳಗ್ಗೆ ಎಚ್ಚರವಾಗುವ ಹೊತ್ತಿಗೆ ದಿಂಬಿನ ಮೇಲೆ ಪುಟ್ಟ ಪತ್ರ. "ಒಲವಿನ ಪ್ರಾರ್ಥನಾ, ದೇವರು ರಾಕ್ಷಸನಾಗುವುದು ಇಂತಹ ನಿರ್ನಿದ್ರೆಯ ರಾತ್ರಿಗಳಲ್ಲೇನೇನೋ? ಆದರೆ ರಾಕ್ಷಸನಾಗುವುದನ್ನು ನಿಗ್ರಹಿಸಿಕೊಳ್ಳುವಷ್ಟು ವ್ಯವಧಾನ ಮತ್ತು ಸಂಯಮ ನಮ್ಮಿಬ್ಬರಲ್ಲೂ ಇತ್ತು. ಸ್ಪರ್ಶವೆಂಬುದು ಇವತ್ತಿನ ಮಟ್ಟಿಗೆ ಅಧಃಪತನದ ಮೊದಲ ಮೆಟ್ಟಿಲು. ನನಗೆ ನೀನು ಬೇಕು ಪ್ರಾರ್ಥನಾ. ನಿನೆಂದರೆ ದೇಹವಲ್ಲ. ನೀನೆಂದರೆ ಇವೆಲ್ಲವುದರ ಒಟ್ಟು ಮೊತ್ತ. ನಂಗೆ ಕೇವಲ ಪ್ರಾರ್ಥನಾ ಅಲ್ಲ. ಡಾಕ್ಟರ್ ಪ್ರಾರ್ಥನಾ ಬೇಕು. ಅಲ್ಲಿಯ ತನಕ ನಾನು ಕಾಯುತ್ತೇನೆ.

ಹಿಮೂ

ಆದರೆ ರವಿಯವರ ಇನ್ನೊಂದು ಕಾದಂಬರಿಯಾದ 'ನೀ ಹಿಂಗ ನೋಡಬ್ಯಾಡ ನನ್ನ'ದಲ್ಲಿ ಬರುವ ಶ್ರಾವಣಿಯ ಪಾತ್ರ ಇದಕ್ಕೆ ಸ್ವಲ್ಪ ಭಿನ್ನವಾಗಿ ಚಿತ್ರಿತಗೊಂಡಿದೆ. ಅವಳು ಪ್ರೀತಿಯ ಬಯಕೆಯಲ್ಲಿರುತ್ತಾಳೆ. ಆದರೆ ಎಲ್ಲಿಯೂ ಬಹಿರಂಗವಾಗಿ ವ್ಯಕ್ತಪಡಿಸುವುದಿಲ್ಲ. ಅವಳಲ್ಲಿ ಶ್ರೀಮಂತಿಕೆಯ ಅಹಂ ಕೂಡಾ ಕಂಡುಬರುವುದಿಲ್ಲ. ಒಂದು ರೀತಿಯ ಸಮಾನ ಮನಸ್ಕರಾದರು ಸಹಿತ ಶಿಶಿರನ ಮೇಲೆ ಅವಳಿಗೆ ಪ್ರೀತಿ ಇರುತ್ತದೆ. ಮೊದಲು ಆತನನ್ನು ದ್ವೇಷಿಸಿದ್ದು ನಿಜವಾದರು ಆ ದ್ವೇಷ ಬಾವವೇ ಪ್ರೀತಿಯಾಗಿ ಮಾರ್ಪಟ್ಟಿದ್ದರು. ಒಂದು ರೀತಿಯ ಸಂಕೋಚಭಾವದಿಂದ ಸುಮ್ಮನಿರುತ್ತಾಳೆ. ಒಮ್ಮೊಮ್ಮೆ ಆತನ ಮೇಲೆ ನನಗೇಕೆ ಇಷ್ಟೊಂದು ಒಲವು, ನಾನು ಆತನ ಹತ್ತಿರವಾಗುತ್ತಿದ್ದೆನಾ? ಎಂದು ದಿಗಿಲುಗೊಳ್ಳುವುದು ಉಂಟು. ರವಿ ಬೆಳಗೆರೆಯವರು ಈ ಇಬ್ಬಗೆಯ ಭಾವದಿಂದ ಸಂಪೂರ್ಣವಾಗಿ ಕೊನೆಯವರೆಗೂ ಹೊರಬರದಂತೆ ಶ್ರಾವಣಿಯ ಪಾತ್ರವನ್ನು ಚಿತ್ರಿಸಿರುವುದು ಅದ್ಭುತವೇ ಸರಿ. 'ಹೇಳಿ ಹೋಗು ಕಾರಣ' ಕಾದಂಬರಿಯ ಪ್ರಾರ್ಥನಾ ಪಾತ್ರದಲ್ಲಿ ಪ್ರೀತಿಯ ಹಂಬಲ, ವ್ಯಕ್ತಪಡಿಸಿಸುವಿಕೆ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಶ್ರಾವಣಿ ಪಾತ್ರದಲ್ಲಿ ತುಂಬದಿರುವುದು ಕಂಡುಬರುತ್ತದೆ. ಉದಾಹರಣೆಗೆ ಮುಂದೆ ಇದ್ದಾಗ ಕೆಲವೊಂದು ಸಾರಿ ದ್ವೇಷಿಸುತ್ತಿದ್ದ ಶ್ರಾವಣಿ ಹದಿನೈದು ದಿನ ಶಿಶಿರ ಕಣ್ಣಿಗೆ ಕಾಣದಾಗ ತನ್ನನ್ನು ಕೆಲವೇ ದಿನಗಳ ಮಟ್ಟಿಗೆ ಬೆನ್ನು ಬಿದ್ದದ್ದು, ಹಿಂಬಾಲಿಸಿ ಬಂದು ತನ್ನ ದಿನಚರಿಯೊಳಕ್ಕೆ ತನಗೇ ಗೊತ್ತಿಲ್ಲದೆ ದಾಖಲಾಗಿ, ಎಲ್ಲೋ ಅವ್ಯಕ್ತ ಸ್ತರದಲ್ಲಿ ತನ್ನನ್ನು ಸಣ್ಣಗೆ ಹೆದರಿಸಿ, ತನ್ನಿಂದ ನಿಂದನೆಗೊಳಗಾಗಿ,

ತನಗೋಸ್ಕರ ವಿಚಿತ್ರವಾದುದೊಂದು ಪ್ರಾಮಾಣಿಕ ಸಾಹಸವನ್ನು ಮಾಡಿದ ಶಿಶಿರಚಂದ್ರ ಎಂಬ ಮೃದು ಕಂಗಳ ಹುಡುಗ ಎಂದು ನೆನೆದುಕೊಳ್ಳುತ್ತಾಳೆ.

ಪ್ರೀತಿಸಿದವರು ದೂರವಾದಾಗ ಅದರ ಬೆಲೆ ಏನು ಎಂಬುದು ಗೊತ್ತಾಗುತ್ತದೆ ಎಂಬ ಮಾತಿನಂತೆ ಶಿಶಿರ ಕಾಣದಾದಾಗ ಅವಳ ಮನಸ್ಸಿನ ಆಳದಲ್ಲಿ ಆತ ಬೇರು ಊರುತ್ತಾನೆ ಎಂಬುದನ್ನು ಈ ಒಂದು ಪಾತ್ರದಿಂದ ತಿಳಿದುಕೊಳ್ಳಬಹುದು. ಶಿಶಿರ ಹದಿನೈದು ದಿನ ದೂರವಾದಾಗ ಮೊಟ್ಟ ಮೊದಲ ಬಾರಿಗೆ ಶಿಶಿರ ಅವಳ ಕಣ್ಣೆದುರು ಆಕಾಶ ಗಾತ್ರದ ಪ್ರಶ್ನೆಯಾಗಿ, ಸಮಸ್ಯೆಯಾಗಿ, ಚಿತ್ರವಾಗಿ, ನೆನಪಾಗಿ, ಕನಸಾಗಿ, ಚಡಪಡಿಕೆಯಾಗಿ ನಿಂತುಬಿಟ್ಟಿದ್ದ. ಶ್ರಾವಣಿ ಗೆಳತಿ ವಳ್ಳಿಯ ಕಣ್ಣಲ್ಲೊಂದು ತೀರದ ಆಶ್ಚರ್ಯವಿತ್ತು. ಶ್ರಾವಣಿ ಯಾವತ್ತೂ ಹೀಗೆ ವರ್ತಿಸಿದವಳಲ್ಲ. ಹುಡುಗರ ವಿಷಯದಲ್ಲಿ ಯಾವಾಗಾದರೊಮ್ಮೆ ತುಂಟ ಕುತೂಹಲ ಬಿಟ್ಟರೆ ಈ ಪರಿಯ ತವಕ, ತಪನೆ ಉಹುಂ, ಅದು ಶ್ರಾವಣಿಯ ಸ್ವಭಾವವೇ ಅಲ್ಲ ಎಂದು ಆಶ್ಚರ್ಯಪಟ್ಟಿದ್ದಳು. ಅದು ಅಲ್ಲದೇ ಹಾರ್ಡಿ ಜೇಮ್ಸ್ ಕಾಲೇಜಿನ ಅನುರೂಪ ಸುಂದರಿ, ಆಗರ್ಭ ಶ್ರೀಮಂತನ ಒಬ್ಬಳೇ ಮಗಳು ಕೆಣಕುವ ಹುಡುಗರನ್ನು ಡರ್ಟ್‌ಥರಾ ನೋಡಿ ಮುಂದಕ್ಕೆ ನಡೆದು ಹೋಗುವ ಹುಡುಗಿ ಶ್ರಾವಣಿಯೇ ಶಿಶಿರಚಂದ್ರನಿಗಾಗಿ ಈ ರೀತಿ ಪ್ರೀತಿಗಾಗಿ ಹಂಬಲಿಸಲು ಪ್ರಾರಂಭಿಸಿದ್ದಾಳೆ.

ಆದರೆ 'ಹೇಳಿ ಹೋಗು ಕಾರಣ' ಕಾದಂಬರಿಯ ಪ್ರಾರ್ಥನಾಗೆ ಬೆಳಗಿನ ಜಾವ ವಸಂತ ಋತುವೊಂದು ದಾಪುಗಾಲಿಕ್ಕಿಕೊಂಡು ಬಂದಂತ್ತಿತ್ತು. ಪರೀಕ್ಷೆಯಲ್ಲಿ ಹಿಮವಂತ ನಿರೀಕ್ಷೆಗಿಂತಲೂ ಚೆನ್ನಾಗಿ ಮಾಡಿದ್ದಳು. ನಂತರ ಕಾಲೇಜಿನ ಸದಸ್ಯರ ಪೈಕಿ ಕನಿಷ್ಟ ಪಕ್ಷ ಮೂರು ಜನ ಕಾವೇರಮ್ಮನಿಗೆ ಗೊತ್ತಿರುವವರಲ್ಲಿ ಇಬ್ಬರು ಅವಳ ಮನೆಗೆ ವಾರಕ್ಕೊಮ್ಮೆಯಾದರು ಬರುತ್ತಿರುವವರಲ್ಲಿ, ಒಂದು ದಿನ ಸಾಪ್ಕಾರ ಶಂಕ್ರಪ್ಪ ಮನೆಗೆ ಬಂದಾಗ ಪ್ರಾರ್ಥನಾಳ ಮೆಡಿಕಲ್ ಸೀಟು ಕೇಳಿ ಖಚಿತ ಪಡಿಸಿಕೊಂಡಿದ್ದಳು. ನಂತರ ಅವಳಿಗೆ ಸೀಟು ಸಿಕ್ಕಿ ಖುಷಿಯಲ್ಲಿ ಡೊನೇಶನ್ ಹಣದ ಜೊತೆಗೆ ಫೀಜು, ಪುಸ್ತಕ, ಹಾಸ್ಟೆಲ್‌ನ ಖರ್ಚು, ಬಟ್ಟೆ-ಬರೆ ಎಲ್ಲ ಆಗಬೇಕಲ್ಲವೆಂದುಕೊಂಡು ಶಾಂತಪ್ಪ ಹಿಮವಂತನಿಗೆ ಒಂದು ಲಕ್ಷ ರೂಪಾಯಿ ತುಗೋ ಎಂದು ಕೊಟ್ಟ. ಈ ಕಾದಂಬರಿಯಲ್ಲಿ ಪ್ರಾರ್ಥನಾ ಓದಿಗಾಗಿ ಎಲ್ಲರಿಂದಲೂ ಸಹಾಯ ಸಹಕಾರ ದೊರೆಯುತ್ತದೆ. ಅದೇ ಸಂದರ್ಭದಲ್ಲಿ ಭ್ರಷ್ಟಾಚಾರದ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಯಾವುದೇ ಒಂದು ಕಾರ್ಯವಾಗಬೇಕಾದರು ಕೇವಲ ನಾವು ಗಳಿಸಿದ ಅಂಕಗಳು ನಮ್ಮ ಜೀವನವನ್ನು, ಮುಂದಿನ ಕಲಿಕೆಯನ್ನು ನಿರ್ಧರಿಸುವುದಿಲ್ಲ. ಅದಕ್ಕೆ ಒಂದಿಷ್ಟು ದುಡ್ಡು ಇಲ್ಲವಾದರೆ ವಸೂಲಿಯು ಅಗತ್ಯವಾಗಿದೆ ಎಂದು ಕಾವೇರಮ್ಮನ ಪಾತ್ರದ ಮೂಲಕ ವ್ಯಕ್ತಪಡಿಸಿದ್ದಾರೆ. ಮುಂದೆ ಮೆಡಿಕಲ್ ಸೀಟು ಸಿಕ್ಕ ಸಂತೋಷದಲ್ಲಿ ಪ್ರಾರ್ಥನಾ "ಹಿಮೂ" ಅಂದವಳೇ ಅವನ ಅಪ್ಪನೆಗಳನ್ನೆಲ್ಲ ಮೀರಿ ಅವನ ತೆಕ್ಕೆಗೆ ಬಿದ್ದು ಕೆನ್ನೆಗಳನ್ನು ಗಾಢವಾಗಿ ಮುತ್ತಿಕ್ಕಿದಳು. ಅವಳ ಸಂತೋಷಕ್ಕೆ ಹಿಮವಂತ ಅಡ್ಡಿಪಡಿಸದೆ ಪ್ರಾರ್ಥನಾ ನನ್ನದೊಂದು ಚಿಕ್ಕ ಆಸೆಯಿದೆ. ನಿಂಗೆ

ಮೆಡಿಕಲ್ ಸೀಟು ಸಿಕ್ಕಿದರೆ ಗವಿಮಠಕ್ಕೆ ಬಂದು ಒಂದು ರಾತ್ರಿ ಗದ್ದುಗೆ ಕಡೆ ತಲೆಯಿಟ್ಟು ಮಲಗ್ತೀನಿ ಅಂತ ನಂಗೇ ಗೊತ್ತಿಲ್ಲದೆ ಹೇಳಿಕೊಂಡದ್ದೆ ನಿಂಗೆ ಅಭ್ಯಂತರವಿಲ್ಲದಿದ್ದರೆ ನಾಳೆ ಹೋಗಿ ನಾಡಿದ್ದು ಬಂದು ಬಿಡೋಣ ಎಂದ. ನೀನು ಕರೆದರೆ ಗವಿಮಠವೊಂದಕ್ಕೆ ಏಕೆ? ಹುಲಿ ಗವಿಯೊಳ್ಳಕ್ಕು ನಿನ್ನ ಕೈ ಹಿಡಿದು ನಡೆದು ಬಂದು ಬಿಡುತ್ತೇನೆಂದು ಒಂದು ಕಲ್ಲು ಬೆಂಚ ಮೇಲೆ ಕುಳಿತರು. ಆವಾಗ ಮಠದಿಂದ ಒಂದು ಇಳಿ ಆಕೃತಿ ಬಂದು ಚಂದ್ರಶೇಖರಾ... ಎಂದು ಕರೆದಾಗ ಹಿಮವಂತನಿಗೆ ಆಶ್ಚರ್ಯವಾಗಿತ್ತು. ನಂತರ ಅವರನ್ನು ಮಠದೊಳಗೆ ಕರೆದುಕೊಂಡು ಹೋಗಿ ದಾಸೋಹಕ್ಕೆ ಕುಳಿತಾಗ ಊಟದ ಕೊನೆಯ ತುತ್ತು ಎತ್ತುವ ಹೊತ್ತಿಗೆ "ಈಯಮ್ಮನ್ನ ಡಾಕ್ಟ್ರ ಪರೀಕ್ಷೇಗೆ ಓದುಸ್ತೀಯೋ?" ಕಂದೀಲಿನ ಮುಂದೆ ಕುಳಿತಿದ್ದ ಅಜ್ಜ ಹಾಗಂತ ಯಾವುದೇ ಪೂರ್ವ ಸೂಚನೆಯಿಲ್ಲದೆ ಕೇಳಿಬಿಟ್ಟಾಗ ಮಾತ್ರ ಹಿಮವಂತ ದಿಗ್ಭ್ರಾಂತನಾಗಿ ಬಿಟ್ಟ. ಕಾವಿ ಜುಬ್ಬಾ ಮತ್ತು ಕಾವಿ ಪಂಚೆ ಧರಿಸಿದ್ದಾರೆ. ಯಾವುದೋ ಅಲೌಕಿಕವಾದ, ಅತಿಮಾನುಷ್ಯವಾದ ಶಕ್ತಿಗಳು ಈತನಲ್ಲಿರಬಹುದು ಎಂಬ ಸಣ್ಣ ಗುಮಾನಿಯು ಬರದಂತ ವ್ಯಕ್ತಿತ್ವ ಅಜ್ಜಯ್ಯನದು. ಪ್ರಾರ್ಥನಾ ಗದ್ದುಗೆಯಿಂದ ದೂರ ಮೂಲೆಯೊಂದರಲ್ಲಿ ಉರುಳಿಕೊಂಡಿದ್ದವಳು. ಅವಳಿಗಾಗಲೇ ಗಾಢ ನಿದ್ರೆ. ಹಿಮವಂತ ಅವಳೆಡೆಗೆ ನೋಡಿದವನೇ "ಈ ಹುಡುಗಿಗೊಂದು ಸೀಟು ಸಿಗಲಿ ಮತ್ತೆ ಇದೆ ಗವಿಮಠಕ್ಕೆ ಬಂದು ಗದ್ದುಗೆಗೆ ತಲೆಯಾನಿಸಿ ಹೀಗೆ ಮಲಗುತ್ತೇನೆ" ಎಂದು ಬೇಡಿಕೊಂಡು. ಅವತ್ತಿಡೀ ಇಬ್ಬರು ಮಠದಲ್ಲಿಯೇ ಇದ್ದು ಬೆಳಗಿನ ಜಾವ ಮರಳಿದರು.

ರವಿಯವರು 'ಹೇಳಿ ಹೋಗು ಕಾರಣ' ಕಾದಂಬರಿಯ ಪಾತ್ರಗಳಲ್ಲಿ ದೈವಭಕ್ತಿಯು ಜೀವಪಡೆದುಕೊಂಡಿರುವುದು ತಿಳಿದುಬರುತ್ತದೆ. ಸಹಜವಾಗಿಯೆ ವಾಮಾಚಾರದ ಬಗ್ಗೆ ಬರೆಯಬಲ್ಲ ರವಿಯವರು ದೈವಿಕ ಶಕ್ತಿಯ ನಿಲುವನ್ನು ಚಿತ್ರಿಸಿದ್ದಾರೆ. ದೇವರು, ಪವಾಡಗಳನ್ನು ಮೂಢನಂಬಿಕೆ ಎಂದು ಬಿಂಬಿಸುವ ಇವತ್ತಿನ ದಿನಮಾನಗಳಲ್ಲಿ ದೈವಭಕ್ತಿಯ ಧನಾತ್ಮಕ ವಿಚಾರಧಾರೆ ಈ ಒಂದು ಕಾದಂಬರಿಯಲ್ಲಿ ವ್ಯಕ್ತಗೊಂಡಿದೆ. ಆದರೆ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಈ ದೈವಭಕ್ತಿಯ ಪರಾಕಾಷ್ಠೆಯ ವಿಷಯ ಎಲ್ಲಿಯೂ ಕಂಡುಬರುವುದಿಲ್ಲ. ಅದನ್ನು ಶ್ರಾವಣಿಯ ಪಾತ್ರದಲ್ಲಿಯೂ ನಿರೀಕ್ಷಿಸಲಾಗಿಲ್ಲದಿರುವುದು ಯಾಕೆ ಎಂದು ಪ್ರಶ್ನಿಸುವಂತಾಗಿದೆ. ಎರಡು ಕಾದಂಬರಿಯ ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಪ್ರೀತಿಯನ್ನು ತುಂಬಿದರು. ಅವು ಅಭಿವ್ಯಕ್ತಿಸುವ ಅಭಿಪ್ರಾಯಗಳು ವಿಭಿನ್ನವಾಗಿವೆ.

ಪ್ರೀತಿಸಿದವರು ದೂರಾದಾಗ ಅದು ಮತ್ತಷ್ಟು ಗಾಢವಾಗುತ್ತದೆ ಎಂಬಂತೆ ರವಿಯವರ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯ ಶ್ರಾವಣಿ ಪಾತ್ರದ ಮೂಲಕ ತಿಳಿದುಕೊಳ್ಳಬಹುದು. ಶಿಶಿರಚಂದ್ರ ಕಣ್ಮರೆಯಾದಾಗ ಶ್ರಾವಣಿ ಆತನಿಗಾಗಿ ಹಂಬಲಿಸುತ್ತಾ ಹುಡುಕಾಟ ಪ್ರಾರಂಭಿಸುತ್ತಾಳೆ. ಯಾವುದೇ ಒಂದು ವಸ್ತು ಅಥವಾ ಮನುಷ್ಯನ ಬೆಲೆ ನಮ್ಮೊಡನೆ ಇದ್ದಾಗ ಗೊತ್ತಾಗುವುದಿಲ್ಲ. ಅದು ನಮ್ಮಿಂದ

ದೂರವಾದಾಗ ಗೊತ್ತಾಗುತ್ತದೆ ಎಂಬಂತೆ ಶ್ರಾವಣಿ ಶಿಶಿರಚಂದ್ರನಿಗಾಗಿ ಹುಡುಕಾಟ ಪ್ರಾರಂಭಿಸುತ್ತಾಳೆ. ಆತನ ಗೆಳೆಯ ನಿಖಿಲ್‌ಗೆ ಶಿಶಿರ ಕಳುಹಿಸಿದ 'ನೋಬಡಿಸ್ ಸನ್' ಕಾದಂಬರಿ ಕಳುಹಿಸಿದ ಲಕೋಟೆ ಪಡೆದುಕೊಳ್ಳಲು ತವಕಿಸುತ್ತಾಳೆ. ಆದರೆ ನಿಖಿಲ್‌ನಿಂದ ನಿರಾಶಾದಾಯಕ ಪ್ರತಿಕ್ರಿಯೆ ವ್ಯಕ್ತವಾದಾಗ 'ಪ್ರೀತಿಗೆ ಪ್ರಯತ್ನದಾಯಕ ಶಕ್ತಿ ಇರುತ್ತದೆ' ಎಂಬ ಮಾತಿನಂತೆ ಪ್ರಯತ್ನ ಬಿಡದೆ ಹುಡುಕಿದಾಗ ಆ ಲಕೋಟೆ ಸಿಕ್ಕಿತು. ಆದರೆ ಅದರ ಮೇಲೆ ಶಿಶಿರಚಂದ್ರ ಹಚ್ಚಿ ಕಳಿಸಿದ್ದ ಸ್ಟಾಂಪುಗಳನ್ನೆಲ್ಲ ನಿಖಿಲ್ ತಮ್ಮ ಹಾಗೂ ತಂಗಿ ಕಿತ್ತು ತೆಗೆದುಕೊಂಡು ಬಿಟ್ಟಿದ್ದರು. ಅವುಗಳನ್ನೆಲ್ಲ ತರಿಸಿ ಗುಡ್ಡೆ ಹಾಕಿ ನೋಡಿದರು ಆ ಪತ್ರ ಎಲ್ಲಿಂದ, ಯಾವ ಪೋಸ್ಟ್ ಆಫೀಸಿನಿಂದ ಅಂಚೆ ಪೆಟ್ಟಿಗೆಗೆ ಹಾಕಲ್ಪಟ್ಟಿತೆಂಬುದು ಪತ್ತೆಯಾಗಲಿಲ್ಲ. ಆದರೆ ಹಳದಿ ಬಣ್ಣದ ಲಕೋಟೆಯ ಮೇಲೆ ಸ್ಫುಟವಾಗಿ ಮೂಡಿದ್ದ ಎಂ.ಸಿ.ಎಲ್. ಎಂಬ ಮೂರು ಅಕ್ಷರಗಳು ಕಣ್ಣಿಗೆ ಬಿದ್ದವು. ಹೋಪ್ ಕಳೆದುಕೊಳ್ಳುವುದು ಶ್ರಾವಣಿಯ ಜಾಯಮಾನವೇ ಆಗಿರಲಿಲ್ಲ. ಅವಳ ಪ್ರಯತ್ನಕ್ಕೆ ಯಶಸ್ಸು ಸಿಕ್ಕಂತಾಯಿತು. ಅವಳ ಕಣ್ಣು ಪಾದರಸ ಕುಡಿದಿವೆಯೇನೋ ಎಂಬಂತೆ ಚಲಿಸುತ್ತಿದ್ದವು. ನಂತರ ಇಂಟರ್ ನೆಟ್ ತೆರೆದಿಟ್ಟುಕೊಂಡ ಶ್ರಾವಣಿ ಭಾರತದ ಅಷ್ಟು ಕಲ್ಲಿದ್ದಲು ಗಣಿಗಳ ಹೆಸರುಗಳನ್ನು ಪತ್ತೆ ಮಾಡಿ ಒಂದೆಡೆಗೆ ಗುಡ್ಡೆ ಹಾಕಿಕೊಳ್ಳುತ್ತಿದ್ದಳು. ಎಲ್ಲೆಲ್ಲಿವೆ ಕೋಲ್ ಫೀಲ್ಡ್? ಸಿಂಗರೇಣಿ, ಕರನ್‌ಪುರ್, ಬೊಕಾರೋ, ಝುರಿಯಾ, ಅಸ್ಸಾಂ, ಮೇಘಾಲಯ, ರಾಣಿಗಂಜ್, ಪೆಂಚ್, ಕನ್ಹನ್, ಚಂಡಾ, ವಾರ್ಧಾ, ಗೋದಾವರಿ, ಗುಜರಾತ್, ರಾಜಸ್ತಾನ್, ಒರಿಸ್ಸಾ....? ಎಲ್ಲಿದ್ದಾನೆ ತಂಪು ಕಣ್ಣುಗಳ ಹುಡುಗ ಶಿಶಿರಚಂದ್ರ? ಅಸಲಿಗೆ ಎಂ.ಸಿ.ಎಲ್. ಅಂದರೇನು? ಕಲ್ಲಿದ್ದಲು ಗಣಿಯ ಹೆಸರಾ? ಕಲ್ಲಿದ್ದಲು ಅಗೆದು ತೆಗೆಯುವ ಕಂಪನಿಯ ಹೆಸರಾ? ಅದು ಯಾವ ರಾಜ್ಯದಲ್ಲಿದೆ? ಹೀಗೆ ಎಲ್ಲ ಮಾಹಿತಿ ಸಂಗ್ರಹಿಸಿದ ಶ್ರಾವಣಿಗೆ ಕೊನೆಗೂ ಗೊತ್ತಾದುದು ಎಂ.ಸಿ.ಎಲ್. ಎಂಬುದಕ್ಕೆ ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್! ಆದರೆ ಆ ಕಂಪನಿ ಒರಿಸ್ಸಾದಲ್ಲಿ ಹತ್ತು ಕಡೆ ಕಲ್ಲಿದ್ದಲು ಅಗೆಯುತ್ತಿದೆ. ಶಿಶಿರ ಯಾವ ಸುರಂಗದಲ್ಲಿದ್ದಾನೆ? ಕೊನೆಗೂ ಟೇಲಿಪೋನ್ ಎಕ್ಸ್‌ಛೇಜಿನ ಮುಖ್ಯ ಇಂಜಿನಿಯರ್ ಕಡೆಗೆ ಹೋಗಿ ಆ ಕಂಪನಿಯ ಛೇರ್ಮನ್‌ನ ನಂಬರು ಪಡೆದುಕೊಂಡು ಡಯಲ್ ಮಾಡಿ ಛೇರ್ಮನನಲ್ಲಿ ವಿನಂತಿಸಿಕೊಂಡಳು. ಆಗ ವಿಷಯ ತಿಳಿದ ಶ್ರಾವಣಿ ಒರಿಸ್ಸಾದ ಸಂಭಲ್‌ಪುರಕ್ಕೆ ಹೊರಟು ಬಿಡಲೇ ಎಂದು ದ್ವಂದ್ವ ಸಂಭಲ್‌ಪುರವೆಂಬ ಕಲ್ಲಿದ್ದಲು ನಗರವನ್ನು ಆತನಕ ಅವಳು ನಕಾಶೆಯಲ್ಲೂ ನೋಡಿರಲಿಲ್ಲ. ಬೆಂಗಳೂರಿನಿಂದ ಎಷ್ಟು ಸಾವಿರ ಕಿಲೋ ಮೀಟರು? ನಾಳೆ ಹೊರಟು ಬಿಡಲಾ? ದೂರಾತಿದೂರಗಳದೊಂದು ಲೆಕ್ಕವೇ ಅಲ್ಲ. ಬೆಂಗಳೂರಿನಿಂದ ಒರಿಸ್ಸಾ ರಾಜಧಾನಿ ಭುವನೇಶ್ವರಕ್ಕೆ ಫ್ಲೈಟಿದೆ. ಮೊದಲು ಮದ್ರಾಸು ಅಲ್ಲಿಂದ ವಿಶಾಖಪಟ್ಟಣ, ಮಧ್ಯಾಹ್ನದ ಹೊತ್ತಿಗೆ ಭುವನೇಶ್ವರ್. ರಾತ್ರಿ ಹೊತ್ತಿಗೆ ಸಂಬಲ್‌ಪುರ್ ತಲುಪಿ ಬಿಡಬಹುದು. ಬೆಳಗ್ಗೆ ಶಿಶಿರಚಂದ್ರ ಸಿಗಲಾರನಾ? ಖಂಡಿತಾ ಸಿಗುತ್ತಾನೆ. ಎಂದು ಮಾಹಿತಿ ಸಂಗ್ರಹಿಸಿ ಆತನಿದ್ದಲ್ಲಿಗೆ ಹೊರಟು ನಡೆದಳು. ಪ್ರೀತಿಗೆ ಮತ್ತು

ಪ್ರೀತಿಸುವವರಿಗೆ ತನ್ನದೇಯಾದ ನಂಬಿಕೆ, ಆತ್ಮವಿಶ್ವಾಸ ಪಡೆದೇ ತಿರುತ್ತೇನೆಂಬ ಮನೋಭಾವ ಮತ್ತು ಅದಕ್ಕೊಂದು ಶಕ್ತಿಯಿರುತ್ತದೆ ಎಂಬುದನ್ನು ರವಿ ಬೆಳಗೆರೆಯವರ ಕಾದಂಬರಿಯ ಶ್ರಾವಣಿ ಪಾತ್ರ ಒಂದು ನಿದರ್ಶನದಂತೆ ಚಿತ್ರಿಸಿದ್ದಾರೆ.

ಕಾಲಿಗೆ ಬಿದ್ದು ಹಣೆ ಹಚ್ಚಿ ನಮಸ್ಕರಿಸಿ ಇನ್ನು ಒಂದು ಕ್ಷಣಕ್ಕೂ ಅಲ್ಲಿ ನಿಂತಿರುವುದು ತನ್ನಿಂದಾಗದೆಂಬಂತೆ ಹಾಸ್ಟೆಲಿನ ಆವರಣದೊಳಕ್ಕೆ ಹೋಗಿ ಬಿಟ್ಟಳು. ಹಿಮವಂತ ಶಿವಮೊಗ್ಗೆಗೆ ಬಂದು ತಲುಪಿದಾಗ ನಂದಕ್ಕ-ಶಾಂತಪ್ಪ ನೀನು ಒಬ್ಬನೇ ಗಾದಿಕೊಪ್ಪದ ಬಯಲಿನಲ್ಲಿ ಇರುವುದು ಬೇಡಾ ಎಂದು ಎಷ್ಟು ಹೇಳಿದರು ಕೇಳದೆ ಅಲ್ಲಿಗೆ ಹೋದ. ಆದರೆ ಆತನಿಗೆ ಪ್ರಾರ್ಥನಾ ನೆನಪು ಮಾತ್ರ ಕಾಡುತ್ತಿತ್ತು. ಐದು ವರ್ಷ ತಾನು ಕಷ್ಟಪಟ್ಟು ಅವಳನ್ನು ಓದಿಸಿ ಬಿಟ್ಟರೆ ಮುಗಿಯಿತು. ಆನಂತರದ ಪ್ರತಿ ಸುಖದಲ್ಲೂ ತಾನಿರುತ್ತೇನೆ. ಅವಳ ಎಲ್ಲ ಪ್ರಾರ್ಥನೆ, ಕೋರಿಕೆ, ನಿವೇದನೆಗಳು, ವಿನಂತಿಗಳು ತನ್ನ ಸುತ್ತಲೇ ಸುತ್ತುತ್ತವೆ ಎಂದು ಸಮಾಧಾನ ಘಟ್ಟುಕೊಳ್ಳುತ್ತಾನೆ. ಇತ್ತ ಪ್ರಾರ್ಥನಾ "ಯಾಕುಂದೇಂದು ತುಷಾರಾ ಹಾರ ಧವಳಾ" ಎಂದು ಮಂಚದ ಮೇಲೆ ಪದ್ಮಾಸ ಹಾಕಿಕೊಂಡು ಕುಳಿತು ಪ್ರಾರ್ಥಸುತ್ತಿದ್ದ ವೇಳೆ ಅವಳ ಕಣ್ಣಲ್ಲಿ ನೀರು ಧಾರಾಕಾರ. ರಾತ್ರಿ ಒಂದು ಕ್ಷಣದ ಪಟ್ಟಿಗೂ ನಿದ್ರೆ ಮಾಡಿರಲಿಲ್ಲ. ನಾನು ಈಗ ಶಿವಮೊಗ್ಗದಲ್ಲಿಯೇ ಇದ್ದಿದ್ದರೆ, ಇಷ್ಟಹೊತ್ತಿಗೆ ಹಿಮವಂತ ಗದರಿಕೊಂಡರು ಸರಿಯೇ ಅವನ ಮೇಲೊಂದು ಕಾಲು ಬಿಸಾಕಿಕೊಂಡು ಮಲಗಿ ಬಿಡಬಹುದ್ದಿತ್ತು. ಅವನೊಂದಿಗಿದ್ದಾಗಾ ಅದೆಂಥ ಭದ್ರತಾ ಭಾವ. ಹಾಸ್ಟೇಲ್‌ನ ಬಾಗಿಲಲ್ಲಿ ತನ್ನನ್ನು ಬಿಟ್ಟು ಹೋಗುವಾಗ ಸಹಜವಾಗಿ ಅಪ್ಪ-ಅಮ್ಮನ ತಕ್ಕೆಯಲ್ಲಿ ಮುದ್ದಾಗಿ ಬೆಳೆದ ಹುಡುಗಿಯರು ಅಳುತ್ತಾರೆ. ಅದರಲ್ಲಿ ವಿಶೇಷವೇನೂ ಇಲ್ಲ. ಆದರೆ ಪ್ರಾರ್ಥನಾಳದು ಹಿಮವಂತನೊಂದಿಗಿನ ಸಂಬಂಧ ಗೆಳೆತನವೋ, ಪ್ರೀತಿಯೋ, ಭಾವುಕತೆಯೋ, ವಾಂಛೆಯೋ, ದೈವಭಕ್ತಿಯೋ ತಿಳಿಯದ ಸಂಬಂಧದಂತೆ ಚಿತ್ರಿಸಿದ್ದಾರೆ.

ಮಾನವ ಸಂಬಂಧಗಳಲ್ಲಿ ಸ್ನೇಹ ಸಂಬಂಧವು ಒಂದು. ಅದನ್ನು ರವಿಯವರ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಈ ರೀತಿ ಗುರುತಿಸಬಹುದು. ಪ್ರಾರ್ಥನಾ ಮತ್ತು ಊರ್ಮಿಳೆ ಇಬ್ಬರು ವಸತಿನಿಲಯದಲ್ಲಿ ಗೆಳತಿಯರು ಆದರೆ ಊರ್ಮಿಳೆಯ ವಿಚಿತ್ರ ಸ್ವಭ್ವಾವ ಅವಳ ನೆಮ್ಮದಿಯನ್ನು ಮತ್ತಷ್ಟು ಹಾಳು ಮಾಡುತ್ತದೆ. ಒಡಹುಟ್ಟಿದವರಿಗಿಂತ ಸ್ನೇಹಿತರ ಮೇಲೆ ಹೆಚ್ಚು ವಿಶ್ವಾಸವಿರುತ್ತದೆ. ಆದರೆ ಇವರಿಬ್ಬರ ಸ್ನೇಹದ ಮೊದಲ ಭೇಟಿಯಿಂದಲೆ ಅವರಲ್ಲಿ ಹೊಂದಾಣಿಕೆ ಮನೋಭಾವವಿರುವುದಿಲ್ಲ. ಆದರೆ ದಿನಗಳಿದಂತೆ ಅವರ ಸ್ನೇಹಸಂಬಂಧ ಗಟ್ಟಿಗೊಳ್ಳುತ್ತ ಸಾಗುತ್ತದೆ. ಪ್ರಾರ್ಥನಾ ಪ್ರೀತಿಯಲ್ಲಿ ಮನಸ್ಸು ಸೋತವಳಾಗಿ ಹಿಮವಂತನನ್ನು ನೆನಪಿಸಿಕೊಂಡು ಅಳುವುದನ್ನು ಕಂಡ ಊರ್ಮಿಳಾ ಅವಳ ಪ್ರೀತಿಯ ಕಾಯಿಲೆಗೆ ಟಾನಿಕ್ ಕೊಡುವ ಕಾರ್ಯದಲ್ಲಿ ಮಗ್ನಳಾಗಿ "ಭಾವುಕತೆಗೂ ಮೂರ್ಖತನಕ್ಕೂ ಹೆಚ್ಚಿನ ವ್ಯತ್ಯಾಸ ಇರಲ್ಲ ಪ್ರಾರ್ಥನಾ. ಹೀಗಂತಿನಿ ಅಂತಾ ಬೇಸರಾ ಮಾಡಕೋ ಬೇಡ ನೀನು ಕಳೆದುಕೊಳ್ಳತ್ತಿರುವುದು ಹಿಮವಂತನನ್ನೇ. ಆದರೂ,

ಅದು ನಿಜವಾಗಿಯೂ ಹಿಮವಂತನನ್ನ ಅಲ್ಲ. ನೀನು ಗಂಡಸನ್ನ ಕಳೆದುಕೊಳ್ಳುತ್ತಿದ್ದಿಯಾ ಅಷ್ಟೆ. ಗಂಡಸಿನ ಪ್ರೀತಿ, ಗಂಡಸಿನ ಸಹಚರ್ಯ, ಅವನ ಭರವಸೆ, ಅವನ ಮೆಚ್ಚುಗೆ ಎಲ್ಲಾ ನಿಂಗೆ ಅಭ್ಯಾಸವಾಗಿ ಹೋಗಿವೆ. ಪಕ್ಕದಲ್ಲಿ ಮಲಗಿರುವ ಹಿಮವಂತನ ಮೇಲೆ ಕಾಲು ಬಿಸಾಕಿಕೊಂಡು, ಅದೊಂದು ಭಾವನೆಗಳ ಭದ್ರತೆ ಅನುಭವಿಸುತ್ತಾ ನಿದ್ದೆ ಮಾಡಿದಿಯಲ್ಲ? ಅದು ಬೇಕು ಅನ್ನಿಸ್ತಿದೆ. ಜಗತ್ತಿನ ಎಲ್ಲ ಹೆಂಗಸರ ಥರಾನೇ ನೀನೂ ಅದನ್ನು ಪ್ರೀತಿ ಅಂದ್ಕೊಂಡು ಬಿಟ್ಟಿದಿಯ. ಸ್ವಲ್ಪ ನೆಟ್ಟಗೆ ಕೂತ್ಕೊಂಡು ಆಲೋಚನೆ ಮಾಡು. ನಿನ್ನ ಹಿಮವಂತ ದಾವಣಗೆರೆಗೆ ಬಂದು ಇರಲಾರ. ಐದು ವರ್ಷ ನೀನಿಲ್ಲಿ ಓದೋ ತನಕ ಅಲ್ಲಿ ಅವನು ದುಡಿತಾನೇ ಇರಬೇಕು. ನೀನು ಹೀಗೆ ಹಲುಬ್ತಾ ಕೂತರೆ ಐದಲ್ಲ, ಹದಿನೈದು ವರ್ಷ ಆದರೂ ಡಾಕ್ಟರಾಗಲ್ಲ. ನಮ್ಮ ವಯಸ್ಸಿನ ಹುಡುಗಿಯರಿಗೆ ಕೊಂಚ ಮಾತ್ರದ ಭದ್ರತೆ ಒಂದಿಷ್ಟು ಮಿತವಾದ ಗೆಳೆತನ ಕೊಡುವುದಕ್ಕೆ ಗಂಡಂದಿರೆ ಬೇಕಾಗಿಲ್ಲ. ಯಾವುದೆ ಹುಡುಗನಿಂದ ಪಡೆಯಬಹುದು. ಆದ್ದರಿಂದ ಕಾಲೇಜಿನಲ್ಲೇ ಯಾರನ್ನಾದರೂ ಸ್ವಲ್ಪ ಹಚ್ಚಿಕೊ. ನಾಲ್ಕು ಮಾತು ಜೊತೆಗೆ ಕೂತು ಆಡು. ಕಾಫಿಗೆ ಒಟ್ಟಿಗೆ ಹೋಗು. ಒಂದು ಮಿತವಾದ ಗೆಳೆತನ ಬೆಳೆಸಿಕೋ. ನೀನೇನೋ ಹಾದರ ಮಾಡಬೇಕು, ಹಿಮಂತನಿಗೆ ದ್ರೋಹ ಮಾಡಬೇಕು, ಅಂತ ನಾನು ಹೇಳ್ತಾ ಇಲ್ಲ. ಹುಡುಗರೊಂದಿಗೆ ಒಟ್ಟಿಗೆ ಇದ್ದ ಮಾತ್ರಕ್ಕೆ ಅದು ಹಾದರ ಅಲ್ಲ. ಜೋತೆಗಿರೋ ಹುಡುಗಾ ತುಂಬಾ ಕಾಳಜಿಯಿಂದ ನೋಡಿಕೊಳ್ಳುತ್ತಾನೆ. ಭರವಸೆ ಹುಟ್ಟಿಸುತ್ತಾನೆ. ಬದುಕಿಗೊಂದು ಆಸಕ್ತಿ ಮೂಡಿಸುತ್ತಾನೆ. ಅವನನ್ನು ನೀನು ಪ್ರೀತಿಸಬೇಕು ಅಂತೇನಿಲ್ಲ. ಜೋತೆಗೊಬ್ಬ ಗಂಡಸಿದ್ರೆ ಸಾಕು. ಆಲೋಚ್ನೆ ಮಾಡು. ಇಲ್ಲದೇ ಹೋದರೆ ಹಿಮವಂತನ ನೆನಪು ನಿನ್ನ ಎಂಬಿಬಿಎಸ್ ಪದವಿ ನುಂಗಿ ಹಾಕುತ್ತದೆ!" ಎಂದು ಹೇಳಿ ಆಕೆಯ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಿ ಯಶಸ್ವಿಯಾಗುತ್ತಾಳೆ.

ಆದರೆ ಊರ್ಮಿಳೆಯ ಮನಸ್ಥಿತಿಯನ್ನು ಪರಿವರ್ತಿಸುವವರು ಯಾರು ? ಅವಳದು ತುಂಬಾ ವಿಲಕ್ಷಣ ಸ್ವಭಾವ. ಯಾರ ಮಾತು ಕೇಳುವವಳಲ್ಲ. ರವಿಯವರು ತಮ್ಮ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಸ್ತ್ರೀಯೂ ಪುರುಷನಿಗೆ ಪೂರಕವಾಗಿರಬೇಕು. ಸ್ತ್ರೀ ಒಡನಾಟದಿಂದ ಪುರುಷರಲ್ಲಿ ಬದಲಾವಣೆ ತರಲು ಸಾಧ್ಯವೆಂಬ ಸಾಮಾಜಿಕ ನಿಯಮ ಇಲ್ಲಿ ಅನ್ವಯಿಸುವುದಿಲ್ಲ. ಪುರುಷನಿಂದ ಸ್ತ್ರೀಯ ಮಾನಸಿಕ, ದೈಹಿಕ ಬಯಕೆಗಳಲ್ಲಿ ಬದಲಾವಣೆ ತಂದಿದ್ದಾರೆ. ಹಿಮವಂತನಿಂದ , ಆತನ ಗೆಳೆತನ, ಒಡನಾಟ, ನೇರ ಮಾತುಗಾರಿಕೆ, ಕಪಟವಿಲ್ಲದ ಮನಸ್ಸನ್ನು ಗಮನಿಸಿದ ಊರ್ಮಿಳಾ ತಾನಾಗಿಯೇ ಎಲ್ಲ ಕೆಟ್ಟ ಹವ್ಯಾಸಗಳಿಂದ ದೂರ ಸರಿಯಲು ಪ್ರಯತ್ನಿಸುತ್ತಾಳೆ. ನಂತರ ಈಕೆಯೇ ಕಾದಂಬರಿಯ ಪ್ರಮುಖ ಪಾತ್ರದಲ್ಲಿದ್ದಾಳೇನೋ ಎಂಬಂತೆ ಚಿತ್ರಿಸಿರುವುದು ಕಂಡು ಬರುತ್ತದೆ.

"ಗಂಡಸಿನ ನಸಿಬು, ಹೆಂಗಸಿನ ನಿಯತ್ತು ಯಾನತ್ತು ಬದಲಾಗುತ್ತದೋ, ಬಲ್ಲವರ್‍ಯಾರು?" ಎಂಬ ಯುಕ್ತಿಯಂತೆ ಪ್ರಾರ್ಥನಾಳ ಪ್ರೀತಿ ದೇಬಶಿಶಿನತ್ತ ವಾಲುತ್ತದೆ.

ಯಾವಾಗ ಹಿಮವಂತ ಮಿಠಾಯಿ ಮಾರುವವ ಎಂದು ಗೋತ್ತಾಯಿತೋ ಅವತ್ತಿನಿಂದ ಅವಳು ಅವನನ್ನು ಮರೆಯಲು ಪ್ರಯತ್ನಿಸಿದಳು. ದೇಬ್‌ಶಿಶಿಯನ್ನು ಮದುವೆಯಾದರೆ ಯಾವುದೋ ದೇಶದ ಹೆರಸರಾಂತ ವಿಶ್ವವಿದ್ಯಾಲಯದಲ್ಲಿ ಡಾ। ದೇಬ್‌ಶಿಶಿ ಮತ್ತು ಡಾ। ಪ್ರಾರ್ಥನಾ ದಂಪತಿಗಳು ಎರಡು ದೊಡ್ಡ ಪದವಿ ತೆಗೆದುಕೊಂಡು ಭಾರತಕ್ಕೆ ಹಿಂತಿರುಗುತ್ತಿರುವ ದೃಶ್ಯ ಕಲ್ಪಿಸಿಕೊಂಡು ತಬ್ಬಿಬ್ಬಾದಳು. ಆದ್ದರಿಂದ ದೇಬ್‌ಶಿಶಿವನ್ನೆ ಮದುವೆಯಾಗಲು ನಿರ್ಧರಿಸಿ ಮದುವೆಯಾಗುತ್ತಾಳೆ.

ಆದರೆ ಪ್ರಾರ್ಥನಾಳ ಪ್ರೀತಿಯ ಮೇಲೆ ಹಿಮವಂತ ಕನಸಿನ ತಾಜಮಹಲ್‌ನ್ನೆ ಕಟ್ಟಿಕೊಂಡಿರುತ್ತಾನೆ. ಅವಳ ಮದುವೆ ವಿಷಯ ತಿಳಿದಾಗ ಆತನ ಸಹನೆಯ ಕಟ್ಟೆ ಒಡೆಯುತ್ತದೆ. ಆದರೆ ಮಾಡುವುದು ಏನು? ಎಲ್ಲ ಹುಡುಗಿಯರಂತೆ "ನನಗಿಂತ ಒಳ್ಳೆ ಹುಡುಗಿ ನಿನಗೆ ಸಿಗುತ್ತಾಳೆ" ಎಂಬ ಬರವಸೆ ಮಾತುಗು ಮಾತ್ರ ಹಿಮವಂತನಿಗೆ. "ಹೆಣ್ಣಿನ ನೆಲೆ ಕುದುರೆ ನೆಲೆ ಬಲ್ಲವರ್‍ಯಾರು" ಎಂಬ ಯುಕ್ತಿ ಪ್ರಾರ್ಥನಾಳ ಮನಸ್ಥಿತಿಗೆ ಅನ್ವಯಿಸುತ್ತದೆ.

'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿ ಶ್ರಾವಣಿ ಮಾತ್ರ ಪ್ರೀತಿಯಲ್ಲಿ ಯಶಸ್ವಿಯಾಗುತ್ತಾಳೆ. ಶಿಶಿರಚಂದ್ರ ಬೆಟ್ ಗೆಲ್ಲುವುದಕ್ಕೋಸ್ಕರ ಪ್ರೀತಿಸುತ್ತಿದರು. ನಿಜವಾಗಿಯು ಪ್ರೀತಿ ಬಲೆಗೆ ಸಿಲುಕಿ ಬಿಡುತ್ತಾನೆ. ಜೀವನದಲ್ಲಿ ಎಷ್ಟೇ ತೊಂದರೆಗಳು ಬಂದರು ಅವನ್ನು ಎದುರಿಸಿ ನಿಲ್ಲುವ ಧೈರ್ಯ ಶ್ರಾವಣಿಗು ಮತ್ತು ಶಿಶಿರಚಂದ್ರ ಇಬ್ಬರಿಗೂ ಇತ್ತಾದರಿಂದ ಇವರಿಬ್ಬರ ಪ್ರೀತಿ ಸುಖಾಂತ್ಯ ಕಂಡಿದೆ.

ಅಧ್ಯಾಯ ೩

ವಿಲಕ್ಷಣ ಪ್ರವೃತ್ತಿಯವರ ಸ್ವರೂಪ

ಅಧ್ಯಾಯ ೩

ವಿಲಕ್ಷಣ ಪ್ರವೃತ್ತಿಯವರ ಸ್ವರೂಪ

ಒಂದು ಹೆಣ್ಣು ಮಾನಸಿಕ ಆಘಾತಕ್ಕೆ ಒಳಗಾದ ಸಂದರ್ಭದಲ್ಲಿ ಆಕೆಯ ವರ್ತನೆಯಲ್ಲಾಗುವ ಬದಲಾವಣೆಗಳನ್ನು ರವಿಯವರು ತಮ್ಮ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಊರ್ಮಿಳಾ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಸುಜೋತ್ ಮಲ್ಹೋತ್ರಾನ ಪ್ರೀತಿಯಿಂದ ತಿರಸ್ಕೃತಳಾದ ಊರ್ಮಿಳೆಯ ವರ್ತನೆ, ಬಯಕೆ, ಆಸೆ-ಆಕಾಂಕ್ಷೆಗಳೆ ಬೇರೆಯಾಗಿ ಮಾರ್ಪಟ್ಟಿದ್ದನ್ನು ಈ ಒಂದು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಮುಂದೆ ಆಕೆ ಆ ಆಘಾತದಿಂದ ಹೊರಬರಲೆಂದು ಅವಳ ಕುಟುಂಬ ಸದಸ್ಯರು ಆಕೆಯ ಆಸೆಯಂತೆ ನಡೆಯಲು ಬಿಡುವುದು ಮತ್ತು ಅದರಿಂದ ಮುಂದಿನ ದಿನಗಳಲ್ಲಿ ಅವಳ ಮಾನಸಿಕ ಸ್ಥಿಮಿತತೆಗೆ ಬರುವುದನ್ನು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ರವಿಯವರ ಇನ್ನೊಂದು ಕಾದಂಬರಿ 'ನೀ ಹಿಂಗ ನೋಡಬ್ಯಾಡ ನನ್ನ'ದಲ್ಲಿ ಈ ರೀತಿಯ ಪಾತ್ರ ತರದೆ ಇರುವುದನ್ನು ಗಮನಿಸಬಹುದು. ಮಾನಸಿಕ ಅಸ್ಥಿಮಿತತೆ ಎನ್ನುವುದು ಹೆಣ್ಣು ಮತ್ತು ಗಂಡಿನ ಜೀವನದಲ್ಲಿ ಅಷ್ಟೇ ಮಹತ್ವದ್ದು. ಆದರೆ ರವಿಯವರು ಸ್ತ್ರೀ ಪಾತ್ರದಲ್ಲಿ ಮಾತ್ರ ಈ ಅಸ್ಥಿಮಿತತೆಯನ್ನು ತಂದಿರುವುದನ್ನು ಗಮನಿಸಿದರೆ ಸ್ತ್ರೀಯರು ಮಾನಸಿಕವಾಗಿ ಎಷ್ಟೊಂದು ಜರ್ಝರಿತರಾಗುತ್ತಾರೆ ಎಂಬುದನ್ನು ಗುರುತಿಸಬಹುದಾಗಿದೆ.

'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎಂಬಂತೆ ಪ್ರಾರ್ಥನಾ ಮೆಡಿಕಲ್ ಓದಲು ಬಂದು ಹಾಸ್ಟೇಲ್ ಸೇರಿಕೊಂಡಾಗ ಅವಳ ಸಿನಿಯರ್ ಹುಡುಗಿಯೊಬ್ಬಳಿದ್ದಳು. ಅವಳ ಹೆಸರು ಊರ್ಮಿಳಾ. ರಾಜ ಮಹಾರಾಜರ ದರ್ಬಾರಿನ ನಾಡಾದ ಮೈಸೂರಿನವಳು. ತಂದೆ-ತಾಯಿ, ಕುಟುಂಬದ ಸದಸ್ಯರಿಗೆ ಒಂದು ಬಯಕೆ ಇರುತ್ತದೆ. ಅದನ್ನು ಇಡೇರಿಸುವವರು ಮಕ್ಕಳು ಅದೇ ರೀತಿ ಊರ್ಮಿಳಾ ಅಪ್ಪ, ಅಮ್ಮ, ಅಣ್ಣ, ಅಕ್ಕ ಎಲ್ಲರದು ಒಂದೇ ಬಯಕೆ ಅವಳು ಡಾಕ್ಟರ್ ಆಗಬೇಕೆಂದು ಅವರ ಬಯಕೆಯು ಈಡೇರುವ ಸಮಯ ಬಂದಾಗ ಅವಳನ್ನು ತಕ್ಷಣ ದಾವಣಗೆರೆಯ ಮೆಡಿಕಲ್ ಕಾಲೇಜಿಗೆ ಸೇರಿಸಿದರು. ಮನುಜರ ಆಸಕ್ತಿ ಯಾವ ಸಂದರ್ಭದಲ್ಲಿ ಯಾವಾಗ ಬದಲಾಗುತ್ತವೆಯೊ ಬಲ್ಲವರ್‍ಯಾರು ಎಂಬಂತೆ ಊರ್ಮಿಳೆಯ ಹವ್ಯಾಸ, ಬಯಕೆಗಳೆ ಬೇರೆಯಾಗಿದ್ದವು. ಅವಳದು ಎಲ್ಲದಕ್ಕೂ ತದ್ವಿರುದ್ಧದ ಸ್ವಭಾವ. ಯಾಕೆಂದರೆ ಅವಳು ಆಯ್ದುಕೊಂಡದ್ದು ಎಂ.ಬಿ.ಬಿ.ಎಸ್ಸು. ಆದರೆ ಚರಿತ್ರೆಯೆಂದರೆ ಪ್ರಾಣ ಹೋಗುವಷ್ಟು ಇಷ್ಟಪಡುತ್ತಿದ್ದಳು. ಪರೀಕ್ಷೆ ಇನ್ನೆರಡು ದಿನ ಇವೆ ಎಂದಾಗಲು ಕೋರ್ಸಿಗೆ ಸಂಬಂಧಿಸಿದ ಪುಸ್ತಕ ಮುಟ್ಟದೇ ಮೈಕಲೇಂಜಲೋ ಕಲಾಕೃತಿಗಳ ಬಗೆಗಿನ ವಿಮರ್ಶೆ ಓದುತ್ತಿದ್ದಳು. ಇದು ಅವಳ ಸಹಜ ಸ್ವಭಾವವೆಂದು ಭಾವಿಸಿದರು ಮತ್ತೆ ಕಾಲೇಜಿನಲ್ಲಿ ಇವಳ ವರ್ತನೆ ಬೇರೆಯಾಗಿರುತಿತ್ತು. ಕಾಲೇಜಿಗೆ ಹೊರಡುವಾಗ ಮಟ್ಟಸವಾಗಿ ಒಗೆದು ಸ್ಟಾರ್ಚ್

ಮಾಡಿದ ಕಾಟನ್ ಸೀರೆಯನ್ನು ಮೈತುಂಬಾ ಉಟ್ಟುಕೊಂಡು ಹೊರಡುತ್ತಿದ್ದಳು. ಆದರೆ ಅವಳಿಗೆ ತೀರ ಖಾಸಾ ಅನ್ನಿಸುವಂತ ಗೆಳತಿಯರ್‍ಯಾರೂ ಇರಲಿಲ್ಲ. ಉಟ್ಟ ಸೀರೆ ಮುದುರಾಗದಷ್ಟು ಗಂಭೀರವಾಗಿ ಕಾಲೇಜಿನಲ್ಲಿ ಓಡಾಡಿಕೊಂಡು ಸಂಜೆಗೆ ರೂಮಿಗೆ ಮರಳಿದಳೆಂದರೆ ಮತ್ತೆ ಅವಳ ವ್ಯಕ್ತಿತ್ವದ, ಬಯಕೆಗಳೇ ಬೇರೆ. ಅವಳ ವ್ಯಕ್ತಿತ್ವ ಅಥವಾ ವರ್ತನೆಗೆ, ಯಾವ ಕಾರಣವನ್ನು ಊಹಿಸಲಾಗದಂತೆ ಹುಡುಗಿ, ಬೆಳಗ್ಗೆ ಇದ್ದಹಾಗೆ ಮಧ್ಯಾಹ್ನ ಇಲ್ಲ, ಮಧ್ಯಾಹ್ನ ಇದ್ದ ಹಾಗೆ ಸಂಜೆ ಇರುವುದಿಲ್ಲ. ಇದೆಲ್ಲದರ ಹೊರತಾಗಿ ಹಾಸ್ಟೆಲ್ ಕೋಣೆಯೊಳಗೆ ಬಂದರೆ ಅವಳ ಉಡುಪಿನಿಂದ ಹಿಡಿದುಕೊಂಡು ಅವಳು ನಡೆದುಕೊಳ್ಳುವ ರೀತಿಯೇ ವಿಲಕ್ಷಣವಾದುದು.

ಆಧುನಿಕ ಜಾಗತೀಕರಣದ ಪ್ರಭಾವ ರವಿಯವರ ಕಾದಂಬರಿ ಪಾತ್ರಗಳನ್ನು ಗಮನಿಸಿದಾಗ ತಿಳಿದುಬರುತ್ತದಾದರೂ ಊರ್ಮಿಳೆಯ ಪಾತ್ರ ಅದನ್ನು ಮೀರಿ ನಿಂತದ್ದು ಎಂದು ಹೇಳಬಹುದು. ಯಾಕೆಂದರೆ ಅವಳು ಹಾಸ್ಟೆಲ್ ರೂಮಿಗೆ ಮರಳಿದಳೆಂದರೆ ದೊಗಳೆ ದೊಗಳೆಯಾದ ಟೀ ಷರ್ಟ ಧರಿಸುತ್ತಾಳೆ. ಸೊಂಟಕ್ಕೊಂದು ಬಿಗಿಯಾದ ಪುಟ್ಟ ಸ್ವಿಮ್ಮಿಂಗ ಟ್ರಂಕ್ ಬಿಟ್ಟರೆ ಮತ್ತೊಂದನ್ನು ಧರಿಸುತ್ತಿದ್ದಿಲ್ಲ. ದೊಗಳೆ ಟೀ ಷರ್ಟ ಅರ್ಧ ತೊಡೆ ಮುಚ್ಚಿಹಾಕಿದರು ಹಾಸ್ಟೆಲಿನ ಕಾರಿಡಾರುಗಳಲ್ಲಿ ಓಡಾಡುತ್ತಿದ್ದರೆ, ಹುಡುಗಿರಂಥ ಹುಡುಗಿಯರೇ ನಿಂತು ನಿಬ್ಬೆರಗಾಗಿ ನೋಡುವಂತ ಮೈಮಾಟ ಅವಳದು. ಪ್ರಪಂಚದ ಖಬರೇ ಇಲ್ಲದ ಮನಸ್ಥಿತಿಯ ಹುಡುಗಿ ರಾತ್ರಿ ತೀರ ಮಲಗುವ ಹೊತ್ತಿಗೆ ಸಿಗರೇಟ ಸೇದುವ ಅಭ್ಯಾಸ. ಊರ್ಮಿಳಾ ಸಿಗರೇಟ್ ಸೇದದ ದಿನಗಳೇ ಇಲ್ಲ ಎಂಬಂತಿದ್ದವು. ಆದರೆ ಒಂದು ದಿನಕ್ಕೆ ರಾತ್ರಿ ಮಲಗುವಾಗ ತೃಪ್ತಿಯಾಗುವಂತೆ ಒಮ್ಮೆ ಸೇದಿ ಮಲಗುತ್ತಾಳೆ. ಆದರೆ ಭಾನುವಾರದ ರಾತ್ರಿ ಮಾತ್ರ ಕೋಣೆಯ ದೀಪಗಳನ್ನೆಲ್ಲ ಆರಿಸಿ ಜಿನ್‌ಗೆ ಲೆಮನ್ ಕಾರ್ಡಿಯಲ್ ಬೆರೆಸಿಕೊಂಡು ಒಬ್ಬಳೆ ಕುಡಿಯುತ್ತಾಳೆ. ಇಷ್ಟೆಲ್ಲ ಹವ್ಯಾಸಗಳಿದ್ದ ಹುಡುಗಿ ಪ್ರಾರಂಭದಲ್ಲಿ ಒಂದು ದಿನವು ಕಾಲೇಜಿನಲ್ಲಿ ಒಬ್ಬ ಹುಡುಗನೊಂದಿಗೆ ಅಥವಾ ಗಂಡಸರ ಬಗ್ಗೆ ಮಾತನಾಡಿದ್ದನ್ನು ಅವಳ ರೂಂ ಮೇಟ್ ಪ್ರಾರ್ಥನಾ ಅಪ್ಪಿ ತಪ್ಪಿಯು ಕೇಳಿಕೊಂಡಿರಲಿಲ್ಲ. ಸಾಮಾನ್ಯವಾಗಿ ಇಂಥ ಲಕ್ಷಣಗಳಿರುವ ಹುಡುಗಿಯರಲ್ಲಿ ಹುಡುಗರ ಸ್ನೇಹವಿರುವುದು, ಅವರೊಂದಿಗೆ ಹರಟೆ ಹೊಡೆಯುವುದು, ಮೋಜು ಮಸ್ತಿ ಇವ್ಯಾವು ಈ ಪಾತ್ರದ ವ್ಯಕ್ತಿತ್ವದಲ್ಲಿ ಕಂಡುಬಂದಿಲ್ಲ. ಅಸಲಿಗೆ ತನ್ನ ಕೋಣೆಯ ಗೆಳತಿಯೊಂದಿಗೆ ಅಷ್ಟಕಷ್ಟೆ ಮಾತು. ಆದರೆ ಸಮಾಜದಲ್ಲಿ ಸಂಬಂಧಗಳ ಬೆಸುಗೆಗಳು ಬೆಸೆಯುತ್ತವೆ. ಊರ್ಮಿಳೆಯ ಪಾತ್ರದೊಂದಿಗೆ ಯಾವ ರೀತಿಯ ಸಂಬಂಧಗಳು ಬೆಳೆಯುತ್ತವೆಯೋ ಎಂಬುದನ್ನು ರವಿಯವರು ತುಂಬಾ ನಾಟಕೀಯವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಒಂದು ಹೆಣ್ಣು ಈ ರೀತಿ ವರ್ತಿಸಲು ಸಾಧ್ಯವೇ ಎಂದು ನಿಬ್ಬೆರಗಾಗುವಂತೆ ಈ ಪಾತ್ರಕ್ಕೆ ಜೀವ ತುಂಬಿದ್ದಾರೆ.

ಒಂದು ಹೆಣ್ಣಿನ ಭಾವನೆಗಳು ಮತ್ತೊಂದು ಹೆಣ್ಣಿಗೆ ಅರ್ಥವಾಗುತ್ತವೆ ಎಂಬುದನ್ನು ತಿರಸ್ಕರಿಸಿದ ರವಿಯವರು. ತಮ್ಮ ಒಡನಾಡಿಗಳ ಭಾವನೆಗಳೆ

ಅರ್ಥವಾಗದಂತೆ ಚಿತ್ರಿಸಿದ್ದಾರೆ. ಊರ್ಮಿಳೆಯನ್ನು ಯಾವ ರೀತಿ ಅರ್ಥಮಾಡಿಕೊಳ್ಳಬೇಕು. ಇವಳೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕೆಂಬುದು ಪ್ರಾರ್ಥನಾಳಿಗೆ ದಿಗಿಲು ಪ್ರಾರಂಭವಾಗುತ್ತದೆ. ಆದರೆ ಒಂದು ದಿನ ಪ್ರಾರ್ಥನಾಳೊಂದಿಗೆ ಮಾತಿಗಿಳಿದು ಸೂಳೆ ಥರಾ ಬದುಕಬೇಕು ಅಂತ ನಂಗೆ ತುಂಬಾ ಸಲ ಆಸೆಯಾಗುತ್ತೆ. ಸೂಳೆಗೆ ಗಂಡ ಇರಲ್ಲ. ಅಡುಗೆ ಇರಲ್ಲ. ಯಾರಿಗೂ ಕಾಯಬೇಕಾಗಿಲ್ಲ. ಮಕ್ಕಳೇ ಹುಟ್ಟೋದಿಲ್ಲ. ಅತ್ತೆಯ ಕಾಟವಿರೋದಿಲ್ಲ. ಮಾವನ ಅಂಕೆಯಿರೋದಿಲ್ಲ. ಸೂಳೆ ಈಸ್ ಇಂಡಿಪೆಂಡೆಟ್. ಎಲ್ಲಕ್ಕಿಂತ ಮುಖ್ಯವಾಗಿ ಸೂಳೆಗೆ ಡಾಕ್ಟರಾಗಲೇಬೇಕು ಅಂತ ಒತ್ತಾಯವಿರೋದಿಲ್ಲ. ನಾನು ಡಾಕ್ಟರ್‌ನ ದ್ವೇಷಿಸುತ್ತಿನಿ ಎಂದು ಸಿಗರೇಟು ಅರ್ಧಕ್ಕೆ ಮುರಿದು ಹಾಕಿ ಮಲಗಿ ಬಿಟ್ಟಿದ್ದಳು. ರವಿಯವರು ಯಾಕೆ ಈ ಪಾತ್ರಕ್ಕೆ ಇಷ್ಟೊಂದು ಜೀವತುಂಬಿ ವಿಲಕ್ಷಣ ವರ್ತನೆಗೆ ಒಳಗಾಗುವಂತೆ ಮಾಡಿದ್ದಾರೆ ಎಂಬುದು ಅರ್ಥವಾಗದ ಸಂಗತಿ. ಒಮ್ಮೆ ಮಾನಸಿಕ ಆಘಾತಕ್ಕೆ ಒಳಗಾದಾಗ ಇಷ್ಟೊಂದು ಆಲೋಚನೆ ಮಾಡಲು ಸಾಧ್ಯವಾ? ಎಂದು ಪ್ರಶ್ನಿಸುವಂತಾಗಿದೆ. ಎಲ್ಲರೂ ಡಾಕ್ಟರ್ ಆಗಿ ಜನಸೇವೆ ಮಾಡುತ್ತ ಜನರ ಪ್ರೀತಿಗೆ ಪಾತ್ರರಾಗಲು ಹಂಬಲವಿಟ್ಟುಕೊಂಡಾಗ ರವಿಯವರು ಊರ್ಮಿಳಾ ಪಾತ್ರಕ್ಕೆ ನಾನು ಸೂಳೆ ತರಹ ಬದುಕಬೇಕು. ಸೂಳೆಗೆ ಗಂಡ ಇರಲ್ಲ ಎಂಬುದನ್ನು ಗಮನಿಸಲಾಗಿ ಪುರುಷ ಸಮಾಜದ ಮೇಲೆ ಆಕೆಯ ದ್ವೇಷ ಭಾವನೆ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಇಷ್ಟು ಚಿಕ್ಕ ವಯಸ್ಸಿನ ಹುಡುಗಿಯಲ್ಲಿ ಈ ರೀತಿ ತಿಳುವಳಿಕೆ ಇರುವುದು ಸಾಧ್ಯವೇ? ಎಂಬುದನ್ನು ಈ ಒಂದು ಕಾದಂಬರಿಯಿಂದ ತಿಳಿದುಕೊಳ್ಳಬಹುದು.

'ರೋಗಿ ಬಯಸಿದ್ದು ಹಾಲು ಅನ್ನ, ಡಾಕ್ಟರ್ ಸಲಹೆ ಕೊಟ್ಟಿದ್ದು ಹಾಲು ಅನ್ನ' ಎಂಬ ಯುಕ್ತಿಯಂತೆ ಒಂದು ದಿನ ಹಾಸ್ಟೆಲ್‌ನೊಳಕ್ಕೆ ಪ್ರಾರ್ಥನಾಳನ್ನು ಭೇಟಿಯಾಗಿರಲು ಅನಿರೀಕ್ಷಿತವಾಗಿ ಕಾವೇರಮ್ಮನ ಆಗಮನವಾಯಿತು. ಆದರೆ ಪ್ರಾರ್ಥನಾಳಿಗೆ ಊರ್ಮಿಳೆಯದೇ ದುಗುಡಾಗಿತ್ತು. ಸಾಯಂಕಾಲದ ಹೊತ್ತು ಮೈ ಮೇಲೊಂದು ಸ್ವಿಮ್ಮಿಂಗ್ ಟ್ರಂಕ್ ಮತ್ತು ಭುಜಕ್ಕೊಂದು ದೊಗಳೆ ಟೀ ಷರ್ಟ ಬಿಟ್ಟರೆ ಮತ್ತೇನನ್ನು ಹಾಕಿಕೊಂಡಿರುವುದಿಲ್ಲ. ಖುದ್ದು ವಾರ್ಡನ್ನೇ ಬಂದರು ಅದೇ ದಿರಿಸಿನಲ್ಲಿ ಅವರೊಂದಿಗೆ ಮಾತಿಗಿಳಿಯುವ ಹುಡುಗಿ. ಕಡೆ ಪಕ್ಷ ಕೋಣೆಗೆ ಅತಿಥಿಗಳು ಬಂದಾಗಲಾದರೂ ಒಂದು ನೈಟಿ ಹಾಕಿಕೊಳ್ಳುತ್ತಿರಲಿಲ್ಲ. ಇದೆಲ್ಲ ದಿಗಿಲಿನೊಂದಿಗೆ ಪ್ರಾರ್ಥನಾ ಕಾವೇರಮ್ಮನ ಕರೆದುಕೊಂಡು ಕೋಣೆ ಹೊಕ್ಕಳು. ಆದರೆ ಆ ಸಮಯದಲ್ಲಿ ಊರ್ಮಿಳಾ ಕೈಯಲ್ಲಿ ದೊಡ್ಡ ಗಾತ್ರದ ಹಿಸ್ಟರಿ ಪುಸ್ತಕವೊಂದನ್ನು ಓದುತ್ತಿರುತ್ತಾಳೆ. ಕೋಣೆಯೊಳಗೆ ಯಾರು ಬಂದಿದ್ದಾರೆ ಎಂಬುದನ್ನು ಲೆಕ್ಕಿಸದೇ ಓದಿನಲ್ಲಿ ಮಗ್ನಳಾಗಿದ್ದಳು. "ಇವಳು ನನ್ನ ರೂಂ ಮೇಟ್ ಊರ್ಮಿಳಾ ಅಂತ ಸೆಕೆಂಡ್ ಇಯರ್ ಓದ್ತಾ ಇದ್ದಾಳೆ ಅಂತ ಕಾವೇರಮ್ಮನಿಗೆ ಪರಿಚಯಿಸಿದಳು ಪ್ರಾರ್ಥನಾ. ಆಗ ಮಾತ್ರ ಒಮ್ಮೆ ಕೋಣೆಯೊಳಕ್ಕೆ ಬಂದಾಕೆಯ ಕಡೆಗೆ ನಿರ್ಲಕ್ಷ್ಯದಿಂದ ತಿರುಗಿ ನೋಡಿ "ಹಲೋ" ಎಂದು ಸುಮ್ಮನೆ ತಮ್ಮ ಪಾಡಿಗೆ ತಾ ಉಳಿದಳು. ಆದರೆ

ಊರ್ಮಿಳೆಯ ದಿರಿಸು ಅವಳ ನಗ್ನತೆಯನ್ನು ನೋಡಿದ ಕಾವೇರಮ್ಮ ಇದು ಈ ಲೋಕದ ಹುಡುಗಿಯೇ ಅಲ್ಲವೆನಿಸಿ ಸುಮ್ಮನಾದಳು. ಸಮಾಜದಲ್ಲಿ ಸಂಬಂಧಗಳು ಒಡನಾಟದಿಂದ ವೃದ್ಧಿಸುತ್ತವೆ ಎಂಬ ಮಾತಿಗೆ ಊರ್ಮಿಳೆಯ ಪಾತ್ರ ಸೃಷ್ಟಿ ತದ್ವಿರುದ್ಧವಾಗಿದೆ ಎಂದು ಹೇಳಬಹುದು. ಯಾವಾಗಲೂ ರವಿಯವರು ಸಮಾಜ ಸಂಬಂಧಗಳ ಬೆಸುಗೆಗೆ ಪ್ರಯತ್ನಿಸುತ್ತಾರೆ. ಆದರೆ ಈ ಕಾದಂಬರಿಯಲ್ಲಿ ವೃತ್ತಿ ಸಂಬಂಧ ಬೆಸೆಯಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಯಾಕೆಂದರೆ ಪ್ರಾರ್ಥನಾ ಕಾವೇರಮ್ಮ, ಹಿಮವಂತನ ವಿಷಯ ಮಾತನಾಡುತ್ತ ಕಾವೇರಮ್ಮ ನಾನು ಇಲ್ಲಿಗೆ ಬಂದ ವಿಷಯ ಮಾತ್ರ ಅಪ್ಪಿ ತಪ್ಪಿಯೂ ಹಿಮವಂತನಿಗೆ ಹೇಳಬೇಡಮ್ಮ ಎಂದು ವಿನಂತಿಸಿಕೊಂಡಳು. ಆವಾಗ ಪ್ರಾರ್ಥನಾಳಿಗೆ ಗೊಂದಲ ಶುರುವಾಗಿ ನಾನು ಆತನಿಂದ ಯಾವ ವಿಷಯವನ್ನು ಮುಚ್ಚಿಡುವುದಿಲ್ಲ. ನೀವು ಪದೇ ಪದೇ ಹೇಳುತ್ತಿದ್ದಿರಿ ಹಿಮವಂತನಿಗೆ ನೀವು ಬಂದು ಹೋದ ಸುದ್ದಿ ಗೋತ್ತಾದ್ರೆ ಏನಾಗುತ್ತೆ? ಎಂದು ಪ್ರಶ್ನಿಸಿದಳು. ಇದೆಲ್ಲವನ್ನು ಕಿಟಕಿಯಲ್ಲಿ ಓದುತ್ತಾ ಕುಳಿತ ಊರ್ಮಿಳೆ ಇತ್ತ ಗಮನಕೊಡಲಾರಳು ಅಂದುಕೊಂಡೆ ಅವಳ ಜೊತೆ ಮಾತನಾಡುತ್ತಿದ್ದಳು. ಆ ಸಮಯದಲ್ಲಿ ಕಾವೇರಮ್ಮ "ನಾವು ಹಿಂಗೆಲ್ಲಾ ಸಂಸಾರಸ್ತರ ಮನೆಯ ಹೆಣ್ಣು ಮಕ್ಕಳನ್ನು ನೋಡಕ್ಕೆ ಬರಬಾರ್ದು ಕಣ್ಣಮ್ಮ ನಾವು.... ಕಸುಬಿನೋರು.... "ಅಂತಾ ತುಂಬಾ ಇಳಿಧ್ವನಿಯಲ್ಲಿಯೇ ಹೇಳಿದ್ದಳು. 'ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ' ಎಂಬ ಯುಕ್ತಿಯಂತೆ 'ನಾವು ಕಸುಬಿನೋರು' ಎಂಬ ಮಾತು ಪ್ರಾರ್ಥನಾಳ ಅಂತರಾಳಕ್ಕೆ ಮುಳ್ಳು ಮೊನೆಯಂತೆ ತಾಕಿ ಅದಕ್ಕೆ ತಕ್ಷಣ ಪ್ರತಿಕ್ರಿಯಿಸಿದವಳು ಊರ್ಮಿಳೆ ಕೈಯಲ್ಲಿದ್ದ ಪುಸ್ತಕ ಎತ್ತಿಟ್ಟು ಕಾವೇರಮ್ಮನ ಹತ್ತಿರ ಬಂದು ಅವಳನ್ನೆ ದಿಟ್ಟಿಸಿ ನೋಡುತ್ತಾ "ನಿಮ್ಮ ಹೆಸರೇನು ಹೇಳಿ?" ಕೇಳಿಯೇ ಬಿಟ್ಟಳು ಊರ್ಮಿಳಾ ಆಗ ಕಾವೇರಿ ಅಂತ ಎಂದು ಉತ್ತರಿಸುವುದೇ ತಡ 'ಕರೆಕ್ಟ' ಕಸೂತಿ ಕಾವೇರಮ್ಮ ಅಂದ್ರೆ ನೀವೇ ಅಲ್ವಾ? ತುಂಬಾ ಕೇಳಿದ್ದ ನಿಮ್ ಬಗ್ಗೆ ತುಂಬಾ ಸಲ ನಿಮ್ಮನೇಗೆ ಬಂದು ನಿಮ್ಹತ್ರ ಮಾತಾಡಬೇಕು ಅಂದಕ್ಕೋತಾ ಇದ್ದೆ. ನಂಗೆ ಸೂಳೆ ಆಗಬೇಕಂತ ತುಂಬ ಇಷ್ಟ ಎಂದು ಮಾತು ಮುಂದುವರಿಸಿದಳು. ಸಂಬಂಧಗಳು ಅವರವರ ವೃತ್ತಿ ಬಯಕೆಗಳ ಆಸೆಯಿಂದ ಬೆಸೆದುಕೊಳ್ಳುತ್ತವೆ ಎಂಬುದನ್ನು ಗುರುತಿಸಬಹುದು. ಯಾರೊಂದಿಗೂ ಮಾತನಾಡದೇ, ತನ್ನಷ್ಟಕ್ಕೆ ತಾನಿರುವ ಹುಡುಗಿ ಕಾವೇರಮ್ಮನ ಹೆಸರು ಕೇಳಿದ ತಕ್ಷಣ ಇನ್ನಿಲ್ಲದ ಉಲ್ಲಾಸ ಬರಿತಳಾಗಿ ವಿಚಾರಿಸುತ್ತಾಳೆ. ಬಯಕೆ-ಬಯಕೆಗಳು ಸೇರಿದಾಗ ಸಂಬಂಧಗಳು ಮತ್ತಷ್ಟು ದಿಟ್ಟವಾಗುತ್ತವೆ ಎಂಬುದನ್ನು ರವಿಯವರ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಈ ಕಾದಂಬರಿಯಲ್ಲಿ ಊರ್ಮಿಳೆ ಪಾತ್ರ ಯಾವುದೇ ಸಾಮಾಜಿಕ ಅಡೆತಡೆ ಇಲ್ಲದೇ ಮೂಡಿಬಂದಿರುವುದು ಕಂಡುಬರುತ್ತದೆ.

ವೇಶ್ಯೆಯರಿಗೆ ಕೆಲವೊಂದು ಸಾಮಾಜಿಕ ಕಟ್ಟುಪಾಡುಗಳಿರುತ್ತವೆ. ಅವುಗಳಿಂದಾಗಿಯೇ ಕಾವೇರಮ್ಮ ಒಂದು ರೀತಿಯ ಭಯದ ಮಾತುಗಳನ್ನಾಡಿ ಎದ್ದು

ಹೋದ ಮೇಲೆ ಪ್ರಾರ್ಥನಾಳಲ್ಲಿ ವಿಷಾದ ಭಾವ ಮೂಡಿತು. ಒಬ್ಬ ಕಸುಬುಗಾರ್ತಿಯಳೊಂದಿಗೆ ಹಿಮವಂತನಿಗೆ ಪರಿಚಯಗಳೇಕಿವೆ? ಎಂಬ ಸಂಶಯ ಭಾವನೆ ಅವಳಲ್ಲಿ ಮೂಡುತ್ತದಾದರೂ ಹಿಮವಂತನಲ್ಲಿ ಆಕೆಗೊಂದು ಗೌರವದ ಭಾವನೆ ಇರುವುದು ಆಕೆಯ ಮಾತಿನಲ್ಲೆ ಅರ್ಥವಾಗುತ್ತಿತ್ತು. ಆದರೆ ಇಡೀ ಮೆಡಿಕಲ್ ಕಾಲೇಜಿಗೆ ಗೊತ್ತಿರುವ ಕಸಬುಗಾರ್ತಿ. ಕಾವೇರಮ್ಮ ನನ್ನ ಕೋಣೆಯೊಳಕ್ಕೆ ಬಂದಿದ್ದಾಳೆಂದರೆ ನಾಳೆ ಕಾಲೇಜಿನಲ್ಲಿ ನನ್ನ ಹೆಸರು ಏನಾಗಬಹುದು ಎಂದು ಯೋಚಿಸುತ್ತಾಳೆ. ರವಿಯವರು ತಮ್ಮ ಕಾದಂಬರಿಯಲ್ಲಿ ಎರಡು ಸ್ತ್ರೀ ಪಾತ್ರಗಳಲ್ಲಿ ಭಿನ್ನತೆಯನ್ನು ತಂದಿರುವುದು ಗಮನಿಸಬಹುದು. ಸಮಾಜದಲ್ಲಿ ಒಳ್ಳೆಯ ಹೆಸರು ಇರುವವರು ಆಲೋಚಿಸುವ ವಿಚಾರಗಳಿಗೂ ಇನ್ನೂಳಿದವರಿಗೂ ಈ ಪಾತ್ರಗಳಿಂದ ಭಿನ್ನತೆಯನ್ನು ಕಂಡುಕೊಳ್ಳಬಹುದು. ಒಂದೇ ಕಾದಂಬರಿಯಲ್ಲಿ ರವಿಯವರು ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಎಂಬಂತೆ ಚಿತ್ರಿಸಿದ್ದಾರೆ. ಯಾಕೆಂದರೆ ಊರ್ಮಿಳೆ ಮಾತ್ರ ತುಂಬಾ ಉಲ್ಲಸಿತಳಾಗಿದ್ದಳು. ಊರ್ಮಿಳೆಗೆ ಕಾವೇರಮ್ಮ ಮತ್ತು ಅವಳ ಕಸುಬು ಎಂದರೆ ಪಂಚಪ್ರಾಣ. ಆದ್ದರಿಂದ ಪ್ರಾರ್ಥನಾಳಿಗಿಂತ ಹೆಚ್ಚಾಗಿ ಊರ್ಮಿಳೆಯೇ ಜಾಸ್ತಿ ಮಾತನಾಡಿದ್ದಳು. ಅವಳ ಬಗ್ಗೆ, ಕಸುಬಿನ ಬಗ್ಗೆ, ಮನೆಯಲ್ಲಿರುವ ಹುಡುಗಿಯರ ಬಗ್ಗೆ, ಹೀಗೆ ಹತ್ತು ಹಲವು ಪ್ರಶ್ನೆ ಕೇಳಿದ್ದಳು. ನಿಮ್ಮ ಮನೆಗೆ ನಾನು ಬೇಕೆನ್ನಿಸಿದಾಗ ಬರಬಹುದಾ? ಫೋನ್ ನಂಬರೇನು? ಸಾಮಾನ್ಯವಾಗಿ ಗಂಡಸರು ಬರದೆ, ನೀವು ನೀವೇ ಇರುವಂತಹ ಸಮಯ ಯಾವುದು? ಇಂತಹ ಯಾವ ಪ್ರಶ್ನೆಗಳಲ್ಲಿಯೂ ಗೇಲಿಮಾಡಬೇಕೆಂಬ ಮನೋಭಾವವಿರದೆ ಕೇಳಿದ್ದಳು. ಇದಲ್ಲದೆ ತನ್ನ ತಂದೆಗೂ ಅದನ್ನೆಲ್ಲ ಹೇಳಿದ್ದಳು. "ಐ ಮೆಟ್ ಎ ಪ್ರಾಸ್ಟಿಟ್ಯೂಟ್" ಅಂತ ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಎಲ್ಲಿಯ ಯಾವ ಜನ್ಮ ಋಣಾನುಬಂಧವೋ ಆ ಕಸೂತಿ ಕಾವೇರಮ್ಮನೆಲ್ಲಿ ಮೆಡಿಕಲ್ ಕಾಲೇಜಿನ ಈ ಹುಡುಗಿ ಊರ್ಮಿಳಾ ಎಲ್ಲಿಯವಳು. ಆದರೂ ಅವಳ ವೃತ್ತಿಯ ಬಗ್ಗೆ ಗೌರವ ತಾನೊಂದು ಸಲವಾದರೂ ಅಲ್ಲಿಗೆ ಹೋಗಲೇಬೇಕೆಂಬ ಹಠ. ಇದು ಯಾವ ಜನ್ಮದ ಆಸೆಯೋ, ಬಯಕೆಯೋ ಅವಳದು ಆ ದಿನ ಸಂಜೆ ಜಿನ್ ಮತ್ತು ಲೆಮನ್ ಕಾರ್ಡಿಯಲ್ಲ ತಂದುಕೊಂಡು ಇನ್ನಿಲ್ಲದ ಉಲ್ಲಾಸದಿಂದ ಪ್ರಾರ್ಥನಾಳೊಂದಿಗೆ ಹರಟುತ್ತಾ ಕುಡಿದು ಮುಗಿಸಿದಳು. ಆದರೆ ಪ್ರಾರ್ಥನಾಳಿಗೆ ಇದ್ಯಾವುದು ಇಷ್ಟವಿರಲಿಲ್ಲ. ಇದು ಊರ್ಮಿಳೆಯ ಅಧಃಪತನದ ಆರಂಭವೇ? ಎಂದು ಮನಸ್ಸಿನಲ್ಲಿ ಕೇಳಿಕೊಂಡು ಸುಮ್ಮನಾದಳು.

ಕೌಟುಂಬಿಕ ವ್ಯವಸ್ಥೆಯಲ್ಲಿ ಪುರುಷರಿಗೆ ಪ್ರಾಧಾನ್ಯತೆ ಇರುವುದು ಇಡೀ ಕುಟುಂಬದ ಜವಾಬ್ದಾರಿ ಆತನ ಹಿಡಿತದಲ್ಲಿರುತ್ತದೆ. ಪುರುಷರಿಗೆ ಯಾವುದೇ ಸಾಮಾಜಿಕ ಕಟ್ಟಳೆಗಳು ಅಥವಾ ನಿರ್ಬಂಧಗಳಿರುವುದಿಲ್ಲ. ಆತ ಎಲ್ಲದರಿಂದಲೂ ಸ್ವತಂತ್ರನಾಗಿರುತ್ತಾನೆ. ಆದರೆ ಸ್ತ್ರೀ ಮಾತ್ರ ಆತನ ಅಧೀನಳಾಗಿರುತ್ತಾಳೆ. ಇದು ಸಾಮಾನ್ಯವಾಗಿ ಕಂಡುಬರುವ ಸಾಮಾಜಿಕ ವ್ಯವಸ್ಥೆ. ಅಲ್ಲಿ ಸ್ತ್ರೀ ಮುಖ ಪ್ರೇಕ್ಷಕಳು.

ಆದರೆ ರವಿಯವರ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಪುರುಷನ ಪ್ರತಿಯೊಂದು ಕಾರ್ಯಗಳನ್ನು ಊರ್ಮಿಳೆಯ ಪಾತ್ರದ ಮೂಲಕ ಅನಾವರಣಗೊಳಿಸಿರುವುದು ಕಂಡುಬರುತ್ತದೆ. ಪುರುಷ ಸಮಾಜದ ಮೇಲೆ ಆಕೆಯಲ್ಲಿ ಇರುವ ಒಳಮನಸ್ಸಿನ ಅಭಿಪ್ರಾಯಗಳನ್ನು ಬಹಿರಂಗಗೊಳಿಸಿದ್ದಾಳೆ. ಒಂದು ದಿನ ಪ್ರಾರ್ಥನಾಳ ಬಟ್ಟೆಗಳನ್ನೆಲ್ಲ ಒಗೆದು ಇಸ್ತ್ರೀ ಮಾಡಿ ಇಟ್ಟುಬಿಟ್ಟಿದ್ದಳು. ಇದಕ್ಕೆ ಅವಳು ತಕರಾರು ಮಾಡಿದರೆ, "ನೋಡೂ ನನ್ನನ್ನು ಯಾವನು ಮದ್ವೆ ಆಗ್ತಾನೋ? ಅಸಲಿಗೆ ನಂಗೆ ಮದುವೆ ಅಂತ ಒಂದು ಆಗುತ್ತೋ ಇಲ್ಲೋ ಗೊತ್ತಿಲ್ಲ. ಆದರೆ ಯಾವ ಕಾರಣಕ್ಕೂ ಗಂಡನದೊಂದು ಬನೀನು ಕೂಡ ಒಗೀಬಾರ್ದು ಅಂತ ಏಳನೇ ಕ್ಲಾಸಲ್ಲಿದ್ದಾಗಲೇ ಆಣೆ ಮಾಡ್ಕೊಂಡು ಬಿಟ್ಟಿದೀನಿ. ಗಂಡಸಿಗೆ ಸೇವೆ ಮಾಡೋಕೆ ಹೋದರೆ, ಅದನ್ನ ಅವನು ಪ್ರೀತಿ ಅಂದ್ಕೋಳಲ್ಲ. ಸೇವೆ ಮಾಡಿಸ್ಕೋಳ್ಳೋದು ತನ್ನ ಗಂಡಸ್ತನ ಅಂದುಕೋತಾನೆ. ಹೆಂಗಸು ಕೂಡ ಸೇವೆ ಮಾಡೋದೇ ತನ್ನ ಕರ್ತವ್ಯಾನೇನೋ ಅಂತ ಗಂಡನ ಅಂಡರ್‌ವೇರ್‌ನ ಭಗವಂತನ ಬಟ್ಟೆ ಅನ್ನೋಷ್ಟು ಶ್ರದ್ಧೆಯಿಂದ ಒಗೆದು, ಒಣಗಿಸಿ ಮಡಚಿಡ್ತಾಳೆ. ಅದನ್ನೇ ಹಾಕ್ಕೊಂಡು ಹೋಗಿ ಹಾದರ ಮಾಡಿ ಬರ್ತಾನೆ ಗಂಡಸು. ಹೆಂಗಸು ಹಳೇ ಸೀರೆಯ ಸೆರಗಿನಲ್ಲಿ ಕಣ್ಣೀರು ಇಂಗಿಸ್ತಾಳೆ. ಗಂಡ–ಹೆಂಡತಿ ಅನ್ನೋ ಸಂಬಂಧವೇ ಅಸಹ್ಯಕರವಾದ್ದು. ಅವರಿಬ್ಬರೂ ಕೇವಲ ಗಂಡು ಹೆಣ್ಣು ಅದ್ಕೊಂಡು ಜೊತೆಯಲಿರ್ತಾರಲ್ಲ? ಅಲ್ಲೀವರೆಗೂ ಮಾತ್ರ ಉಳಿದಿರುತ್ತೆ ಪ್ರೀತಿ" ಎಂಬುದನ್ನು ಗಮನಿಸಿದಾಗ ಪುರುಷನ ಪ್ರತಿಯೊಂದು ವಿಚಾರದಲ್ಲಿಯು ಬಹಳ ಆಳವಾಗಿ ತಿಳಿದುಕೊಂಡಂತೆ ಭಾಸವಾಗುತ್ತದೆ. ರವಿಯವರು ಸ್ತ್ರೀ ಪಾತ್ರದಲ್ಲಿ ಇಷ್ಟೊಂದು ಆಳವಾಗಿ ವಿವರವಾಗಿ ಚರ್ಚಿಸುತ್ತಿರುವುದು ಅವರ ಸ್ತ್ರೀ ಕಾಳಜಿಯೋ ಅಥವಾ ಇದು ಸ್ತ್ರೀ ಪ್ರತಿಭಟನೆಯ ಪ್ರತೀಕ ಎಂದು ಚಿತ್ರಿಸಿದ್ದಾರೆಯೋ ಎಂಬುದು ದ್ವಂದ್ವರೂಪದಲ್ಲಿದೆ.

ಪ್ರೀತಿಯಲ್ಲಿ ಎಳ್ಳಷ್ಟು ಆಸಕ್ತಿ ಇಲ್ಲದ ಊರ್ಮಿಳಾ ಪಾತ್ರದಲ್ಲಿ ರವಿಯವರು ಬೇರೊಬ್ಬರಿಂದ ಆಕೆಗೆ ಪ್ರೀತಿಯ ಸಂದೇಶ ಎದುರಾದಾಗ ಆಕೆ ಪ್ರತಿಕ್ರಿಯೇ ಹೇಗಿರುತ್ತದೆಂಬುದನ್ನು ಹಾಗೂ ಸ್ತ್ರೀ ಕುಡಿತದ ಅಮಲಿನಲ್ಲಿ ಆಕೆಯ ವರ್ತನೆ, ಸ್ತ್ರೀ ಪುರುಷ ಸಮಾನಳು ಅವಳು ಪುರುಷನ ಪ್ರತಿಯೊಂದು ಕಾರ್ಯಚಟುವಟಿಕೆಯಲ್ಲಿಯು ಪಾಲುದಾರಳು ಎಂಬುದನ್ನು ಸಾಬೀತುಪಡಿಸಲು ಚಿತ್ರಿಸಿದ್ದಾರೆಯೇ ಎಂಬುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದು. ಕಾಲೇಜಿನ ಕಾರಿಡಾರುಗಳಲ್ಲಿ ಆರಂಭವಾದ ಸ್ನೇಹ, ದಾವಣಗೆರೆ ಹತ್ತಿರದ ಬಾತಿಯ ಡಾಬಾಗಳ ಮಂಕು ಬೆಳಕಿನ ದೀಪಗಳ ಸಮ್ಮುಖದಲ್ಲಿ ಪಕ್ವಗೊಂಡು, ಈಗ ಶಿವಮೊಗ್ಗೆಯ ಕಾಡ ಮಧ್ಯಕ್ಕೆ ನಡೆದು ಬಂದಿದೆ. ತನ್ನ ಕಣ್ಣುಗಳಲ್ಲಿನ ಯಾಚನೆಯನ್ನು ಅರ್ಥಮಾಡಿಕೊಳ್ಳಲಾಗದಂತಹ ದಡ್ಡಿಯಲ್ಲ ಊರ್ಮಿಳೆ. ತನ್ನಂತಹವನನ್ನು ತಿರಸ್ಕರಿಸುವಂತಹ ವಿವೇಕಹೀನಳೂ ಅಲ್ಲ. ದೊಡ್ಡ ಆಸ್ತಿ, ಒಬ್ಬನೇ ಮಗ, ಸ್ಫುರದ್ರೂಪಿ, ಪ್ರಚಂಡ ಬುದ್ಧಿವಂತ, ಮೇಲಾಗಿ ಉಳಿದೆಲ್ಲಾ ಹುಡುಗಿಯರನ್ನು ಪ್ರೀತಿಸಿದ್ದಕ್ಕಿಂತಲೂ

ಹೆಚ್ಚಾಗಿ, ಪ್ರಾಮಾಣಿಕವಾಗಿ ನಿನ್ನನ್ನು ಪ್ರೀತಿಸುತ್ತೇನೆ. ಈ ತನಕ ಅವರೊಬ್ಬರೊಂದಿಗೆ ಅಲೆದದ್ದು ನಿಜ. ಆದರೆ ಅದೆಲ್ಲ ಹುಡುಗಾಟ ಮಾರಾಯತಿ. ಇವತ್ತಿನಿಂದ ಕಟ್ಟಕಡೆಯ ದಿನದ ತನಕ ನೀನೇ! ನೀನೊಬ್ಬಳೇ, ಕಾಯಾ, ವಾಚಾ, ಮನಸಾ..... "ಏನನ್ನುತ್ತೀ?" ಎಂದು ಫಾರೆಸ್ಟ್ ಲಾಡ್ಜಿನ ದಟ್ಟ ಮೌನದ ಮಧ್ಯೆ ಅತ್ಯಂತ ಸ್ಪಷ್ಟವಾಗಿ ಕೇಳಿದ್ದ ದೇಬ್‌ಗೆ ಎರಡು ಪಿಂಟು ವಿಸ್ಕಿ ಕುಡಿದವನ ದನಿಯಲ್ಲಿ ಗೆದ್ದೇನೆಂಬ ಭರವಸೆಯಿತ್ತು. ಆದರೆ ಊರ್ಮಿಳಾ ಇದೆಲ್ಲವನ್ನು ತನ್ನ ಚಿಕ್ಕ ವಯಸ್ಸಿನಲ್ಲಿಯೇ ಅನುಭವಿಸಿ ಬಂದ ಹುಡುಗಿ. ಪುರುಷನ ಪ್ರೀತಿಯನ್ನು ಅತ್ಯಂತ ಆಳವಾಗಿ ತಿಳಿದುಕೊಂಡವಳು.

ಆದರೆ ರವಿಯವರು ಊರ್ಮಿಳಾಳಿಂದ ಹೊರಡಿಸಿದ ಆ ವಿಚಿತ್ರ ಆಲೋಚನೆಯಿಂದ ಅವಳ ಪ್ರತಿಕ್ರಿಯೆಯನ್ನು ಈ ಮುಂದಿನಂತೆ ನೋಡಬಹುದು. "ತಮಾಷೆ ಮಾಡಬೇಡ ದೇಬ್ ನಂಗೊತ್ತು, ನೀನು ತುಂಬಾ ಚೆನ್ನಾಗಿ ಫ್ಲರ್ಟ್ ಮಾಡ್ತೀಯ ನಿನ್ನಂತಹವನ ಬಾಯಲ್ಲಿ ಕಾಯಾ, ವಾಚಾ, ಮನಸಾ ಇದೆಲ್ಲ ತಮಾಷೆ ಥರಾ ಕೇಳಿಸುತ್ತೆ. ನಂಗಿನ್ನೂ ಡಾಕ್ಟರಾಗಬೇಕಿದೆ. ಉಳಿದದ್ಯಾವುದು ಸಿಗದಿದ್ರೆ ಫೊರೆನ್ಸಿಕ್ ಸಬ್‌ಜೆಕ್ಟಿಗೆ ಗಂಟುಬಿದ್ದು ಇಡೀ ಭಾರತ ದೇಶದಲ್ಲೇ ಅತ್ಯಂತ ಮಟ್ಟಸವಾಗಿ ಹೆಣ ಕುಯ್ಯೋ ಡಾಕ್ಟರು ಅನ್ನಿಸಿಕೊಬೇಕಿದೆ. ಅದನ್ನೆಲ್ಲ ಸಾಧಿಸಿಯಾದ ಮೇಲೆ ಡಾಕ್ಟ್ರಿಕೆಯ ಪುಸ್ತಕನೆಲ್ಲಾ ಒಯ್ದು ಚರಂಡಿಗೆ ಬಿಸಾಕಿ, ಇಡೀ ಭಾರತದ ಲೈಬ್ರರಿಗಳಲ್ಲಿರೋ ಎಲ್ಲ ಇತಿಹಾಸದ ಪುಸ್ತಕ ಓದುಬೇಕೂಂತಿದೆ. ರಾಜ ಮಹಾರಾಜರ ಹೆಜ್ಜೆ ಗುರುತು ಹುಡುಕಿಕೊಂಡು ಕೋಟೆ ಕೊತ್ತಲ ಸುತ್ತಬೇಕಿದೆ. ನೆಲಕ್ಕೆ ಬೀಳೋ ತಂಕಾ ಕುಡಿಬೇಕಿದೆ. ಉಸಿರು ತಿತ್ತಿ ಬತ್ತಿ ಹೋಗೋ ತಂಕಾ ಸಿಗರೇಟು ಸೇದಬೇಕಿದೆ. ಇದೆಲ್ಲ ಆಗೋಕೆ ಮೋದಲೇ ನಿಂಗೆ ಹೆಂಡ್ತಿಯಾಗಿ ಹೊದ್ರೆ ನನ್ನ ಲೈಫು ಅಪೂರ್ಣ ಅಂತ ನಂಗೆ ಅನ್ನಿಸಿಬಿಡುತ್ತದೆ. ಯಾವತ್ತಾದರೂ ಒಂದಿಷ್ಟು ಬಿಡುವು ಸಿಕ್ಕಾಗ ದಾವಣಗೆರೇಲಿ ಕಸೂತಿ ಕಾವೇರಮ್ಮ ಅಂತಿದಾಳಲ್ಲ? ಅವಳ ಮನೇಲಿ ಶುದ್ಧ ಸುಳೆ ಥರಾ ನಾಲ್ಕು ದಿನ ಬದುಕಿ ಬರಬೇಕೂಂತಿದೆ. ನನ್ನಂಥೋಳ್ನ ಪ್ರೀತಿಸ್ತೀನಿ ಅಂತೀಯಲ್ಲ ದೇಬ್? ನಿಂಗೆಲ್ಲೋ ಹುಚ್ಚು. ನೇರವಾಗಿ ಫ್ಲರ್ಟ್ ಮಾಡೋಣವಾ ಅಂತ ಕೇಳು. ಏನಂತೀ?" ಎಂದು ಪ್ರತಿಕ್ರಿಯಿಸುತ್ತಾಳೆ. ಒಂದು ಹೆಣ್ಣು ಮದುವೆಯಾಗಿ ಗಂಡನ ಮನೆ ಸೇರಿದರೆ ಆಕೆಯ ಸ್ವತಂತ್ರ್ಯದ ಜೀವನಕ್ಕೆ ಮಂಕು ಕವಿದಂತೆ. ಗಂಡನಿಗೆ ಹೆಣ್ಣು ಅಧೀನಳಾಗಿ ನಡೆಯಬಾಕಾಗುತ್ತದೆ. ಇವತ್ತಿನ ದಿನಮಾನಗಳಲ್ಲಿ ಶಿಕ್ಷಣದಿಂದ ವಂಚಿತರಾದ ಹೆಣ್ಣು ಮಕ್ಕಳು ಮನೆಗೆಲಸದಲ್ಲಿಯೆ ಕಾಲಕಳೆಯುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಹೆಣ್ಣು ಅಬಲೆಯಲ್ಲ ಸಬಲೆ ಎಂಬುದನ್ನು ಈ ಒಂದು ಪಾತ್ರದಿಂದ ರವಿಯವರು ಅಭಿಪ್ರಾಯ ವ್ಯಕ್ತಪಡಿಸಿರುವುದು ತಿಳಿದು ಬರುತ್ತದೆ. ಆಧುನಿಕ ಕಾಲದ ಮಹಿಳಾ ಸಮೀಕ್ಷೆ ವರದಿಯ ಪ್ರಕಾರ ಮದುವೆಯಾಗದ ಸ್ತ್ರೀಯರೇ ಹೆಚ್ಚಿನ ಸಾಧನೆ ಮಾಡಿರುವುದು ಕಂಡುಬರುತ್ತದೆ. ಆದರೆ ಊರ್ಮಿಳಾ ತನ್ನೆಲ್ಲ ಬಯಕೆಗಳನ್ನು ಈಡೇರಿಸಿಕೊಳ್ಳದೇ ಹೋದರೆ ಜೀವನವೇ ಅಪೂರ್ಣವಾದಂತೆ

ಎಂದು ಭಾವಿಸುವುದರಲ್ಲಿಯೂ ಅರ್ಥವಿದೆ ಅಲ್ಲದೇ ಸಮಾಜಕ್ಕೂ ಒಂದು ಸಂದೇಶ ಇದೆ.

ಇದನ್ನೆಲ್ಲ ಆಲಿಸಿದ ದೇಬ್ ತಕ್ಷಣಕ್ಕೆ ಪ್ರತಿಕ್ರಿಯಿಸಲಿಲ್ಲ. ನಂತರ ನಂಗೆ ಕಾಯುವ ಸಹನೆಯಿದೆ. ಕಡೆತನಕ ಕಾಯ್ತೆನೆ. ಪ್ರಾಮಾಣಿಕವಾಗಿ ಹೇಳ್ತಿನಿ ಕೇಳು. "ಐ ಲವ್ ಯೂ....!" ಇದನ್ನು ಕೇಳಿದ ಊರ್ಮಿಳೇ ದೊಡ್ಡ ಸ್ವರದಲ್ಲಿ ನಗತೊಡಗಿ ನಮಸ್ಕಾರ ಅನ್ನೋದನ್ನ ಈ ಜನ್ಮದಲ್ಲಿ ನಾನು ಭಗವಂತನಿಗೂ ಮಾಡೋದಿಲ್ಲ. ಹಿಮವಂತ, ಪ್ರಾರ್ಥನಂಗೆ ಹಿಮವಂತ ಕೇವಲ ಬಾಯ್ ಫ್ರೆಂಡ್ ಅಲ್ಲ. ಅವಳ ಗಾರ್ಡಿಯನ್ ಅವಳನ್ನ ಹಾಸ್ಟೆಲಿನಲ್ಲಿಟ್ಟು ಓದಿಸ್ತಿದಾನೆ. ಅವನ ಋಣದಲ್ಲಿದ್ದಾಳೆ ಪ್ರಾರ್ಥನಾ. ಆದ್ರೆ ದೇಬ್ ನನ್ನ ಹೆಸರು ಊರ್ಮಿಳಾ! ಯಾರ ಋಣದಲೂ ಇರೋ ಹುಡುಗಿಯಲ್ಲ ನಾನು. ಯಾವತ್ತಾದರೊಂದು ದಿನ ಬಿಡುವಾಗಿದ್ರೆ ನಿನ್ನನ್ನು ಪ್ರೀತಿಸಬಹುದೇನೋ? ಯಾರ ಯಾವ ಸಂದೇಶಕ್ಕೂ ಕರಗುವ ಹುಡುಗಿಯಲ್ಲ ಊರ್ಮಿಳಾ. ಈ ಒಂದು ಸ್ತ್ರೀ ಪಾತ್ರದಿಂದ ಇಡೀ ಕಾದಂಬರಿಯ ವಸ್ತುವೇ ನಿಗೂಢ ರೀತಿಯಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ರವಿಯವರು ಈ ಪಾತ್ರದಲ್ಲಿ ಅಷ್ಟೊಂದು ಆಸಕ್ತಿಯಿಂದ ಓದಿಸಿಕೊಳ್ಳುತ್ತಾ ಸಾಗುವ ಪಾತ್ರ ನಿಜಕ್ಕೂ ಕೂತುಹಲಕಾರಿಯಾಗಿದೆ. ಪಿಯುಸಿ ದಾಟುವ ಮೊದಲೇ ಪ್ರೀತಿ ಪ್ರೇಮಗಳೆಲ್ಲ ಶುದ್ಧ ಸುಳ್ಳು ಎಂಬುದನ್ನು ಮನವರಿಕೆ ಮಾಡಿಕೊಂಡ ಹುಡುಗಿ ಆದ್ದರಿಂದಲೇ ಬದುಕಿನ ಯಾವುದಾದರೊಂದು ಹಂತದಲ್ಲಿ ಸೂಳೆಯಾಗಬೇಕು ಎಂದು ಚಡಪಡಿಸುವುದು. ಅವಳ ದೃಷ್ಟಿಯಲ್ಲಿ ಎಲ್ಲ ಪ್ರೀತಿಯ ತಾಯಿಬೇರು ವಾಂಛೆ. ಪ್ರತಿ ಮನುಷ್ಯನು ಪ್ರೀತಿಯ ಮುಖವಾಡ ಹಾಕಿಕೊಂಡೇ ವಾಂಛೆಗಳನ್ನು ಕದ್ದಿಟ್ಟುಕೊಳ್ಳುತ್ತಾನೆ. ವೇಶ್ಯಯ ಮನೆಯ ಒಳಕೋಣೆಯಲ್ಲಿ ಮಾತ್ರ ಅವನಿಗೆ ಮುಖವಾಡವಿರುವುದಿಲ್ಲ. ಅಲ್ಲೇನಿದ್ದರೂ ವಾಂಛೆಯದೇ ಆಧಿಪತ್ಯ. ವೇಶ್ಯೆಯ ಮುಂದೆ ಮತ್ತು ತಾಯಿಯ ಮುಂದೆ ಮಾತ್ರ ಗಂಡಸು ಸಂಕೋಚವಿಲ್ಲದೆ ಬೆತ್ತಲಾಗಲು ಸಾಧ್ಯ. ಮಡಿಕೇರಿ ಎಸ್ಟೇಟಿನ ಜಯಂತನೊಬ್ಬನೇ ಅಲ್ಲ, ಈ ಜಗತ್ತಿನ ಪ್ರತಿಯೊಬ್ಬ ಗಂಡಸನ್ನೂ ವೇಶ್ಯಯ ಮನೆಯ ಒಳಕೋಣೆಯಲ್ಲಿ ಹಾಗೆ ಕೇವಲ ಮನುಷ್ಯ ಸಹಜ ವಾಂಛೆಯೊಂದಿಗೆ ನೋಡಬೇಕು. ಪ್ರತಿ ಸಲವು ಪ್ರೀತಿಯೆಂಬುದು ಅರ್ಥಹೀನ ಸಿದ್ಧಾಂತ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ತೇಕುತ್ತ, ರೊಪ್ಪುತ್ತ. ನಿಶ್ಚಲನಾಗಿ ಬಿದ್ದುಕೊಂಡ ಪ್ರತಿ ಗಂಡಸಿಗೂ ಗುಟ್ಟಾಗಿ ಹೇಳಬೇಕು. ನಿನ್ನ ಪ್ರೀತಿ ಸುಳ್ಳು, ನಿನ್ನ ಮೂಲ ಬೇಕು ವಾಂಛೆಯೆಂಬ ಹುತ್ತದಲ್ಲಿದೆ.

ಯಾವ ಗಂಡಸು, ಯಾವ ಕೈಯಿಂದ, ಹೇಗೆ ಮುಟ್ಟುತ್ತಾನೆ ಎಂಬುದು ಒಂದು ಸ್ಪರ್ಶದಿಂದಲೆ ಅರ್ಥ ಮಾಡಿಕೊಂಡು ಬಿಡುವ ವಿದ್ಯೆ ಹೆಣ್ಣು ಜನುಮಕ್ಕೆ ಹುಟ್ಟಿನಿಂದಲೇ ಬಂದಿರುತ್ತದೆ. ಅದು ಜಗತ್ತಿನ ಎಲ್ಲ ಹೆಂಗಸರಿಗೂ ಗೊತ್ತು. ಪ್ರತಿ ಸ್ಪರ್ಶದ ಹಿಂದೆಯೂ ಒಂದು ಭಾವವಿರುತ್ತದೆ. ಆದರೆ ಅವಶ್ಯಕತೆಗಳಲ್ಲಿ ಹುಟ್ಟಿಕೊಳ್ಳುವುದು ಪ್ರೀತಿಯಲ್ಲ. ಅದು ಹೊಂದಾಣಿಕೆ. ಬೆಳಗ್ಗೆ ಎದ್ದು ರೇಡಿಯೋದಲ್ಲಿ

ಸಿನೆಮಾ ಹಾಡು ಕೇಳುವ ಹುಡುಗಿ ಯಾರನ್ನಾದರೂ ಪ್ರೀತಿಸಲೇಬೇಕು ಅಂತ ನಿರ್ಧರಿಸಿದರೆ, ಸಂಜೆ ಹೊತ್ತಿಗೆ ಅವಳಿಗೊಂದು ಪ್ರೀತಿ ಸಿಕ್ಕುಬಿಡುತ್ತದೆ. ನಮ್ಮ ಪ್ರಾಪಂಚಿಕ ಬದುಕಿನಲ್ಲಿ ಕೈ ಚಾಚಿದ ಹುಡುಗಿಯನ್ನು ತಿರಸ್ಕರಿಸುವ ಹುಡುಗರು ಜಗತ್ತಿನಲ್ಲಿ ತೀರ ಅಪರೂಪ. ಆದರೆ ರವಿಯವರ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಪ್ರೀತಿಯ ಬಗ್ಗೆ ನಂಬಿಕೆ ಇಲ್ಲದ ಊರ್ಮಿಳಾ, ದೇಬ್‌ಗೆ ಪ್ರಶ್ನಿಸುವುದು ಹೀಗೆ. "ನನ್ನನ್ನು ಹೊಂದಲಾಗದಿದ್ದರೆ, ಆ ದುಃಖ ನಿನ್ನನ್ನು ಕಡೆತನಕ ಕಾಡುತ್ತದೆ ಅಂತ ಬರೆದಿದ್ದಿಯಲ್ಲ ದೇಬ್? ಆಕಸ್ಮಾತ್ ನಿನ್ನೆ ನನ್ನನ್ನು ಹೊಂದಿಬಿಟ್ಟಿದ್ದರೆ ಆ ಸಂತೋಷ ಕಡೆತನಕ ನಿನ್ನೊಂದಿಗಿರುತ್ತಿತ್ತಾ? ಎಂದಾಗ ನಿಲ್ಲಿಸು! ಏನೇನೋ ಮಾತಾನಾಡಬೇಡ. ಹೊಂದುವುದು ಅಂದೆಯಲ್ಲ? ನಾನು ದೇಹಕ್ಕೆ ಸಂಬಂಧ ಪಟ್ಟಂತೆ ಮಾತಾಡ್ತಿದೀನಿ. ನಂಗೊತ್ತು, ನೀನು ಹತ್ತು ಹುಡುಗೀರಲ್ಲಿ ಅಲೆದು ಬಂದೋನು. ಆ ಸಂತೋಷ ಇವತ್ತಿನ ತನಕ ನಿನ್ನೊಂದಿಗಿದೆಯಾ? ವೇಶ್ಯೆಯ ಮನೇಲಿ ಎಷ್ಟು ಜನ ಹುಡುಗಿರು? ಎಷ್ಟು ಸಲ ಹೊಂದಿದ್ದು? ಎಷ್ಟೊಂದು ಸಂತೋಷ! ನಿಜ ಹೇಳು ದೇಬ್, ಅವುಗಳ ಪೈಕಿ ಎಷ್ಟು ಸಂತೋಷಗಳು ನಿನ್ನೊಂದಿಗೆ ಇವತ್ತಿನ ತನಕ ಇವೆ. ಕುಡಿದ ಕಾಫಿ, ಸೇದಿ ಮುಗಿಸಿದ ಸಿಗರೇಟು, ಗಂಟಲಿಗೆ ಸುರಿದಕೊಂಡ ವಿಸ್ಕಿ, ಹೊಂದಿದ ಹೆಂಗಸು! ಎಷ್ಟು ಹೊತ್ತು, ಎಷ್ಟು ವರ್ಷ ನೆನಪಿರ್ತವೆ. ಅದೆಲ್ಲ ಒಂದು ಪ್ರಯೋಗ. ಹೊಂದಲಾಗಲಿಲ್ಲವಲ್ಲಾ ಅನ್ನೋ ದುಃಖ ಕಡೆ ತನಕ ನನ್ನನ್ನು ಕಾಡುತ್ತೆ ಅಂತ ಬರ್ದಿದೀಯ. ನಿಜ ಹೇಳು. ಅದು ದುಃಖವೋ? ಚಡಪಡಿಕೆಯೋ? ಪಂಜರದಲ್ಲಿರೋ ಬಣ್ಣದ ಹಕ್ಕಿನ ತಿನ್ನೋಕ್ಕಾಗ್ತಿಲ್ಲವಲ್ಲಾ ಅಂತ ಬೆಕ್ಕು ಚಡಪಡಿಸುತ್ತೆ ಅದನ್ನ ದು:ಖ ಅಂತಿಯಾ? ಬೆಳಗ್ಗೆಯಿಂದ ಸಂಜೆ ತಂಕಾ ಇವತ್ತು ಕಾಡು ಸುತ್ತಿದಿವಿ. ಪ್ರತಿ ಕ್ಷಣಕ್ಕೂ ನಂಗೆ ನೀನೊಬ್ಬ ಗೆಳೆಯ ಅಂತಲೇ ಅನ್ನಿಸ್ತಿದೆ. ನಿನ್ನ ಭುಜ ತಾಕಿದರೂ ಅದೊಂದು ಆಕಸ್ಮಿಕ ಅಂದುಕೊತಿದ್ದೆನೇ ಹೊರತು, ನೀನು ಬೇಕಂತಲೇ ತಾಕಿದೆ ಅನ್ನಿಸ್ತಿರಲಿಲ್ಲ. ಆದರೆ ಈಗ ಕೋಣೆಗೆ ಬಂದು ಕೂತಿದೀವಿ ನೋಡು? ನಿನ್ನ ಪತ್ರ ನೆನಪಾಗುತ್ತೆ. ಎದುರಿಗೆ ಕೂತು ವಿಸ್ಕಿ ಕುಡೀತಿರೋ ನೀನು ದುಃಖದ ಬಗ್ಗೆ ಮಾತಾಡಿದಾಗಲೆಲ್ಲ ಪಂಜರದ ಕೆಳಗೆ ಚಡಪಡಿಸೋ ಬೆಕ್ಕು ನೆನಪಾಗುತ್ತೆ. ಹಾಗಂತ, ನೀನು ಇವತ್ತೇ ರಾತ್ರಿ ನನ್ನನ್ನ ತಿಂದು ಮುಗಿಸ್ತೀಯ ಅಂತ ಹೆದರ್ಕೊಂಡಿದಿನಿ ಅಂದ್ಕೋಬೇಡ. ನಾನು ದೇಹದ ಬಗ್ಗೆ, ವಾಂಛೆಗಳ ಬಗ್ಗೆ ಮಾತಾಡ್ತಿದೀನಿ. ನೀನು ಪ್ರೀತಿ ಪ್ರೇಮಗಳ ಬಗ್ಗೆ ಮಾತಾಡ್ತಿದೀಯ. ನಿನ್ನ ಎಲ್ಲ ಪ್ರೀತಿಯ ಮೂಲ ವಾಂಛೆಯೇ ಆದರೆ ಇಷ್ಟೆಲ್ಲ ಮಾತು ಖರ್ಚ ಮಾಡೋ ಅಗತ್ಯವೇ ಇಲ್ಲ ದೇಬ್. ಇದೆಲ್ಲ ಒಂದು ರೀತಿಯ ಲೈಂಗಿಕ ಬಯಕೆ ಎಂದು ಊರ್ಮಿಳಾ ಹೇಳಿದಾಗ ಆತನಿಗೆ ಬರಸಿಡಿಲು ಬಡಿದಂತಾ ಅನುಭವವಾಯಿತು. ನಂತರ ಸುರಿದುಕೊಳ್ಳಬೇಕಿದ್ದ ಮತ್ತೊಂದು ಪಿಂಟ್ ವಿಸ್ಕಿ ಬಾಟಲಿಯಲ್ಲೇ ಉಳಿದುಹೋಯಿತು. ಆತ ದಿಗ್ಭ್ರಾಂತನಾಗಿದ್ದ. ಅವನಿಗೆ ಊರ್ಮಿಳಾ ಬಿಚ್ಚು ಮನಸ್ಸಿನ ಹುಡುಗಿ ಅಂತ ಗೊತ್ತಿತ್ತು. ಆದರೆ ಈ ಮಟ್ಟದ ಪರಿಪಕ್ವತೆ ಇದೆಯೆಂದು ಕನಸು ಮನಸಿನಲ್ಲೂ

ಅಂದುಕೊಂಡಿರಲಿಲ್ಲ. ಗಂಡಸು ಪ್ರಪಂಚದ ಬುನಾದಿಗೇ ಹಾರೆಯಿಕ್ಕಿ ಮೀಟುತ್ತಾಳೆ. ನಿನ್ನದು ಪ್ರೀತಿಯಲ್ಲ, ವಾಂಛೆ! ಅದನ್ನೇ ನೇರವಾಗಿ ಹೇಳು. ಅದೇ ಬೇಕಿದ್ದರೆ ಲೈಂಗಿಕ ಬಯಕೆ. ಕಡ್ಡಿ ಮುರಿದಂತೆ ಆಡುವ ಮಾತು. ಈ ಜೀವಮಾನವಿಡೀ ಇದೇ ಕೋಣೆಯಲ್ಲಿ ಹೀಗೆ ಇದಿರು ಬದಿರಾಗಿ ಕುಳಿತು ಮಾತನಾಡಿದರು ತನ್ನೊಳಗಿರುವುದು ವಾಂಛೆಯಲ್ಲ, ಪ್ರೀತಿ ಎಂಬುದನ್ನು ತನ್ನಿಂದ ನಂಬಿಸಲು ಸಾಧ್ಯವಾಗದು. ದೇಹಕ್ಕೆ ಸಂಬಂಧಿಸಿದಂತೆ ಅವಳು ನೀಡುತ್ತಿರುವುದು ಆಹ್ವಾನವಲ್ಲ ಅದು ಕರೆದು ಕಪಾಳಕ್ಕೆ ಬಿಗಿಯುವಂತ ತಂತ್ರ. ಎಲ್ಲ ಹುಡುಗಿಯರಂತಲ್ಲ ಊರ್ಮಿಳಾ ಇವಳು ಗಂಡಸಿನ ಪ್ರಪಂಚದ ಪ್ರತಿ ಮೂಲೆ ಮೂಲೆ ಹೊಕ್ಕಿಬಂದ ಗಟ್ಟಿಗಿತ್ತಿ.

ಆದರೆ ಹೆಣ್ಣಿನ ಮನಸ್ಸು ಚಂಚಲ. ಹೆಣ್ಣಿನ ಒಳ ಮನಸ್ಸು ಬಲ್ಲವರ್‍ಯಾರು. ಮೊದಲೆ ಅವಳು ವಿಲಕ್ಷಣ ಪ್ರವೃತ್ತಿಯ ಹುಡುಗಿ. ದೇಬ್‌ನಿಗೆ ಇಷ್ಟೆಲ್ಲ ಗೊಳಾಡಿಸಿದ ಊರ್ಮಿಳಾ ತನಗೆ ತಾನೇ ಪ್ರೀತಿ ಪ್ರೇಮದ ವಿಷಯದಲ್ಲಿ ತನಗೆ ನಂಬಿಕೆಯಿಲ್ಲದಿರಬಹುದು. ವಾಂಛೆಯ ವಿಷಯದಲ್ಲಿ ತಾನಂದುಕೊಂಡದೆಲ್ಲ ಸರಿಯೂ ಇರಬಹುದು. ಆದರೆ, ಆಕಸ್ಮಾತ್ ದೇಬ್ ತನ್ನನ್ನು ಪ್ರಾಮಾಣಿಕವಾಗಿ ಪ್ರೀತಿಸಿದ್ದರೆ? ತಾನು ಜಯಂತ್‌ನನ್ನು ಪ್ರೀತಿಸಿದಷ್ಟು ಗಾಢವಾಗಿ ಇಷ್ಟಪಟ್ಟು ಬಿಟ್ಟಿದ್ದರೆ? ಅಂತಹದೊಂದು ಪ್ರೀತಿಯನ್ನು ಧಿಕ್ಕರಿಸಿ ಗೇಲಿ ಮಾಡುವ ಹಕ್ಕು ತನಗೆಲ್ಲಿದೆ? ಪ್ರೀತಿಯನ್ನು ತಿರಸ್ಕರಿಸಬಹುದು. ಆದರೆ ಗೇಲಿ ಮಾಡಿದ್ದು ಸರಿಯಲ್ಲವೆಂದು ತನಗೆ ತಾನೆ ಅಂದುಕೊಂಡು ಆತನ ಜೊತೆ ಹೆಜ್ಜೆ ಹಾಕಿದಳು.

ಸಮಾಜದಲ್ಲಿ ಸಂಬಂಧಗಳು ಬೆಸೆದುಕೊಳ್ಳುತ್ತವೆ. ಆದರೆ ಒಬ್ಬರೊಂದಿಗೆ ಇದ್ದ ಒಡನಾಟ ಮತ್ತೊಬ್ಬರೊಂದಿಗೆ ಭಿನ್ನ ರೂಪದಲ್ಲಿರುತ್ತದೆ. ಅವರ ಬಯಕೆ, ಆಸೆ-ಆಕಾಂಕ್ಷೆ, ವರ್ತನೆಯಲ್ಲಿ ಒಬ್ಬರೊಂದಿಗಿದ್ದಂತೆ ಮತ್ತೊಬ್ಬರೊಂದಿಗಿರುವುದಿಲ್ಲ. ಒಬ್ಬ ವ್ಯಕ್ತಿಯನ್ನು ಹಲವಾರು ಬಗೆಯಿಂದ ಅಧ್ಯಯನ ಮಾಡುವುದು ಕಂಡುಬರುತ್ತದೆ. ಆದ್ದರಿಂದ ಊರ್ಮಿಳೆ, ದೇಬ್ ಮತ್ತು ಪ್ರಾರ್ಥನಾಳಿಗೆ ಗೋಚರಿಸಿದ್ದಕ್ಕಿಂತ ಭಿನ್ನರೂಪದಲ್ಲಿ ಕಾಣಿಸಿಕೊಳ್ಳುವಂತೆ ರವಿಯವರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಹಿಮವಂತ ಎಷ್ಟೇ ಬೇಡವೆಂದರೂ ಬಿಡದ ಊರ್ಮಿಳಾ ವೇಶ್ಯೆ ಮನೆಗೆ ಕರೆದುಕೊಂಡು ಹೋಗಲೇಬೇಕೆಂದು ಹಠಹಿಡಿದಳು. ಶ್ರೀಮಂತರು ಬಹುಕಾಲದಿಂದ ಸಾಕಿಕೊಂಡು ಬಂದ ವ್ಯವಸ್ಥಿತ ವೇಶ್ಯಾವಾಟಿಕೆ ಜಾಲವದು. ಹಾಸ್ಟೆಲಿನ ಬಾಗಿದಲ್ಲಿ ಗಂಟುಬಿದ್ದವಳು ಕಾವೇರಮ್ಮನ ಮನೆಗೆ ಕರೆತರುವ ತನಕ ಬಿಡಲಿಲ. ಇವಳು ಜಗತ್ತು ಕಾಣದ ಚೆಲ್ಲು ಹುಡುಗಿ. ಆದರೆ ಇದು ಚೆಲ್ಲು ಹುಡುಗಿಯಲ್ಲ. ವಯಸ್ಸಿಗೆ ಮುಂಚೆಯೇ ಪ್ರಬುದ್ಧಗೊಂಡ ತಿಳಿಮನಸ್ಸಿನ ಹುಡುಗಿ ಮಾತು ಕೊಂಚ ಒರಟು. ಆದರೆ ಸಂಸ್ಕಾರವಂತೆ. ಒಂದೇ ಒಂದಲ್ಲ ಸೂಳೆ ಥರಾ ಬದುಕಿ ನೋಡಬೇಕು ಎಂಬ ಇವಳ ಬಯಕೆ ಅಥವಾ ವಾಂಛೆಯಿದೆಯಲ್ಲ! ಅದು ದೇಹಕ್ಕೆ ಸಂಬಂಧಿಸಿದುದಲ್ಲ. ಮನಸ್ಸಿಗೆ ಸಂಬಂಧಿಸಿದ್ದು, ಅದರ ಪ್ರಯೋಗಕ್ಕೆ ಸಂಬಂಧಿಸಿದ್ದು. ಅನಿಸಿದ್ದನ್ನು ಮಾಡುತ್ತಾಳೆ. ಮುಚ್ಚುಮರೆಯಿಲ್ಲ. ಒಣ ಮಡಿವಂತಿಕೆಗಿಂತ ಊರ್ಮಿಳೆಯ ಬಿಚ್ಚು

ಮನಸ್ಸಿನ ವರ್ತನೆ ಸಹನೀಯ. ಇನ್ನಷ್ಟು ಬೆಳೆದರೆ, ಬದುಕು ಕಲಿಸಿದ ಪಾಠಗಳನ್ನೆಲ್ಲ ಶ್ರದ್ಧೆಯಿಂದ ಕಲಿತರೆ ಊರ್ಮಿಳೆಯರಂತಹ ಹುಡುಗಿಯರು ಉಳಿದೆಲ್ಲರಿಗಿಂತ ಒಳ್ಳೆಯ ಹೆಂಗಸರಾಗುತ್ತಾರೆ. ಗೃಹಿಣಿಯರಾಗುತ್ತಾರೆ. ಒಳ್ಳೆ ಹೆಂಡತಿಯಾಗುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಒಳ್ಳೆ ತಾಯಂದಿರಾಗುತ್ತಾರೆ.

'ಈ ಕಾದಂಬರಿ ಪುಟಗಳಲ್ಲಿ ಒಂದು ಡಿಫರೆಂಟ್ ವೆರೈಟಿಯ ಥ್ರಿಲ್ಲರ್ ಬರೆಯಲು ಕೂತದ್ದು ನಿಜವಾದರೂ, ನನ್ನ ಕೈ ಪಳಗಿರುವುದು ಮಾನವ ಸಂಬಂಧಗಳ ಕುರಿತು ಬರೇಯುದರಲ್ಲೇ! ಮಾನವ ಸಂಬಂಧಗಳು ಯಾವತ್ತಿಗೂ ನನ್ನನ್ನೂ ಕುತೂಹಲಿಯನ್ನಾಗಿ ಮಾಡಿವೆ. ತುಂಬಾ ಫ್ಯಾಷನೇಟ್ ಆಗಿ ಅವುಗಳ ಬಗ್ಗೆ ಬರಿಯಲು ಪ್ರೇರೇಪಿಸಿವೆ' ಎಂದು ಹೇಳಿಕೊಳ್ಳುವ ರವಿಯವರು ಅಷ್ಟೇ ಸೊಗಸಾಗಿ ಬರೆಯಬಲ್ಲವರಾಗಿದ್ದಾರೆ ಎಂದು ಅವರ 'ಹೇಳಿ ಹೋಗು ಕಾರಣ' ಕಾದಂಬರಿಯ ಊರ್ಮಿಳಾ ಪಾತ್ರದಿಂದ ತಿಳಿದುಕೊಳ್ಳಬಹುದಾಗಿದೆ. ಮಾನವ ಸಂಬಂಧಗಳು ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ರೂಪ ಪಡೆದುಕೊಳ್ಳುತ್ತವೆ. ಉರ್ಮಿಳಾ ಮತ್ತು ಪ್ರಾರ್ಥನಾಳ ಸಂಬಂಧದಿಂದ ಪ್ರಾರ್ಥನಾ ತನ್ನ ಮಾನಸಿಕ ವೇದನೆಯಿಂದ ಹೊರಬರುತ್ತಾಳೆ ಆದರೆ ಪ್ರಾರ್ಥನಾ ಪರಿಚಯವಾದ ಮೇಲೆ ಊರ್ಮಿಳೆ ಬದುಕಿನಲ್ಲಿ ನಡೆ, ನುಡಿಯಲ್ಲಿ ಯಾವುದೇ ಬದಲಾವಣೆ ಸಂಭವಿಸುವುದಿಲ್ಲ. ಅದೇ ರೀತಿ ಊರ್ಮಿಳಾ ಮತ್ತು ದೇಬ್ ಸ್ನೇಹ ಸಂಬಂಧದಿಂದ ಅವಳ ಕುಡಿತ, ಬಯಕೆ, ಸಿಗರೇಟ್ ಸೇದುವ ಬಯಕೆಗಳು ಇಮ್ಮಡಿಯಾಗುತ್ತವೆ. ಮಾನವ ಸಂಬಂಧಗಳಿಂದಲೇ ಒಬ್ಬ ವ್ಯಕ್ತಿಯ ಜೀವನದಲ್ಲಿ ಬದಲಾವಣೆ ಸಂಭವಿಸುತ್ತವೆ ಎಂಬಂತೆ ಹಿಮವಂತನ ಪರಿಚಯವಾದ ಮೇಲೆ ಆಕೆಯ ಒಂದೊಂದೇ ಆಸೆಗಳು ಈಡೇರಿದಾಗ ಅವಳ ಮನಸಿನಲ್ಲಿ ಒಂದು ರೀತಿಯ ಸಮಾಧಾನ. ಅವಳ ಪ್ರಮುಖ ಬಯಕೆಯಾದ ವೇಶ್ಯೆಯ ಮನೆಗೆ ಹೋಗುವ ಬಯಕೆಯನ್ನು ಹಿಮವಂತ ಈಡೇರಿಸುತ್ತಾನೆ. ಆವಾಗ ಒಂದು ದಿನ ಆತ ನಾನು ಬಂದಾಗಿನಿಂದ ಗಮನಿಸ್ತಿದಿನಿ ಸಿಗರೇಟು ಸೇದ್ತಾನೇ ಇಲ್ಲಾ? ಎಂದು ಕೇಳಿದಾಗ ಅವಳು ಹೇಳುವ ಮಾತುಗಳು ಹೀಗಿವೆ. ನೀವು ವೇಶ್ಯ ಮನೆಗೆ ಕರ್ಕೊಂಡು ಹೋದ್ರಿ. ಆಮೇಲೆ ಹೋಟ್ಲಲ್ಲಿ ಊಟ ಮಾಡಿಸಿದ್ರಿ. ನನ್ನ ಸಿಗರೇಟಿನ ಬಗ್ಗೆ ಒಂದೇ ಒಂದು ಮಾತು ಆಡಲಿಲ್ಲ.ಆದರೆ ಅದ್ಯಾಕೋ ನಿಮ್ಮನ್ನ ನೋಡಿದ್ಮೇಲೆ ನಂಗೆ ಸಿಗರೇಟು ಸೇದೋದು ಅನವಶ್ಯಕ ಅನ್ನಿಸಿ ಬಿಟ್ಟಿದೆ. ಅವತ್ತು ನಿಮ್ಮ ಜೊತೇಲಿ ನಡೀತಿದ್ದ ಹಾಗೇನೇ ತುಂಬಿದ ಸಿಗರೇಟು ಪ್ಯಾಕೆಟ್ಟನ್ನ ನಿಮಗೆ ಗೊತ್ತಾಗದ ಹಾಗೆ ರಸ್ತೆ ಪಕ್ಕದ ಚರಂಡಿಗೆ ಎಸೆದು ಬಿಟ್ಟೆ. ಆ ಮೇಲೆ ಸೇದಬೇಕು ಅನ್ನಿಸ್ಲೇ ಇಲ್ಲ. ಕುಡಿತ ಕೂಡ ಅಷ್ಟೆ. ನಾನು ಬಿಟ್ಟಾಗಿದೆ!" ಹಿಮವಂತನ ಸುಮಧುರ ಸ್ನೇಹದಿಂದ ಊರ್ಮಿಳೆ ತನ್ನ ಜೀವನದ ಬಯಕೆಗಳನ್ನು ಒಂದೊಂದಾಗಿ ಬಿಡಲು ಪ್ರಯತ್ನಿಸಿರುದನ್ನು ಮಾನವ ಸಂಬಂಧಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ಸಮಾಜದಲ್ಲಿ ಕೆಟ್ಟ ವ್ಯಕ್ತಿಗಳು, ಕೆಟ್ಟ ಸಮಾಜ, ಕೆಟ್ಟ ಸಂಬಂಧಗಳು ಎಂಬುವವು ಅಸಲಿಗೆ ಕಂಡು ಬರುವುದಿಲ್ಲ. ಅವರವರ ಪರಿಸ್ಥಿತಿ, ಸನ್ನಿವೇಶ, ಘಟನಾವಳಿಗಳಿಂದ ಅವರ ಜೀವನದಲ್ಲಿ ಬದಲಾವಣೆಗಳು, ವರ್ತನೆಯ ವ್ಯತ್ಯಾಸಗಳು ಸೇರಿಕೊಳ್ಳುತ್ತವೆ ಎಂಬುದನ್ನು ಮೇಲಿನ ಉದಾಹರಣೆಯಿಂದ ತಿಳಿದುಕೊಳ್ಳಬಹುದು. ಮುಂದೆ ಹಿಮವಂತನಲ್ಲಿ ಅವಳಿಗೆ ದೈವಿಕ ಭಾವ ಮೂಡುತ್ತದೆ. ಯಾಕೆಂದರೆ ಪ್ರಾರ್ಥನಾ ಇತನನ್ನು ತನ್ನ ಪಾಲಿನ ದೇವರು ಎಂದು ನಂಬಿರುತ್ತಾಳೆ ಮತ್ತು ಆತನ ಕಾಲಿಗೆ ನಮಸ್ಕರಿಸುತ್ತಾಳೆ. ಆದರೆ ಯಾರು ಊಹಿಸಲಾಗದಂತಹ ಸನ್ನಿವೇಶದಲ್ಲಿ ಆತನನ್ನ ಊರ್ಮಿಳಾ ನೊಡುತ್ತಾಳೆ. ಅಂದರೆ ಕಸೂತಿ ಕಾವೇರಮ್ಮನ ವೇಶ್ಯಾ ಗೃಹಕ್ಕೆ ಹೋದ ಸಂದರ್ಬದಲ್ಲಿ ಕಾವೇರಮ್ಮ ಹಿಮವಂತನಲ್ಲಿಗೆ ಬಂದು ಅತೀ ವಿನಯದಿಂದ ಮಾತನಾಡಿಸಿ ತನ್ನ ಪಾಲಿನ ದೇವರು ಎಂಬ ಭಾವನೆಯಿಂದ ಕಾಲಿಗೆ ನಮಸ್ಕರಿಸುತ್ತಾಳೆ. ಆದರೆ ಒಂದು ನೆನಪಿನಲ್ಲಿಟ್ಟುಕೊಳ್ಳುವ ಸಂಗತಿ ಎಂದರೆ ಸಮಾಜದ ಅದರಲ್ಲೂ ಶ್ರೀಮಂತ ವರ್ಗದವರ ಪಾಲಿನ ವೇಶ್ಯೆ, ಸಮಾಜ ಅಳವನ್ನು ತಿರಸ್ಕಾರದಿಂದ ನೋಡುವಂತಹ ಹೆಣ್ಣು ಈತನನ್ನು ಕಂಡೊಡನೆ ವಿನಯದಿಂದ ಕಾಲಿಗೆ ನಮಸ್ಕರಿಸುತ್ತಾಳೆ. ಇದನ್ನೆಲ್ಲ ಗಮನಿಸಿದ ಊರ್ಮಿಳೆಗೂ ಆತನಲ್ಲಿ ಒಂದು ರಿತೀಯ ಗೌರವದ ಭಾವ ಮೂಡಿ ಆಕೆಯ ಬಯಕೆಗಳಲ್ಲಿ ಬದಲಾವಣೆಗಳು ಸಂಭವಿಸಿದವು.

ಇದರಿಂದ ಇಬ್ಬರ ಸ್ನೇಹ ಸಂಬಂಧ ಮತ್ತಷ್ಟು ಗಟ್ಟಿಯಾದವು. ಪ್ರಾರ್ಥನಾಳ ಪ್ರೀತಿಯ ತಿರಸ್ಕಾರದ ವಿಷಯ ಗೊತ್ತಾದಾಗ ಮೊಟ್ಟ ಮೊದಲ ಬಾರಿಗೆ ಊರ್ಮಿಳೆಯೆದುರು ಹಿಮವಂತ ಅವಳ ಮಡಿಲಿಗೆ ಬಿದ್ದು ಬಿಕ್ಕಿ ಬಿಕ್ಕಿ ಅಳತೊಡಗಿದ. ಕಣ್ಣೀರಿನಿಂದ ಊರ್ಮಿಳೆಯ ಮಡಿಲು ತೊಯ್ದು ಹೋಗಿತ್ತು. ಅವನ ದುಃಖ ಇವತ್ತು ರಾತ್ರಿಗೆ, ಈ ವರ್ಷಕ್ಕೆ, ಈ ಜನ್ಮಕ್ಕೇ ಮುಗಿಯದೇನೋ ಎಂಬಂತೆ ನಿರಂತರವಾಗಿ ಗಂಟೆಗಟ್ಟಲೆ ಅತ್ತಿದ್ದ. ಅವನ ಬಲಿಷ್ಠ ದೇಹ ತನ್ನೆಲ್ಲ ಪ್ರಾಣ ಕಳೆದುಕೊಂಡು ಸುಮ್ಮನೆ ಊರ್ಮಿಳೆಯ ಮಡಿಲಲ್ಲಿ ಬಿದ್ದು ಕೊಂಡಿತ್ತು. ಬೆಳಗಿನ ಮೊದಲ ಸೂರ್ಯನ ಕಿರಣ ನೆಲಕ್ಕೆ ಬೀಳುವ ಹೊತ್ತಿಗೆ ಊರ್ಮಿಳೆ ಕಾಗದವೊಂದನ್ನು ಬರೆದಿಟ್ಟು ಹೋಗಿದ್ದಳು.

ಪ್ರೀತಿಯ ಹಿಮವಂತ,

ಪರಿಕ್ಷೆಗೆ ಹೊರಟಿದ್ದೇನೆ. ನಿದ್ರೆಯಲ್ಲಿದ್ದೀರಿ. ಎಬ್ಬಿಸುವ ಮನಸ್ಸಾಗದೆ ನಿಮ್ಮ ಪಾದಕ್ಕೆ ಹಣೆ ಹಚ್ಚಿ ನಮಸ್ಕಾರ ಮಾಡಿ ಹೋಗುತ್ತಿದ್ದೇನೆ. ಪರಿಕ್ಷೆ ಮುಗಿದ ಮರುಕ್ಷಣ ಶಿವಮೊಗ್ಗ ಬಸ್ಸಿನಲ್ಲಿರುತ್ತೇನೆ.

ಒಂದು ಮಾತು. ನಿಮ್ಮ ಪ್ರಪಂಚದ ಮಟ್ಟಿಗೆ ನಾನೊಬ್ಬಳು ಸಾಮಾನ್ಯ ವ್ಯಕ್ತಿಯೂ ಆಗಿಲ್ಲದಿರಬಹುದು. ಆದರೆ ನನ್ನ ಪ್ರಪಂಚವನ್ನು ಪೂರ್ತಿಯಾಗಿ ತುಂಬಿಕೊಂಡಿರುವ ಏಕೈಕ ವ್ಯಕ್ತಿ ನಿವು ನೀವು ದೇವರಲ್ಲ ಹಿಮೂ ತುಂಬಾ ಒಳ್ಳೆಯ ಮನುಷ್ಯ.

ನಾನು ಊರ್ಮಿಳಾ,

ನಮಸ್ಕಾರ ಅನ್ನೋದನ್ನ ಈ ಜನ್ಮದಲ್ಲಿ ನಾನು ಭಗವಂತನಿಗೂ ಮಾಡೋದಿಲ್ಲ ಎಂದು ದೇಬ್‌ಗೆ ಖಡಾಖಂಡಿತವಾಗಿ ಕಡ್ಡಿ ಮುರಿದಂತೆ ಹೇಳಿದ ಊರ್ಮಿಳಾ. ಇವತ್ತು ಹಿಮವಂತನ ಕಾಲಿಗೆ ಹಣೆ ಹಚ್ಚಿ ನಮಸ್ಕಾರ ಮಾಡಿದ್ದನ್ನು ನೋಡಿದರೆ ಮಾನವ ಒಳ್ಳೆಯ ಸಂಬಂಧದಿಂದ ಏನು ಬೇಕಾದರೂ ಬಿಡಲುಬಹುದು, ಸಾಧಿಸಲುಬಹುದು ಎಂಬುದನ್ನು ರವಿಯವರ 'ಹೇಳಿ ಹೋಗು ಕಾರಣ' ಕಾದಂಬರಿಯ ಸ್ತ್ರೀ ಪಾತ್ರಗಳಿಂದ ತಿಳಿದುಕೊಳ್ಳಬಹುದು.

ಅಧ್ಯಾಯ ೪

ಲೈಂಗಿಕ ಶೋಷಣೆಯ ಸ್ವರೂಪ

ಅಧ್ಯಾಯ ೪

ಲೈಂಗಿಕ ಶೋಷಣೆಯ ಸ್ವರೂಪ

ಮಾನವನು ಸಮಾಜ ಜೀವಿ; ಅವನು ಒಂಟಿಯಾಗಿರಲು ಬಯಸುವುದಿಲ್ಲ. ಯಾವಾಗಲೂ ಇತರರೊಂದಿಗೆ ಸಂಪರ್ಕದಿಂದ ಇರಲು ಪ್ರಯತ್ನಿಸುತ್ತಾನೆ. ಅವನು ಸದೃಢವಂತನು ಹಾಗೂ ಆರೋಗ್ಯವಂತನೂ ಆಗಿರಬೇಕಾದರೆ ಮೂಲಭೂತ ಅವಶ್ಯಕತೆಗಳಾದ ಗಾಳಿ, ನೀರು, ಆಹಾರ ಅವಶ್ಯಕಗಳಾಗಿವೆ. ಇವುಗಳೊಂದಿಗೆ ಕಾಮವು ಪ್ರಮುಖವಾದುದು. ಅನಾದಿಕಾಲದಿಂದಲೂ ಲೈಂಗಿಕತೆ ಮನುಷ್ಯನ ಜೀವನದಲ್ಲಿ ಒಂದಲ್ಲ ಒಂದು ರೀತಿ ಹಾಸುಹೊಕ್ಕಾಗಿದೆ. ಮನುಷ್ಯನು 'ಕಾಮ'ದಿಂದ ಎಂದೆಂದೂ ಮುಕ್ತನಾಗಿರಲಾರ. ಅದು ಹುಟ್ಟಿನಿಂದ ಸಾಯುವವರೆಗೂ, ಜೀವನದ ಉದ್ದಕ್ಕೂ ಮಾನವರೊಂದಿಗೆ ಇರುತ್ತದೆ.

ಲೈಂಗಿಕತೆಯ ದೆಸೆಯಿಂದಾಗಿ ಪುರುಷ ಪ್ರಧಾನ ಸಮಾಜವು ಸ್ತ್ರೀಯರಿಗೆ ಶೋಷಣೆ ಮಾಡುತ್ತ ಹಿಂಸೆಗೆ ಗುರಿಮಾಡಿದ್ದನ್ನು ರವಿ ಬೆಳಗೆರೆಯವರ "ನೀ ಹಿಂಗ ನೋಡಬ್ಯಾಡ ನನ್ನ" ಕಾದಂಬರಿಯ ಗಿರಿ ಅಂಕಲ್ ಹಾಗೂ ಮೃಣಾಲಿನಿ ಪಾತ್ರದ ಮೂಲಕ ಬಳಸಿಕೊಂಡಿರುವುದನ್ನು ಗುರುತಿಸಬಹುದು. ಅದೇ ರೀತಿ "ಹೇಳಿ ಹೋಗು ಕಾರಣ" ಕಾದಂಬರಿಯ ಯಮುನಾ ಹಾಗೂ ಪ್ರಾರ್ಥನಾಳ ತಂದೆಯ ಸಂಬಂಧದಿಂದ ಗುರುತಿಸಬಹುದು. ಸ್ತ್ರೀಯರನ್ನು ಕೇವಲ ಭೋಗ ಜೀವನಕ್ಕೆ ಬಳಸಿಕೊಂಡಿರುವುದು ಗುರುತಿಸಬಹುದು. ಗಂಡಿಗೆ ಅನ್ವಯಿಸಿದ ಶೀಲದ ಪ್ರಾಮುಖ್ಯತೆ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆಂಬ ಪಕ್ಷಪಾತ ನಿಯಮಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಸ್ತುತದಲ್ಲಿವೆ. ಹೆಣ್ಣು ಎಂತಹ ಕಷ್ಟ ಕಾಲದಿಂದಲೂ ಶೀಲವನ್ನು ಹಾಳು ಮಾಡಿಕೊಳ್ಳದೇ ಕಾಪಾಡಿಕೊಳ್ಳಬೇಕು ಅಂತಹ ಸಂದರ್ಭವೇನಾದರೂ ಬಂದರೆ ಆತ್ಮ ಸಮರ್ಪಣೆ ಮಾಡಿಕೊಳ್ಳಬೇಕು ಎಂಬ ಒತ್ತಡವನ್ನು ಹೇರಿರುವುದು ಪುರುಷ ಪ್ರಧಾನ ಸಮಾಜದ ಶೋಷಣೆಯನ್ನು ಪ್ರತಿಬಿಂಬಿಸುತ್ತದೆ.

ಲೈಂಗಿಕ ಶೋಷಣೆ ಎನ್ನುವುದು ವಿವಾಹಿತ ಮತ್ತು ಅವಿವಾಹಿತ ಸ್ತ್ರೀಯರನ್ನು ಅವಿರತ ಕಾಡುವ ಸಮಸ್ಯೆಯಾಗಿದೆ. ವಿವಾಹವಾದ ಪುರುಷರು ಅಧಿಕ ಪ್ರಮಾಣದಲ್ಲಿ ವ್ಯಭಿಚಾರಿಗಳಾಗಿರುತ್ತಾರೆ. ಅವರ ವೈವಾಹಿಕ ಜೀವನ ತೃಪ್ತಿಕರವಾಗಿರುವುದಿಲ್ಲ. ಪತಿ–ಪತ್ನಿಯ ಲೈಂಗಿಕ ಸಂಪರ್ಕದಲ್ಲಿ ಅವರಿಗೆ ಆಸೆ ಇರುವುದಿಲ್ಲ. ಅದನ್ನು ಬೇರೊಬ್ಬರಿಂದ ಪಡೆಯಲು ಬಯಸುತ್ತಾರೆ. ರವಿ ಬೆಳಗೆರೆಯವರ 'ಹೇಳಿ ಹೋಗು ಕಾರಣ' ಕಾದಂಬರಿಯಲ್ಲಿ ಪ್ರಾರ್ಥನಾಳ ತಂದೆ ತನ್ನ ಪತ್ನಿಯಲ್ಲಿ ಕಾಣದ ಪ್ರೇಮ ಭೋಗವನ್ನು ಸೊಸೆ ಯಮುನಾಳಲ್ಲಿ ಕಾಣುತ್ತಾರೆ. ಹೊಸ ಅನುಭವದ ಆಸೆ–ಲೈಂಗಿಕ ಸಂಪರ್ಕದಿಂದ ಹೆಚ್ಚಾಗುತ್ತದೆ. ಅದರಿಂದಲೆ ಯಮುನಾರೊಂದಿಗಿನ ಅವರ ಸಂಬಂಧ ಪತಿ–ಪತ್ನಿಯರಿಗಿಂತ ಮಿಗಿಲಾಗಿರುತ್ತದೆ. ನಾಲ್ವರೇ ಇದ್ದ ಮನೆಯೊಳಕ್ಕೆ ಅತ್ತಿಗೆ

ಬರುತ್ತಾಳೆಂಬ ಸಂಗತಿಯೆ ಪ್ರಾರ್ಥನಾಳ ಪಾಲಿಗೊಂದು ದೊಡ್ಡ ಸಡಗರವಾಗಿತ್ತು. ಅಣ್ಣನ ಮದುವೆ ಹೊತ್ತಿಗೆ ಎಂಭತ್ತಮೂರು ತರಹದ ರಂಗೋಲಿಯಿಡುವುದು ಕಲಿತಿದ್ದಳು. ಅಣ್ಣನ ಕೋಣೆಯ ಗೋಡೆಯ ಗುಂಟ ಪುಟ್ಟ ಪುಟ್ಟ ನವಿಲುಗಳ ನೂರಾರು ಚಿತ್ರ ಬರೆದು ಅತ್ತಿಗೆಯ ಕಣ್ಣುಗಳಲ್ಲೊಂದು ಮೆಚ್ಚುಗೆ ತುಳುಕುತ್ತದೆಂದು ಕಾದಿದ್ದಳು. ಮದುವೆಯ ಮನೆಯಲ್ಲಿ ನಾವು ಗಂಡಿನ ಕಡೆಯೋರು ಎಂಬುದು ಹತ್ತು ನಿಮಿಷಕ್ಕೊಮ್ಮೆ ಮರೆತು ಹೋಗುತ್ತಿತ್ತು. ಅತ್ತಿಗೆಯ ಪಕ್ಕಕ್ಕೆ ಸೇರಿಕೊಂಡು ಬಿಡುತ್ತಿದ್ದಳು. ಮದುವೆ ದಿನ ಯಮುನಾಯುಟ್ಟ ನವಿಲು ಬಣ್ಣದ ಸೀರೆ ಇವತ್ತಿಗೂ ಕಣ್ಣಿಂದ ಚೆಕ್ಕು ಚೆದುರಿಲ್ಲ ಪ್ರಾರ್ಥನಾಳಿಗೆ ಎಂತಹ ಮಟ್ಟಸವಾದ ವಿಗ್ರಹ ಯಮುನೆಯದು. ಆಗಷ್ಟೆ ಹಚ್ಚಿಟ್ಟ ದೀಪಗಳಂತಿದ್ದವು ಕಣ್ಣು, ತುಂಬಾ ಮಾತಿನವಳಲ್ಲ ಆದರೆ ಎಲ್ಲ ಮಾತು ಅವಳ ಕಣ್ಣು ಆಡುತ್ತವೆ ಅನ್ನಿಸುವಂತಿದ್ದಳು. ಯಮುನಾಳ ಎದುರು ನಿಂತರೆ ಅಣ್ಣ ಪೀಚು ಪೀಚು ಅತ್ತ ಕೆಂಪೂ ಅಲ್ಲದ, ಕಪ್ಪೂ ಅಲ್ಲದ, ಎಣ್ಣೆಗೆಂಪೂ ಅಲ್ಲದ ಹೊಗೆ ಹೊಗೆ ಬಣ್ಣ ಅಣ್ಣನದು. ಅಣ್ಣ ಯಾವತ್ತು ತನ್ನಂತಿರಲಿಲ್ಲ ಎಂದು ಪ್ರಾರ್ಥನಾ ಅಂದುಕೊಂಡಳು. ಆದರೆ ಪ್ರಾರ್ಥನಾಳ ತಂದೆ ಅದೆಂತಹ ಚೆಲುವ ಮದುವೆ ಮನೆಯಲ್ಲಿ ಸುಕ್ಕಿಲ್ಲದ ಧೋತರ ಉಟ್ಟು ಜುಬ್ಬಾದ ಹೆಗಲಿಗೆ ಚಿಕ್ಕದೊಂದು ವಲ್ಲಿಯನ್ನು ಎಸುದುಕೊಂಡು ಮದುವೆ ಮನೆಯಲ್ಲಿ ಓಡಾಡಿಕೊಂಡಿದ್ದ. ಅಂತಹ ಅನುರೂಪ ಸೌಂದರ್ಯದ ಹುಡುಗಿಯನ್ನು ಮದುವೆಯಾಗಿ ಮಗ ಸ್ವಂತ ಮನೆಗೆ ಕೈ ಹಿಡಿದು ಕರೆತರುತ್ತಿದ್ದರೆ, ತಂದೆ ಹೆಮ್ಮೆಯೆ ಹೆಬ್ಬಾಗಿಲಾದವನಂತೆ ನಿಂತು ನಿರುಕಿಸುತಿದ್ದ. ತಂದೆಯ ಎರಡು ಕಾಲಿಗೆ ಯಮುನಾ ಹಣೆ ಹಚ್ಚಿ ನಮಸ್ಕಾರ ಮಾಡಿದಾಗ "ಈ ಮನೆಯಲ್ಲಿ ತುಂಬ ಸುಖವಾಗಿ ಬಾಳು ಮಗಳೇ" ಎಂದು ಆಶೀರ್ವದಿಸಿದ್ದ.

ಬೆಳಗ್ಗೆ ಎದ್ದು ಪ್ರಾರ್ಥನಾಳಿಗೆ ಅತ್ತಿಗೆ ಯಮುನಾಳನ್ನು ಕಾಡಬೇಕೆನಿಸಿತು. ಆದರೆ ಕೋಣೆಯಿಂದ ಎದ್ದು ಬಂದವಳ ಕಣ್ಣಲ್ಲಿ ನಿದ್ದೆಯಿನ್ನೂ ಕಿಡಿ ಕಿಡಿಯಾದ್ದರಿಂದ ಸುಮ್ಮನಾದಳು. ಇದ್ದಕ್ಕಿದ್ದಂತೆ ಯಮುನಾ ನಿರುಮ್ಮಳವಾಗಿಬಿಟ್ಟಿದ್ದಳು. ಮುಖದಲ್ಲಿ ಏನೋ ಸಮಾಧಾನ ಸ್ನಾನ ಮುಗಿಸಿದ ಹೆಂಗಸಿನ ಮುಖದಲ್ಲಿರುವಂತಹದು. ಆರು ತಿಂಗಳ ನಂತರ ಮೊದಲ ಬಾರಿಗೆ ಮಾತಾಗಿ ಹರಿದಿದ್ದಳು ಯಮುನೆ. ಅವಳ ದೇಹವೇ ಫಳಿಫಳಿಗೆಗೂ ಸಾಕ್ಷಿ ಹೇಳತೊಡಗಿದಂತ್ತಿತ್ತು. ಕಣ್ಣುಗಳಲ್ಲಿ ಸುಖದ ಕೆನೆ. ಅವಳ ಮುಖದಲ್ಲಿ ಅಂತಹದೊಂದು ದಿವ್ಯ ಸಂತೋಷವನ್ನು ನೋಡಿಯೇ ಹಿರಿಹಿರಿ ಹಿಗ್ಗಿದ್ದಳು ಪ್ರಾರ್ಥನಾ. ಈ ಸಲದ ಮಾವಿನ ಫಸಲು ಹುಸಿಹೋಗಲಾರದೆಂಬುದು ಖಾತರಿಯಾಗಿತ್ತು.

ಆದರೆ ಯಮುನಾಳ ಗಂಡನಲ್ಲಿ ಯಾವುದೇ ಬದಲಾವಣೆಗಳಾಗಿರಲಿಲ್ಲ. ಪ್ರಾರ್ಥನಾಳಿಗೆ ಆಶ್ಚರ್ಯವಾದುದು ಅದಕ್ಕಲ್ಲ. ಎಂದೂ ಇಲ್ಲದ ಬದಲಾವಣೆಗಳು ಅಮ್ಮನಲ್ಲಿ ಬಂದುಬಿಟ್ಟಿದ್ದವು. ಆಕೆಗೆ ಏನೋ ದುಃಖ, ಯಾವುದೋ ಖಾಯಿಲೆ, ಸುಮ್ಮನೆ ಒಳಮನೆಯ ಕಂಬಕ್ಕೊರಗಿ ಕುಳಿತು ಅಳುತ್ತಾಳೆ. ಮಾತೇ ಮುಗಿದು ಹೋಗಿವೆ ಎಂಬಂತೆ. ಏನಾಗಿದೆಯೋ ಕೇಳಿಯೇ ಬಿಡೋಣವೆಂದು ಅದೊಂದು

ಮಧ್ಯಾಹ್ನ ಅಂದುಕೊಂಡದ್ದಕ್ಕಿಂತ ಬೇಗ ಮನೆಗೆ ಬಂದು ಅತ್ತಿಗೆಯ ಕೋಣೆಯೊಳಕ್ಕೆ ಹೊಕ್ಕಾಗ ಸಿಡಿಲು ಬಡಿದಂತಾಗಿತ್ತು ಪ್ರಾರ್ಥನಾಳಿಗೆ. ಮಂಚದ ಮನೆಯಲ್ಲಿ ಯಮುನಾ ಮತ್ತು ತಂದೆ ಇದ್ದರು. ಇಂತಹ ಲೈಂಗಿಕತೆಯನ್ನು ಕಣ್ಣಾರೆ ಕಂಡ ಪ್ರಾರ್ಥನಾ ಕಂಬಕ್ಕೊರಗಿ ಕುಳಿತಳು. ತಾಯಿ ಬಿಕ್ಕಳಿಕೆ ಅಲ್ಲೆ ಹುಟ್ಟಿ ಸಾಯುತ್ತಿತ್ತು. ಇದನ್ನೆಲ್ಲ ಕಣ್ಣಾರೆ ಕಂಡ ಪ್ರಾರ್ಥನಾ ಒಂದೇ ಒಂದು ಮಾತು ಆಡದೆ ತಂದೆಗೆ ಹೀಗೆ ಹೇಳಿದಳು "ಅಪ್ಪಾ ಯಾವತ್ತಾದರೊಂದು ದಿನ ನನ್ನನ್ನೂ ಹೀಗೆ ನಡೆಸಿಕೊಳ್ತೀಯೆನೋ ಅಲ್ವಾ"? ಎಂದು ಅವತ್ತಿನಿಂದ ಆ ಮನೆಯನ್ನು ದ್ವೇಷಿಸುತ್ತ ಮನೆ ಬಿಟ್ಟು ಹೊರಟು ಹೋದಳು.

"ಈ ಮನೆಯಲ್ಲಿ ತುಂಬಾ ಸುಖವಾಗಿ ಬಾಳು ಮಗಳೇ" ಎಂದು ಆಶೀರ್ವದಿದಿಸಿದ ಮಾವ ತನ್ನ ಲೈಂಗಿಕ ಬಯಕೆ ತಿರಿಸಿಕೊಳ್ಳಲು ಅಪೇಕ್ಷೆ ಪಟ್ಟು ಇಡೇರಿಸಿಕೊಂಡಾಗ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಯಾವುದೇ ಸ್ಥಾನದಲ್ಲಿದ್ದರು ಲೈಂಗಿಕ ಶೋಷಣೆ ತಪ್ಪಿದ್ದಲ್ಲ ಎಂಬುದು ಈ ಕಾದಂಬರಿಯ ಪಾತ್ರಗಳಿಂದ ವ್ಯಕ್ತವಾಗುತ್ತದೆ. ಸಮಾಜದಲ್ಲಿ ಜೀವನ ಸಾಗಿಸಬೇಕಾದರೆ ಸಂಬಂಧಗಳು ಮಹತ್ವ ಪಡೆದುಕೊಂಡಿರುತ್ತವೆ. ಈ ಸಂಬಂಧಗಳ ಕೊಂಡಿ ಕಳಚಿದಾಗ ಇಡೀ ಸಂಬಂಧಗಳ ವ್ಯವಸ್ಥೆಗಳೆ ಚದುರಿ ಹೋಗುತ್ತವೆ. ಪ್ರಾರ್ಥನಾಳ ಅತ್ತಿಗೆ ಹಾಗೂ ತಂದೆಯೊಂದಿಗಿನ ಲೈಂಗಿಕ ಸಂಬಂಧ ಗಮನಿಸಿದ ಅವಳು ಯಾವತ್ತಾದರೊಂದು ದಿನ ನನ್ನನ್ನು ನೀನು ಹೀಗೆ ನಡೆಸಿಕೊಳ್ತಿರಿ ಎನ್ನುವಲ್ಲಿ ಕಾಮಕ್ಕೆ ಕಣ್ಣಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳುತ್ತ ನನಗೂ ಮುಂದೆ ಈ ಸಂದರ್ಭ ಬರಬಹುದು ಎಂದು ನಿಶ್ಚಯಿಸಿ ಆ ಮನೆಯನ್ನು ಪ್ರಾರ್ಥನಾ ದ್ವೇಷಿಸುತ್ತಾ ಮನೆ ಬಿಟ್ಟು ಹೊರಟು ಹೋದಳು. ಆದರೆ ಪ್ರಾರ್ಥನಾ ತಾಯಿಗೆ ಕಣ್ಣೀರೆ ಜೀವನವಾದಂತಾಯಿತು. ಈ ಸಂಬಂಧ ಮನೆಯವರೆಲ್ಲರಿಗೂ ಗೊತ್ತಾದಾಗ ಪ್ರಾರ್ಥನಾಳ ತಂದೆಯು ಮನೆ ತೊರೆದು ಹೊರಟು ಹೋಗುತ್ತಾನೆ.

ಲೈಂಗಿಕ ಕ್ರಿಯೆ ಮೂಲಭೂತವಾಗಿ ಜೀವನ ಸಹಜವಾದ ಸಂತಾನ ಪ್ರಾಪ್ತಿಗಾಗಿಯೇ ಜರುಗುವ ಕ್ರಿಯೆ. ಇದು ಜೈವಿಕ ವಿಜ್ಞಾನದ ದೃಷ್ಟಿಯಲ್ಲಿ ಎಲ್ಲ ಜೀವಿಗಳ ಪರಮ ಕರ್ತವ್ಯವಾಗಿದೆ. ಹಾಗಾಗಿಯೆ ಪ್ರತಿಯೊಂದು ಹೆಣ್ಣು ತಾಯಿಯಾಗಲು ಬಯಸುತ್ತಾಳೆ. ಇದರಿಂದಾಗಿಯೇ ಸ್ತ್ರೀಯರಿಗೆ ತಾಯ್ತನ ಅನಿವಾರ್ಯ ಎಂಬ ಸಾಮಾಜಿಕ ಮೌಲ್ಯವನ್ನು ಸ್ತ್ರೀ-ಪುರುಷರಿಬ್ಬರೂ ಒಪ್ಪಿಕೊಂಡ ಸಾಮಾಜಿಕ ಒಡಂಬಡಿಕೆಯಾಗಿದೆ. ಅಂತೆಯೆ ಮಹಿಳೆಯರು ಸಂತಾನಕ್ಕಾಗಿ ತವಕಿಸುವುದನ್ನು ಗುರುತಿಸಬಹುದು. ಈ ಒಡಂಬಡಿಕೆಯಿಂದಲೆ ಸಂತಾನವಿಲ್ಲದವರನ್ನು 'ಬಂಜೆ'ಯರೆಂದು ಹೀಯಾಳಿಸುತ್ತದೆ. ಈ ಕಠೋರತೆಯಿಂದ ಪಾರಾಗಲು ತಮ್ಮ ಗಂಡಂದಿರಿಂದ ಮಕ್ಕಳಾಗದಿದ್ದರು ಪರಪುರುಷನನ್ನು ಆಶ್ರಯಿಸುವುದನ್ನು ರವಿ ಬೆಳಗೆರೆಯವರ 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿ ಪಾತ್ರಗಳಲ್ಲಿ ಕಾಣಬಹುದಾಗಿದೆ. ಯಾವಾಗಲೋ ಊರು ಬಿಟ್ಟು ಹೋಗಿದ್ದ

ಜಗನ್ಮೋಹನರಾವ್ ಬೆಂಗಳೂರಿನಲ್ಲಿ ನಾಲ್ಕು ಕಾಸು ಅಂತ ಕಂಡವನು, ವಾಪಸ್ಸು ಊರಿಗೆ ಬಂದು ಅದು ತನ್ನ ಹಕ್ಕೇನೋ ಎಂಬಂತೆ ಮೃಣಾಲಿನಿಯನ್ನು ಮದುವೆಯಾದಾಗ ಈತ ಯಾವತ್ತು ಮೃಣಾಲಿನಿಯನ್ನು ಪ್ರೀತಿಯಿಂದ ನೋಡಿಕೊಳ್ಳಲೇ ಇಲ್ಲ. ಮದುವೆಯಾದ ಹೊಸದರಲ್ಲಿ ಮನೆಗೆ ಬಿಟ್ಟು ಹೋದವನು ಮತ್ತೆ ಬಂದುದ್ದು ನಡುರಾತ್ರಿಯ ಹೋತ್ತಿಗೆ.

ಇಡೀ ದಿನ ಹಸಿದು ಕಾಯುತ್ತ ಕುಳಿತಿದ್ದವಳನ್ನು 'ಊಟ ಆಯಿತಾ' ಅಂತ ಕೂಡ ಕೇಳದೇ "ನೀನು ಕಾಲಿಟ್ಟ ಘಳಿಗೆ, ನಿನ್ನ ಕಾಲ್ಗುಣ ಚೆನ್ನಾಗಿದೆ. ಇವತ್ತು ನಂಗೆ ದೊಡ್ಡ ಕಾಂಟ್ರಾಕ್ಟು ಸಿಕ್ತು. ಸೀರೆ ತಂದಿಟ್ಟಿದ್ದೇನೆ, ಹೊರಗೆ ಬೀರುವಾ ಮೇಲಿದೆ ನೋಡು" ಅಂದಿದ್ದ. ಅದನ್ನು ಕೈಯಾರೆಕೊಟ್ಟು ಹೆಂಡತಿಗೆ ಸಂತೋಷ ಉಂಟುಮಾಡಬೇಕು ಅಂತ ಕೂಡ ಗೊತ್ತಾಗದ ಅರಸಿಕ ಜಗನ್ಮೋಹನರಾವ್ ಅವನ ಈ ವರ್ತನೆಗೂ ಅವಳಿಗೆ ಬೇಜಾರಾಗಲಿಲ್ಲ. ಇವಳಿಲ್ಲಿ ಹಸಿದು ಕಾಯುತ್ತ ಕುಳಿತಿದ್ದರೆ ಅವನಲ್ಲೆಲ್ಲೋ ಉಂಡು ಬಂದಿದ್ದ. ಆತನ ಮೈ ನೋಡಿ ಅರ್ಥಮಾಡಿಕೊಂಡಿದ್ದಳು. ಅದು ಉಂಟು ಬಂದು ಚೆಲ್ಲಿಕೊಂಡಿರುವ ದೇಹವೆಂದು ಅರ್ಥವಾಯಿತು. ಬಂದವನಿಗೆ ಎರಡೇ ನಿಮಿಷದಲ್ಲಿ ನಿದ್ರೆ.

ಇತಿಹಾಸದ ಅವಲೋಕನ ಮಾಡಿದಾಗ ಸ್ತ್ರೀಯರನ್ನು ಲೈಂಗಿಕತೆಯ ಸರಕುಗಳನ್ನಾಗಿ ಉಪಯೋಗಿಸಿಕೊಂಡು ಬರುತ್ತಿರುವುದು ಅರಿವಾಗುತ್ತದೆ. ಲೈಂಗಿಕತೆಯನ್ನು ವ್ಯಾಪಾರಿ ಮನೋಭಾವದಿಂದ ವಾಣಿಜ್ಯ ಅಭಿವೃದ್ಧಿಗಾಗಿ ಬಳಸುತ್ತಿರುವ ರೀತಿ ಜಗನ್ಮೋಹನ್‌ರಾವ್ ಪಾತ್ರದಲ್ಲಿಯು ಗುರುತಿಸಬಹುದು. ಆತನು ಶರ್ಮಿಳಾಳನ್ನು ಮಾತ್ರ ಹೆಂಗಸಿನಂತೆ, ಮನುಷ್ಯಳಂತೆ ಒಂದು ವ್ಯಕ್ತಿತ್ವವೆಂಬಂತೆ ನೋಡುತ್ತಿದ್ದ ಅವಳನ್ನು ಬಿಟ್ಟರೆ ಅವನ ಪಾಲಿಗೆ ಜಗತ್ತಿನ ಉಳಿದೆಲ್ಲವು ಸರಕು. ಹೆಂಡತಿ ಕೂಡ ಒಂದು ಸರಕು. ಹೀಗೆ ಗಂಡನಿಂದ ಪಡೆಯಲಾಗದ ಲೈಂಗಿಕ ಸುಖವನ್ನು ತನ್ನ ಗಂಡನ ಜೊತೆ ಕೆಲಸಕ್ಕಿದ್ದ ಚಂದ್ರನೊಂದಿಗೆ ಲೈಂಗಿಕ ಸಂಬಂಧ ಬೆಳೆಯಿತು. ಮೃಣಾಲಿನಿ ಗರ್ಭಧರಿಸಿದಳು. ಅದು ಅವಳಿಗೆ ತಪ್ಪು ಅಂತ ಅವತ್ತಿಗೂ ಅನ್ನಿಸಲಿಲ್ಲ. ಯಾಕೆಂದರೆ ಅವಳು ಗಂಡನಿಂದ ಸಿಗಲಾರದ ತಾಯ್ತನದ ಫಲ ಚಂದ್ರನಿಂದ ಪಡೆದುಕೊಂಡಳು. ಆದರೆ ಪರಪುರುಷನೊಂದಿಗೆ ಗರ್ಭ ಧರಿಸಿದ ಅವಳಿಗೆ ಯಾವುದೆ ತೊಂದರೆ ಕೊಡಲಿಲ್ಲ ಮತ್ತು ಇಡೀ ಬಸರು, ಚಂದುವಿನ ಆರೈಕೆಯಲ್ಲೇ ಕಳೆಯಿತು. ರಾತ್ರಿ ಕೊಂಚ ತಡವಾದರೆ "ಚಂದೂ, ಅವಳು ಒಬ್ಬಳೇ ಇರ್ತಾಳೇ ನೀನು ಮನೆಗೆ ಹೋಗಿರು" ಅಂತ ಜಗನ್ ಖುದ್ದಾಗಿ ಹೇಳಿಕಳುಹಿಸುತ್ತಿದ್ದ. ಆದರೆ ಒಮ್ಮೊಮ್ಮೆ ಅವನ ಈ ವರ್ತನೆಯೆ ಚಂದ್ರನನ್ನು ಭಯಪಡಿಸುತ್ತಿತ್ತು. ಕಡೆಗೆ ಒಂಬತ್ತು ತುಂಬಿ ದಿನಗಳಿಗೆ ಬಿದ್ದು ಹೆರಿಗೆಗೆ ಚಡಪಡಿಸುವಾಗ ಆಸ್ಪತ್ರೆಗೆ ಜೊತೆಯಲ್ಲೆ ಬಂದಿದ್ದ. ಆದರೆ ಮೃಣಾಲಿನಿಗೆ ಹೆರಿಗೆಯಾದ ರಾತ್ರಿ ಚಂದ್ರನ ಕೊಲೆಯಾಗಿ ಹೋಗಿತ್ತು.

ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ತುಂಬಾ ರೊಮ್ಯಾಂಟಿಕ್ ಆಗಿ ಬರೆಯಬಲ್ಲ ರವಿ ಬೆಳಗೆರೆಯವರು ತಮ್ಮ ಕಾದಂಬರಿಯಲ್ಲಿ ಪ್ರಿಯಕರನೊಂದಿಗೆ ಹಠಕ್ಕೆ ಬಿದ್ದು ಆತನ ಮೇಲೆ ಸೇಡು ತೀರಿಸಿಕೊಳ್ಳಬೇಕು ಎಂದು ಹವಣಿಸುತ್ತಿರುವ ಪ್ರಾರ್ಥನಾ ಮುಂದೆ ಸುಜತ್ ಮಲ್ಹೋತ್ರಾನಿಂದ ಲೈಂಗಿಕ ಶೋಷಣೆಗೆ ಒಳಗಾಗಿರುವುದು 'ಹೇಳಿ ಹೋಗು ಕಾರಣ' ಕಾದಂಬರಿ ಪಾತ್ರಗಳಲ್ಲಿ ಗುರುತಿಸಬಹುದು.

ಪ್ರಾರ್ಥನಾ ತನ್ನ ಪ್ರಿಯಕರ ಇನ್ನು ನೆಮ್ಮದಿಯಾಗಿರಕೂಡದು. ದೇಬು ಬಾಸ್ಟರ್ಡ್, ಫ್ಲರ್ಟ್ ಮಾಡುವುದು ನಿನಗೊಬ್ಬನಿಗೇ ಅಲ್ಲ, ನನಗೂ ಬರುತ್ತೆ. ಇದೇ ದಾವಣಗೆರೆಯಲ್ಲಿ ಇದೇ ಕಾಲೇಜಿನಲ್ಲಿ ನಿನ್ನ ಕಣ್ಣೆದುರಿಗೆ ಮತ್ತೊಬ್ಬನ ಹೆಗಲು ತಬ್ಬಿ ಓಡಾಡುತ್ತೇನೆ. ಸಾಂಗತ್ಯದಲ್ಲಿ ಇಂಥ ಚಾಂಚಲ್ಯದ ಅಪಶ್ರುತಿ ಮೂಡಿಸಿದರೆ ಅದರ ಪರಿಣಾಮವೆಂತಹದಿರುತ್ತದೋ ನಿನಗೂ ಅರ್ಥವಾಗಲಿ. ಮಂಗಳೂರಿನ ಹೆಂಗಸನ್ನು ಕರೆಸಿಕೊಂಡೆ. ನನಗದು ನೋವಿನ ಸಂಗತಿಯೆನಿಸಲಿಲ್ಲ. ಮಂಗಳೂರಿನ ಹುಡುಗಿ ಎಂಬುದೊಂದು ಶರೀರ. ಕೇವಲ ದೇಹ. ಅದನ್ನು ನೀನು ಮೋಹಿಸು. ನನಗೆ ದುಃಖವಿರಲಿಲ್ಲ. ಆದರೆ ಊರ್ಮಿಳೆಯನ್ನು ಪ್ರೀತಿಸಬಾರದಿತ್ತು ನೀನು ಅದೊಂದು ಪಾಠವನ್ನು ನಿನಗೆ ತಿರುಗಿ ಕಲಿಸದೆ ನಾನು ಸ್ಥಿಮಿತಕ್ಕೆ ಬರಲಾರೆ ಹಾಗಂತ ನಿರ್ಧರಿಸಿದವಳೇ ಯಾವುದೋ ಹುಚ್ಚು ಆವೇಶಕ್ಕೆ ಬಿದ್ದವಳಂತೆ ಬೀದಿಯಲ್ಲಿ ಸರಸರನೆ ನಡೆದು ಟೆಲಿಫೋನ್ ಬೂತೊಂದರ ಗೂಡು ಹೊಕ್ಕು ಬಾಯ್ಸ್ ಹಾಸ್ಟೆಲಿನ ನಂಬರಿಗೆ ಕರೆಮಾಡಿ ಸುಜಯ್ ಮಲ್ಹೋತ್ರಾ ಇದಾರಲ್ಲ ಅವರನ್ನ ತಕ್ಷಣ ಕರೀತಿರಾ ಅಂತ ಮಾತನಾಡಿ ಹರಿಹರದ ರಸ್ತೇಲಿ ನೀವು ಬನ್ನಿ ಎಂದು ಹೇಳಿದಳು. ನಂತರ ಸುಜಯ್ ತನ್ನ ಯಮಹ ಮೊಬೈಕಿನ ಮೇಲೆ ಅವಳೆದುರಿಗೆ ಪ್ರತ್ಯಕ್ಷನಾದ ತಮಾಷೆಯೇನಲ್ಲ. ಸುಮ್ಮನೆ ದೇಬುವನ್ನು ನೋಯಿಸುವುದಕ್ಕೆ ಒಂದು ನೆಪವಾಗಿ ಸುಜಯ್‌ನನ್ನು ಈ ರಾತ್ರಿಯಲ್ಲಿ ಹೊರಡಿಸಿಕೊಂಡು ದಾಬಾಗೆ ಬಂದುದು. ದಾಬಾದಲ್ಲಿ ಅವರದೆ ಕಾಲೇಜಿನ ನಾಲ್ಕಾರು ಜೋಡಿಗಳಿದ್ದುದು ಕಂಡು ಪ್ರಾರ್ಥನಾಳಿಗೆ ಇನ್ನಷ್ಟು ಖುಷಿಯಾಯಿತು. ನಾಳೆ ಬೆಳಗ್ಗೆ ಮುಟ್ಟುತ್ತದೆ ದೇಬುವಿಗೆ ಸುದ್ದಿ ಎಂದು ಸಮಾಧಾನ ಪಟ್ಟುಕೊಂಡಳು.

"ಅದ್ಯಾಕೆ ಇವತ್ತು ನನ್ನ ನೆನಪಾಯ್ತು? ದೇಬು ಎಲ್ಲಿ?" ಸುಜಯ್ ಕೇಳಿದ.

"ಹಿ ಈಸ್ ವಿಥ್ ಊರ್ಮಿಳಾ..." ಅಂದವಳ ಧನಿಯಲ್ಲಿ ಪಸೆಯಿರಲಿಲ್ಲ.

"ಓ ಅದಕ್ಕೋಸ್ಕರ ನಾಣು ನೆನಪಾದೆನಾ?' ಕೆಣಕುತ್ತಿದ್ದ ಸುಜಯ್.

ದಾಬಾದಲ್ಲಿ ಸುಜಯ್ ಮೂರನೇ ವಿಸ್ಕಿಯನ್ನು ಬರಿದು ಮಾಡಿ ಅವಳ ಕಣ್ಣುಗಳನ್ನೆ ದಿಟ್ಟಿಸಿ ನೋಡುತ್ತಿದ್ದ. ಆದರೆ ನಾಲ್ಕನೆಯ ಲಾರ್ಜ್ ಮುಗಿಯುವ ಹೊತ್ತಿಗೆ ಸುಜಯ್ ಮೊದಲಿನ ಮನುಷ್ಯನಾಗಿರಲಿಲ್ಲ. ಬೇಟೆಗಾರ ಅವುಚಿ ಅಂಗೈಯಲ್ಲಿ ಹಿಡಿದುಕೊಂಡು ಹಕ್ಕಿಯ ಎದೆ ಥವಗುಡುವಂತೆ ಥವಗುಡುತ್ತಿತ್ತು ಪ್ರಾರ್ಥನಾಳನ

ಗುಂಡಿಗೆ. ಸುಜಯ್ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿ ಮುಖದ ಪ್ರತಿ ತಿರುವು, ಪ್ರತಿ ಕ್ಷಣ, ಪ್ರತಿ ಕವಳಿಕೆಯಲ್ಲೂ ಇದ್ದ ಅಮಾಯಕತೆಯನ್ನು ಸರ್ವನಾಶ ಮಾಡಿಬಿಡುವಂತೆ ಅವಳ ತೋಳ ಮೇಲೆ ಎದೆಯ ಇಳಿಜಾರಿನ ಮೇಲೆ ರಕ್ತ ಕಂದದಂತಹ ಗುರುತುಗಳು ಮೂಡಿವೆ. ಸುಜಯ್ ಮಲ್ಹೋತ್ರಾನ ಬೆರಳ ಗುರುತುಗಳವು.

ಅಂತಹ ಅರ್ಧ ರಾತ್ರಿಯಲ್ಲೂ ರವಿಕೆ ತೊಯ್ದು ಹೋಗುವಷ್ಟು ಬೆವೆತಿದ್ದಳು. ನನ್ನ ಬದುಕಿನ ಯಾವ ರಾತ್ರಿಯೂ ಇಷ್ಟು ಭಯಾನಕವಾಗಿರಲಿಲ್ಲ. ಸುಜಯ್ ಎಂತಹ ಕ್ರೂರಿ ಎಂತೆನಿಸಿತು. ಅವಳಿಗೆ ಗಂಡು ದಾರಿ ತಪ್ಪಿದಾಗ ಹೆಣ್ಣು ಅದೇ ದಾರಿಯಿಂದ ಆತನಿಗೆ ಫ್ಲರ್ಟ್ ಮಾಡಬೇಕು ಎಂದು ಹೊರಟ ಪ್ರಾರ್ಥನಾ ತಾನೇ ಲೈಂಗಿಕ ಶೋಷಣೆಗೆ ಒಳಗಾದಳು. ಸಾಮಾಜಿಕ ವ್ಯವಸ್ಥೆಯಲ್ಲಿ ಯಾರನ್ನೇ ನಂಬಿ ವಿನಯತೆಯಿಂದ, ನಿರುಂಬಳತೆಯಿಂದ ಮಾತನಾಡಿದರೆ ಸಾಕು ಪ್ರತಿ ವಿಷಯದಲ್ಲಿ, ಪ್ರತಿ ಕೆಲಸದಲ್ಲಿಯೂ ಸ್ತ್ರೀಯರು ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದನ್ನು ಗುರುತಿಸಬಹುದು. ಇಲ್ಲಿ ಆದುದು ಅದೇ. ಸುಜಯ್, ದೇಬ್‌ನ ಆಪ್ತ ಸ್ನೇಹಿತ. ಆದರೆ ಸ್ನೇಹಿತನ ಪ್ರತಿ ಕೆಲಸದಲ್ಲಿಯು ಸ್ತ್ರೀ ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದನ್ನು ಪ್ರೀಯತಮೆಯನ್ನೇ ಬಯಸಿದ. ಈ ಘಟನೆಯಿಂದ ಮಾನವ ಸಂಬಂಧಗಳಲ್ಲಿ ನಂಬಿಕೆಯೇ ಉಳಿಯದಂತ ಸ್ಥಿತಿ ನಿರ್ಮಾಣವಾಗುತ್ತಿರುವುದು ಕಂಡುಬರುತ್ತದೆ.

ಲೈಂಗಿಕತೆ ಮಾನವರ ಮೂಲಭೂತ ಅಗತ್ಯಗಳಲ್ಲಿ ಒಂದು. ಇದನ್ನು ವಯಸ್ಸಿಗನುಗುಣವಾಗಿ ಹಾಗೂ ಕಾಲಮಾನಕ್ಕನುಗುಣವಾಗಿ ಪೂರೈಸದೆ ಹೋದರೆ ಜೀವನವು ದುರಂತಮಯವಾಗುತ್ತದೆ. ಹಾಗಾಗಿ ವಿವಾಹ ಬಾಹಿರ ಸಂಬಂಧಗಳು ಉದ್ಭವಿಸುತ್ತವೆ. ಈ ಸಂಬಂಧಗಳನ್ನು ಕುರಿತಂತೆ ರವಿ ಬೆಳಗೆರೆಯವರ ಕಾದಂಬರಿಗಳಲ್ಲಿ ಅದರ ಸಾಧಕ–ಬಾಧಕಗಳನ್ನು ಗುರುತಿಸಬಹುದು. 'ಕಾಮ' ಮಾನವ ಪ್ರವೃತ್ತಿಗಳಲ್ಲಿ ಒಂದು. ಅದೊಂದು ನೈಸರ್ಗಿಕ ನಿಯಮ. ಗಂಡು ಹೆಣ್ಣಿನ ಸಂಬಂಧವು ಒಂದು ಜೈವಿಕ ಅನಿವಾರ್ಯವಾಗಿದೆ. ಇದರಲ್ಲಿ ಯಾವುದೇ ಅತಿರೇಕವಾಗಲಿ, ವಿಶೇಷತೆಯಾಗಲಿ ಇಲ್ಲ. 'ಹೇಳಿ ಹೋಗು ಕಾರಣ' ಕಾದಂಬರಿಯ ಊರ್ಮಿಳೆಯ ಪಾತ್ರ ಇದಕ್ಕೆ ಅಪವಾದವಲ್ಲ. ಏಕೆಂದರೆ ಮನುಷ್ಯನು ಬಾಯಾರಿದಾಗ ಸಿಹಿಯಾದ ನೀರನ್ನು ಕುಡಿಯುತ್ತಾನೆ. ಹಸಿವಿನಿಂದ ಪೀಡಿತನಾದಾಗ ಅನ್ನವನ್ನು ತಿನ್ನುತ್ತಾನೆ. ಹಾಗೆಯೇ ಕಾಮದ ಬೆಂಕಿ ಜ್ವಲಿಸಲಾಗಿ ಪ್ರಿಯಳನ್ನು ಅಥವಾ ಪ್ರಿಯತಮನನ್ನು ಬಿಗಿದಪ್ಪುತ್ತಾನೆ. ಇದು ಮಾನವನ ಸಹಜ ಗುಣಧರ್ಮವಾಗಿದೆ. ಆದರೆ ಇದು ಕೇವಲ ಲೈಂಗಿಕತೆಗೆ ಮಾತ್ರ ಸೀಮಿತವಾಗಿರಬಾರದು. ಒಂದು ವೇಳೆ ಲೈಂಗಿಕತೆಗೆ ಸಂಬಂಧಿಸಿದರೆ ಪ್ರಾಯದ ಹೆಣ್ಣು ಯಾವ ರೀತಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ ಎಂಬುದನ್ನು ಇವರ ಕಾದಂಬರಿಯ ಪಾತ್ರಗಳಿಂದ ತಿಳಿದುಕೊಳ್ಳಬಹುದಾಗಿದೆ.

ಒಂದು ದಿನ ಊರ್ಮಿಳಾ ತನ್ನ ತಂದೆಯ ಮುಖವನ್ನೇ ದಿಟ್ಟಿಸಿ ನೋಡುತ್ತಾ ಎಂತಹ ತಂದೆ ಈತ. ತಾನೇ ಕಾರಿನಲ್ಲಿ ಕರೆದೊಯ್ದು ಮಡಿಕೇರಿಯಲ್ಲಿರುವ

ಜಯಂತನ ಎಸ್ಟೇಟಿಗೆ ಬಿಟ್ಟು ಬಂದಿದ್ದ. ಒಂದು ಚಿಕ್ಕ ಸಿಡಿಮಿಡಿ ಕೂಡ ಮಾಡದೆ, ಇದು ನೀನೇ ಕಟ್ಟಿಕೊಂಡ ಭ್ರಮೆ ಮಗಳೇ, ನೀನೆ ಕಳೆದುಕೊಳ್ಳಬೇಕು ಎಂದು ಹದಿನೆಂಟು ವರ್ಷದ ಮಗಳನ್ನು ಯಾವ ತಂದೆಯೂ ಹೀಗೆ ಬಾಯ್ ಫ್ರೆಂಡ್‌ನ ಕೈಗೊಪ್ಪಿಸಿ ಹಿಂದಿರುಗುವುದಿಲ್ಲ. ಆದರೆ ನಾನು ನಿನ್ನನ್ನು ಹದಿನೆಂಟು ವರ್ಷ ಎದೆಗವಚಿಕೊಂಡು ಸಾಕಿದ್ದೇನೆ. ಸಂಸ್ಕಾರ ಅಂತ ಒಂದಿದ್ದರೆ, ಈ ಹದಿನೆಂಟು ವರ್ಷಗಳಲ್ಲಿ ನಾನದನ್ನು ಸ್ವಲ್ಪವಾದರು ನಿನಗೆ ಧಾರೆಯೆರೆದಿರುತ್ತೇನೆ. ಜಯಂತನ ಎಸ್ಟೇಟಿನಲ್ಲಿ ನಿನ್ನನ್ನು ನೀನು ಉಳಿಸಿಕೊಂಡು ಬಾಳುವುದಕ್ಕೆ ಅಥವಾ ಉಳಿಸಿಕೊಂಡು ಹಿಂತಿರುಗುವುದಕ್ಕೆ ಅಷ್ಟು ಮಾತ್ರದ ಸಂಸ್ಕಾರದ ಆಸರೆ ಸಾಕು. ದೇಹದ ಬಗ್ಗೆ ನಾನು ಮಾತನಾಡುವುದಿಲ್ಲ. ಅದು ಕೇವಲ ನಿನಗೆ ಸೇರಿದ್ದು. ಆದರೆ ಮನಸ್ಸಿದೆಯಲ್ಲ ಮರೀ ಅದರ ಮೇಲೆ ನಮ್ಮೆಲ್ಲರದು ಅಧಿಕಾರವಿದೆ. ಅಧಿಕಾರಕ್ಕಿಂತ ಹೆಚ್ಚು ಅಕ್ಕರೆಯಿದೆ. ಎಸ್ಟೇಟಿನ ಬಾಗಿಲಲ್ಲಿ ಊರ್ಮಿಳೆಯನ್ನು ಬಿಟ್ಟು ಹೊರಟಾಗ ಅವರ ತಂದೆ ಇಷ್ಟು ಮಾತ್ರ ಹೇಳಿದ್ದ.

ಆದರೆ ಮಡಿಕೇರಿಯ ಎಸ್ಟೇಟಿನಿಂದ ಅವಳು ಮಾನಸಿಕವಾಗಿ ಛಿದ್ರಗೊಂಡು ಹಿಂತಿರುಗಿದಳು. ಹೀಗೆ ಹಿಂತಿರುಗಿದವಳು ಒಂದು ತೀರ್ಮಾನಕ್ಕೆ ಬಂದಳು. ಯಾವ ಗಂಡಸನ್ನು ಜೀವಮಾನ ಪರ್ಯಂತ ಪ್ರೀತಿಸಕೂಡದು. ಪ್ರೀತಿ ಕೂಡ ಋತುವಿನಂತಹುದು. ಇವತ್ತು ಮಳೆಯಾದರೆ, ನಾಳೆ ಬಿರುಬಿಸಿಲು ಇವೆರಡರ ನಡುವೆ ಕಮ್ಮಗೆ ಮೂಡುವ ಕಾಮನಬಿಲ್ಲಿನಂತಹುದೇ ವಾಂಛೆ ಅಂತಹದೊಂದು ಕಾಮನಬಿಲ್ಲು ತುಳಿದು ಹೆದೆಯೇರಿಸಿಕೊಂಡರೆ ಸಾಕು. ಬದುಕೆಲ್ಲ ಉನ್ನತ, ಉನ್ಮಾದಗಳ ಚರಮ ಸೀಮೆ.

ಊರ್ಮಿಳಾ, ಬದುಕಿನ ಯಾವುದಾದರೊಂದು ಹಂತದಲ್ಲಿ ಸೂಳೆಯಾಗಬೇಕು ಎಂದು ಚಡಪಡಿಸುವುದೇ ಅದಕ್ಕಾಗಿ ಪಿಯುಸಿ ದಾಟುವ ಮೊದಲೇ ಪ್ರೀತಿ ಪ್ರೇಮಗಳೆಲ್ಲ ಶುದ್ಧ ಸುಳ್ಳು ಎಂಬುದನ್ನು ಮನವರಿಕೆ ಮಾಡಿಕೊಂಡ ಹುಡುಗಿ. ಎಲ್ಲ ಪ್ರೀತಿಯ ತಾಯಿಬೇರು ವಾಂಛೆ. ಪ್ರತಿ ಮನುಷ್ಯನು ಪ್ರೀತಿಯ ಮುಖವಾಡ ಹಾಕಿಕೊಂಡೇ ವಾಂಛೆಗಳನ್ನು ಕದ್ದಿಟ್ಟುಕೊಳ್ಳುತ್ತಾನೆ. ಜಯಂತನ ಲೈಂಗಿಕ ಬಯಕೆಯಿಂದ ಮಾನಸಿಕವಾಗಿ ಛಿದ್ರಗೊಂಡ ಊರ್ಮಿಳೆ ಪುರುಷ ಸಮಾಜವನ್ನು ನೋಡುವ ದೃಷ್ಟಿಕೋನವೇ ಬೇರೆಯಾಯಿತು. ಅವಳು ಮಾನಸಿಕವಾಗಿ ಜರ್ಝರಿತವಾಗಿ ಹೋದಳು. ವಿವಾಹಬಾಹಿರ ಸಂಬಂಧಗಳು ಹೇಗೆ ಅಧಃಪತನದತ್ತ ಸಾಗುತ್ತವೆ. ಅದರಿಂದ ಸ್ತ್ರೀಯರ ಮೇಲಾಗುವ ಪರಿಣಾಮಗಳನ್ನು ಗುರುತಿಸಬಹುದು.

'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಗಂಡಸು ಲೈಂಗಿಕ ಚಪಲತೆಯಿಂದ ಕೂಡಿದ್ದರೆ ಸ್ತ್ರೀಗಾಗುವ ಮಾನಸಿಕ ವೇದನೆ, ಅವಳ ಸಹನೆಯ ಕಟ್ಟೆ ಒಡೆದರೆ ಗಂಡು ಯಾವ ಸ್ಥಿತಿಗೆ ತಲುಪುತ್ತಾನೆ. ಅಲ್ಲದೆ ಒಬ್ಬರೊಂದಿಗೆ ಲೈಂಗಿಕ ಶಕ್ತತೆ ಬೆಳೆಸಿ ಮತ್ತೊಂದು ಹೆಣ್ಣು ಬಯಸಿ ಆತನಾದ ಸ್ಥಿತಿಗೆ ತನ್ನ ಬಲೆಯನ್ನು ತಾನೇ ಬೀಸಿಕೊಂಡಿರುವುದನ್ನ ಈ ಕಾದಂಬರಿಯ ಪಾತ್ರಗಳಿಂದ ಗುರುತಿಸಬಹುದು.

ಈ ಕಾದಂಬರಿಯಲ್ಲಿ ಮೃಣಾಲಿನಿ ಮತ್ತು ಚಂದುವಿನ ಲೈಂಗಿಕ ಸಂಬಂಧ ತಿಳಿದಾಗ ಮೃಣಾಲಿನಿಯ ಗಂಡ ಜಗನ್ಮೋಹನರಾವು ಚಂದುವನ್ನು ಕೊಲೆ ಮಾಡಿಸುತ್ತಾನೆ. ಇದರಿಂದ ಮಾನಸಿಕ ಆಘಾತಕ್ಕೆ ಒಳಗಾದ ಅವಳನ್ನು ಮೂರು ತಿಂಗಳೂ ಆಂಧ್ರದ ತನ್ನ ಹಳ್ಳಿಗೆ ಕಳುಹಿಸಿಕೊಡಲು ನಿರ್ಧರಿಸುತ್ತಾನೆ. ಸ್ಥಳ, ವಾತಾವರಣ, ಜನಸಂಪರ್ಕದಿಂದ ಅವಳಲ್ಲಿ ಬದಲಾವಣೆ ಬರಬಹುದು ಎಂಬ ಉದ್ದೇಶ ಆತನದಾಗಿತ್ತು. ಅದರಂತೆ ಅಲ್ಲಿಂದ ಹಿಂತಿರುಗುವ ಹೊತ್ತಿಗೆ ಮೃಣಾ ಪೂರ್ತಿ ಹೊಸ ಮನುಷ್ಯಳಾಗಿ ಮರಳಿ ಬಂದಿದ್ದಳು. ಏಕೆಂದರೆ, ಅವಳೊಂದಿಗೊಬ್ಬ ಹೊಸ ಮನುಷ್ಯ ಬಂದಿದ್ದ ಆತನ ಹೆಸರು ಗಿರಿಬಾಬು. ಸಂದರ್ಭ ಸಾಧಿಸಿ ಗಿರಿಬಾಬು ಜಗನ್ಮೋಹನ ಬದುಕಿನೊಳಕ್ಕೆ ಕಾಲಿಟ್ಟ. ಇತನನ್ನು ಶ್ರಾವಣಿಯು ತುಂಬಾ ಹಚ್ಚಿಕೊಂಡಿದ್ದಳು. ಜಗನ್ಮೋಹನರಾವು ಮಾತ್ರ ಆತನನ್ನು ಯಾವುದೇ ಕೆಲಸಕ್ಕೆ ಬಾರದ ಆಕೃತಿ. ವ್ಯಾಪಾರ ವ್ಯವಹಾರಗಳು ಆತನಿಗೆ ಅರ್ಥವಾಗುವುದಿಲ್ಲ. ಹೆಣ್ಣಾಗಿದ್ದರೆ ಅಪ್ಪಟ ಗೃಹಿಣಿಯಾಗುತ್ತಿದ್ದ ಅಂದುಕೊಂಡು ಸುಮನಾಗಿದ್ದ. ಆದರೆ ಮೃಣಾಲಿನಿಗೆ ಭಯವಾಗುತ್ತಿತ್ತು. ಚಂದುವನ್ನು ಕೊಲೆ ಮಾಡಿಸಿದಂತೆ ಇತನನ್ನು ಎಂದು ವಿಚಾರಿಸಿ ಜಗನ್‌ನಿಂದ ಗಿರಿಗೆ ಯಾವುದೇ ರೀತಿಯ ತೊಂದರೆ ಕೊಡುವುದಿಲ್ಲ ಎಂದು ಮಾತು ಕೊಡುವಂತೆ ವಿನಂತಿಸಿದಳು. ಜಗನ್ ಎರಡು ಮೂರು ದಿನ ಯೋಚಿಸಿ ಆತನನ್ನು ಕೆಲಸಕ್ಕೆ ಬಾರದ ಆಕೃತಿಯಂತಿದ್ದಾನೆಂದು ಮಾತು ಕೊಡುವ ಮುನ್ನ ಗಿರಿಬಾಬು ಇರಲಿ, ಆದರೆ ಅವನಿಗೆ ಬೇರೆ ಮನೆ ಮಾಡಿಕೊಡ್ತಿನಿ. ಯಾವ ಕಾರಣಕ್ಕೂ ಅವನಿಗೆ ನನ್ನಿಂದ ತೊಂದರೆಯಾಗುವುದಿಲ್ಲ. ಆದರೆ ಸಮಾಜದಲ್ಲಿ ನಂಗೆ ನಂದೂಂತ ಒಂದು ಹೆಸರಿದೆ. ಅದಕ್ಕೆ ಧಕ್ಕೆ ತರಬೇಡ ಎಂದು ಹೇಳಿ ಒಂದು ವರ್ಷದೊಳಗೆ ಆತನಿಗೆ ಅಂತ ಸೈಟು ಕೊಂಡು ಮನೆಕಟ್ಟಿಸಿಕೊಟ್ಟಿದ್ದ ಜಗನ್. ಅವತ್ತು ಗಿರಿಬಾಬುವಿನ ಕಣ್ಣಲ್ಲಿ ಕೃತಜ್ಞತೆಯ ನೀರಿದ್ದವು.

ಗಿರಿಬಾಬು ಆ ಮನೆಯ ಒಬ್ಬ ಸದಸ್ಯನಾಗಿ ಉಳಿದುಕೊಂಡ. ಶ್ರಾವಣಿಗೆ ಗಿರಿ ಅಂಕಲ್ ಎಂದರೆ ಪಂಚಪ್ರಾಣ. ಅವಳ ಪ್ರತಿಯೊಂದು ಕಾರ್ಯವನ್ನು ತಾನೆ ಮಾಡುತ್ತಿದ್ದ. ಕಾಫಿ ಮಾಡಿಕೊಡುವಾಗ ದೇವರು ಕುಡಿಯುವಂತಹ ಕಾಫಿ ಮಾಡಿಕೊಡುತ್ತೇನೆ ಮಗು ಎಂದು ಸಮಾಧಾನ ಪಡಿಸುತ್ತಿದ್ದ. ಶಾಲೆಗೆ ಕಳುಹಿಸುವುದು ಕರೆತರುವುದು ಎಲ್ಲವನ್ನು ತಾನೇ ನೋಡಿಕೊಳ್ಳುತ್ತಿದ್ದ. ಹೀಗಿದ್ದಾಗ ಒಂದೊಂದು ಸಲ ಶ್ರಾವಣಿ ಈತನೇ ನನಗೆ ತಂದೆಯಾಗಿದ್ದರೆ ಎಷ್ಟು ಆನಂದವಾಗಿರುತ್ತಿದ್ದೇನಲ್ವಾ ಎಂದು ಯೋಚಿಸುತ್ತಿದ್ದಳು. ಶ್ರಾವಣಿ ಪ್ರತಿಯೊಂದು ಹೆಜ್ಜೆಯಲ್ಲೂ ಗಿರಿ ಅಂಕಲ್ ಇದ್ದ ಹಾಗೆ ಬಾಸವಾಗುತ್ತಿತ್ತು ಅವಳಿಗೆ. ಮೃಣಾಲಿನಿಯನ್ನು ಅಷ್ಟೇ ಪ್ರೀತಿಯಿಂದ ಕಾಣುತ್ತಿದ್ದ. ಆದರೆ ಜಗನ್ಮೋಹನ್‌ರಾವ್ ಹೆಂಡತಿ ಮೃಣಾಲಿನಿಯನ್ನು ಯಾವತ್ತು ಪ್ರೀತಿಯಿಂದ ಕಾಣುತ್ತಿರಲಿಲ್ಲ. ಮಗಳನ್ನು ಮಾತ್ರ ಅಕ್ಕರೆಯಿಂದ ಕಾಣುತ್ತಿದ್ದ. ಮಗಳ ಹುಟ್ಟಿದ ಹಬ್ಬಕ್ಕೆ ದೊಡ್ಡ ದೊಡ್ಡ ಶ್ರೀಮಂತರು, ಬಿಜಿನೆಸ್ ಮೆನ್‌ಗಳು ಬಂದಾಗಲು ಆತ ಮಗಳನ್ನು ಪರಿಚಯಿಸುತ್ತಿದ್ದನೆ ಹೊರತು ಹೆಂಡತಿಯನ್ನು ಪರಿಚಯಿಸುತ್ತಿರಲಿಲ್ಲವಾದ್ದರಿಂದ

ಮೃಣಾಲಿನಿ ಯಾವುದೇ ಕೆಲಸಕ್ಕೆ ಬಾರದ ಆಕೃತಿಯಂತಾಗಿದ್ದಳು. ಆಕೆಯೊಂದಿಗೆ ಅಕ್ಕರೆಯೊಂದಿಗಿದ್ದವನು ಗಿರಿಬಾಬು. ಯಾವಾಗಲೂ ಮನೆಯಲ್ಲೆ ಇರುವವನಾಗಿದ್ದರಿಂದ ಮೃಣಾಲಿನಿ ಹಾಗೂ ಶ್ರಾವಣಿಗೆ ತುಂಬಾ ಸಹಾಯಕನಾಗಿದ್ದ ಮತ್ತು ಅವರು ಅವನನ್ನು ಅಷ್ಟೇ ಅಕ್ಕರೆಯಿಂದ ಕಾಣುತ್ತಿದ್ದರು.

ಯಾವಾಗ ಜಗನ್ಮೋಹನ್‌ರಾವ್‌ನ ಆಫೀಸಿನ ಅಸಿಸ್ಟಂಟ್ ಶರ್ಮಿಳೆಯು ಆತನಿಗೆ ಅವಮಾನವಾಗುವಂತೆ ಮಾತನಾಡಿದ್ದಾಳೊ ಅವತ್ತಿನಿಂಧ ಗಿರಿ ಬಾಬುವಿನ ವರ್ತನೆಯೇ ಬದಲಾದಂತಾಯಿತು. ಶರ್ಮಿಳೆಯನ್ನು ಲೈಂಗಿಕ ದಾಹಕ್ಕೆ ಬಯಸಿ ಅವಳೊಂದಿಗೆ ಒಮ್ಮೆಯಾದರು ದಣಿಯಬೇಕು. ದುಡಿದು ದಣಿಯುವಂತ ದಣಿವಲ್ಲ ಅದು. ಗಂಡಸು ಬಯಸಿ ದಣಿಯುವಂತಹ ದಣಿವು. ಇದೆ ಆತುರದಲ್ಲಿದ್ದ ಗಿರಿ ಮುಂದೆ ಮೃಣಾಲಿನಿಯೊಂದಿಗೂ ಲೈಂಗಿಕ ಸಂಬಂಧ ಬೆಳೆಸಿದ. ಇಲ್ಲಿಂದ ಮುಂದೆ ದಿನಗಳೆದಂತೆ ಆತನ ದಿನಚರಿಗಳು ನಿಗೂಢ ರೀತಿಯಲ್ಲಿ ಬೆಳವಣಿಗೆ ಹೊಂದಿದವು. ಆದರೆ ಇತನ ಒಳಸಂಚು ಯಾರಿಗೂ ಅರ್ಥವಾಗಿರಲಿಲ್ಲ. ಶ್ರಾವಣಿಗಂತು ಅದರ ಪರಿವೇ ಇಲ್ಲದ ಹಾಗೇ ಯಾವುದೇ ತೊಂದರೆ ಇಲ್ಲದ ಹಾಗೆ ಅವಳು ನೆಮ್ಮದಿಯಾಗಿದ್ದಳು. ನಿಧಾನವಾಗಿ ಗಿರಿ ಆಂಧ್ರ ಮೂಲದ ಚಂಗಳರಾಯುಡು ಎಂಬ ಕೊಲೆಘಾತುಕ ವ್ಯಕ್ತಿಯೊಂದಿಗೆ ನಿಕಟ ಸಂಪರ್ಕ ಸಾಧಿಸಿದನು. ಒಂದೊಂದು ಸಮಯದಲ್ಲಿ ಹೆಣ್ಣು ಯಾವುದೋ ಮಾನಸಿಕ ಒತ್ತಡಕ್ಕೆ ಒಳಗಾಗಿ ವಿಷಯ ಗೊತ್ತಿದ್ದರು ಸುಮ್ಮನಿರುತ್ತಾಳೆ ಎಂಬುದನ್ನು ಮೃಣಾಲಿನಿಯ ಪಾತ್ರದ ಮೂಲಕ ಗುರುತಿಸಬಹುದು. ಮೃಣಾಲಿನಿಗೆ ಗಿರಿಯ ಪ್ರತಿಯೊಂದು ಕೆಲಸದ ಅರಿವಿರುತ್ತದೆ. ಆದರೆ ಗಿರಿ ಬಾಬು ಮೃಣಾಲಿನಿಯ ಬಗ್ಗೆ ಯೋಚಿಸುತ್ತಾ ಈ ಹೆಂಗಸಿಗಾಗಿಯೇ ನಾನು ಇಷ್ಟು ವರ್ಷ ಇದನ್ನೆಲ್ಲ ಮಾಡಿದ್ದು. ಈಕೆ ಮೊದಲಿನಿಂದಲೂ ನನ್ನವಳಾಗಬೇಕೆಂದು ಬಯಸಿದವನು ನಾನು. ಆದರೆ ಕೇವಲ ಬಯಸಿದವನಲ್ಲ. ಅವಳು ನನ್ನನ್ನು ತುಂಬ ಪ್ರೀತಿಸಿದವಳು ಆದರೆ ಕೇವಲ ನನ್ನನ್ನು ಪ್ರೀತಿಸಿದವಳಲ್ಲ. ಅವಳನ್ನು ನಾನು ಸಂಪೂರ್ಣವಾಗಿ ಹೊಂದಿದೆ. ಆದರೆ ಫಲ ನನ್ನದಾಗಲಿಲ್ಲ. ಹೆಸರಿಗೆ ಜಗನ್ಮೋಹನರಾವು ಈಕೆಯ ಗಂಡ. ಆದರೆ ವರ್ಷಗಟ್ಟಲೆ ಸಂಸಾರ ಮಾಡಿದವನು ನಾನು ಜಗನ್ಮೋಹನರಾವ್ ಯಾವತ್ತಿಗೂ ನನ್ನನ್ನು ಯಾವುದಕ್ಕೂ ಪ್ರಶ್ನಿಸಲಿಲ್ಲ. ಆತನದೇ ಒಡೆತನ, ಆತನದೇ ಆಸ್ತಿ, ಆತನದೇ ಪತ್ನಿ ಎಲ್ಲವು ನನ್ನವೇ. ಆದರೆ ಆಸ್ತಿಯೊಂದರ ಹೊರತಾಗಿ ಮುಂದೆ ಶರ್ಮಿಳೆ ಮೇಲಿನ ಆಸೆಯಿಂದ ಜಗನ್ಮೋಹನರಾವ್‌ನ ಆಸ್ತಿಯ ಮೇಲೆಯು ಆತನಿಗೆ ಆಸೆ ಹುಟ್ಟಿಕೊಂಡಿತು.

ಇವೆಲ್ಲವು ನನ್ನವು ಆಗಲೆಬೇಕಾದರೆ ಮೊದಲು ಜಗನ್ಮೋಹನರಾವ್‌ನು ಇಲ್ಲದಂತಾಗಬೇಕೆಂದು ನಿರ್ಧರಿಸಿ. ಆತನನ್ನು ಹತ್ಯೆ ಮಾಡಲು ಸಂಚು ರೂಪಿಸಿ ಮೃಣಾಲಿನಿಯ ಎದುರುಗಡೆಯೇ ಆಂಧ್ರ ಮೂಲದ ಚಂಗಳರಾಯುಡುವಿನಿಂದ ಹತ್ಯೆ ಮಾಡಿಸಿ ಅದನ್ನು ಮೃಣಾಲಿನಿ ಹೊತ್ತುಕೊಳ್ಳುವಂತೆ ಪಿಡಿಸುತ್ತಾನೆ. ನಂತರ ಶಿಶಿರಚಂದ್ರ ಆ ಕೊಲೆಯ ಆಪಾದನೆಯನ್ನು ಹೊತ್ತು ಜೈಲು ಪಾಲಾಗುತ್ತಾನೆ. ಮುಂದೆ

ಗಿರಿಬಾಬುವಿನ ಆಸೆ ಮತ್ತೆ ಇಮ್ಮಡಿಗೊಂಡಿತು. ಜಗನ್ಮೋಹನ ಮರಣದ ನಂತರ ಮೃಣಾಲಿನಿ ನನ್ನವಳು. ನಾಳೆ ಅವಳನ್ನು ಮದುವೆಯಾಗಿ ಬಿಟ್ಟರೆ ಈ ಜಗತ್ತು ಅವಳನ್ನು ಜಗನ್ಮೋಹನರಾವ್ ವಿಧವೆ ಅನ್ನುವುದಿಲ್ಲ. ಗಿರಿಬಾಬುವಿನ ಹೆಂಡತಿ ಅನ್ನುತ್ತದೆ. ಸಹಜವಾಗಿಯೇ ಶ್ರಾವಣಿ ನನ್ನ ಮಗಳಾಗುತ್ತಾಳೆ. ಈ ಸಂಸಾರ ನನ್ನದಾಗುತ್ತದೆ. ಇದರ ಯಜಮಾಣಿಕೆ ನನ್ನದಾಗುತ್ತದೆ. ಆದರೆ ಈಗ ಇವ್ಯಾವೂ ಬೇಡ, ಆಸ್ತಿಯೊಂದರ ಒಡೆತನ ಸಿಕ್ಕರೆ ಸಾಕು ಎಂದು ಯೋಚಿಸುತ್ತಾನೆ. ಮನುಷ್ಯನ ಆಸೆಗಳಿಗೆ ಮಿತಿಯೇ ಇಲ್ಲವೆಂಬಂತೆ ಗಿರಿಬಾಬುವಿನ ಮನಸ್ಸಿನಲ್ಲಿ ಒಂದಾದ ನಂತರ ಒಂದು ಆಸೆಗಳು ಹುಟ್ಟಿಕೊಳ್ಳುತ್ತವೆ.

ಆದರೆ ತಂದೆಯ ಮರಣದ ನಂತರ ಶ್ರಾವಣಿ ಏಳು ನೂರು ಕೋಟಿ ಪವರ್ ಟವರ್ಸ್‌ನ ಯಜಮಾನಿಕೆಯನ್ನು ಶ್ರಾವಣಿಯೇ ನೋಡಿಕೊಳ್ಳಲು ಪ್ರಾರಂಭಿಸುತ್ತಾಳೆ. ಪ್ರತಿಯೊಂದು ವ್ಯವಹಾರವನ್ನು ಅಷ್ಟೇ ಎಚ್ಚರಿಕೆಯಿಂದ ನಿಭಾಯಿಸುತ್ತಾ ಚಾನಾಕ್ಷತೆಯಿಂಥ ಚುರುಕು ಬುದ್ಧಿಯಿಂದ ಪ್ರತಿಯೊಂದನ್ನು ತರ್ಕಕ್ಕೆ ಹಚ್ಚದೇ ಒಪ್ಪಿಕೊಳ್ಳುವುದಿಲ್ಲ. ತಂದೆಯ ಹಾದಿಯಲ್ಲಿಯೇ ಮುನ್ನಡೆಸುತ್ತಾಳೆ. ತಾಯಿಗೆ ಎಲ್ಲೊ ಒಂದು ಕಡೆ ಭಯ ಶುರುವಾಗುತ್ತದೆ. ಅಷ್ಟೊಂದು ಆಸ್ತಿಗೆ ವಾರಸುದಾಳ ಒಂದು ಹೆಣ್ಣು ಎಂದು ಗೊತ್ತಾದಾಗ ಏನಾದರೂ ಅನಾಹುತವಾದಿತು ಎಂದು. ಆದರೆ ಗಿರಿ ಅಂಕಲ್‌ನ ಆಲೋಚನೆಯೇ ಬೇರೆಯಾಗಿರುತ್ತದೆ. ಅದು ಯಾರಿಗೂ ತಿಳಿಯದ, ಅರ್ಥವಾಗದ ಒಳಮರ್ಮ. ಪವರ್ ಟವರ್ಸ್‌ನ ಒಡೆತನ ಶ್ರಾವಣಿ ವಹಿಸಿಕೊಂಡಾಗ ಕ್ರೂರಿಯಾದ ಗಿರಿ ಅವಳನ್ನು ಉಪಾಯದಿಂದ ಮುಗಿಸಲು ಸಂಚು ರೂಪಿಸುತ್ತಾನೆ. ಬಲು ಚಾಣಾಕ್ಷ ಬುದ್ಧಿಯ ಶ್ರಾವಣಿಗೆ ಇದು ತಿಳಿಯುತ್ತದೆ. ಆಕೆ ಆ ಒಂದು ದಿನ ಮನೆ ತೊರೆದು ಹೋದವಳು ಮರಳಿ ಮನೆಗೆ ಬರಲೇ ಇಲ್ಲ. ಇದರಿಂದ ಮಾನಸಿಕ ಒತ್ತಡಕ್ಕೆ ಸಿಲುಕಿದ ಗಿರಿ ಶ್ರಾವಣಿ ಎಲ್ಲೇ ಅಲೆಯಲಿ ಎಲ್ಲೇ ಉಳಿದುಕೊಂಡಿರಲಿ ತನ್ನ ತಾಯಿಗೋಸ್ಕರವಾದರೂ ಬಂಗಲೆಗೆ ಬರಲೇಬೇಕು. ಆನಂತರ ಅವಳನ್ನು ಭಗವಂತನೂ ರಕ್ಷಿಸಲಾರ. ಅವಳು ಬಂಗಲೆಯೊಳಕ್ಕೆ ಕಾಲಿಡುವ ತನಕ ಕಾಯಬೇಕು. ಮೃಣಾಲಿನಿಗೆ ತೊಂದರೆ ಕೊಟ್ಟರೆ ತಾನಾಗಿಯೇ ಬಂಗಲೆಗೆ ಬರುತ್ತಾಳೆ ಎಂದು ನಿರ್ಧರಿಸಿ. ಮೃಣಾಲಿ ಮೈ ಉಶಾರಿಲ್ಲ ಅವಳು ಮಗಳು ಬರುವ ದಾರಿ ಕಾಯುತ್ತಿದ್ದಾಳೆ ಎಂದು ಜಾಹಿರಾತು ಕೊಡಿಸಿದ ಅಲ್ಲದೇ ಅವಳಿಗೆ ಇನ್ನಿಲ್ಲದ ಚಿತ್ರಹಿಂಸೆ ಕೊಡಲು ಪ್ರಾರಂಭಿಸಿದ. ಮೃಣಾಲಿನಿಗೆ ಹಸಿವಾಗಿ ರಾತ್ರಿಯ ಊಟಕ್ಕೆಂದು ಏಳುತ್ತಾಳೆ ಅನ್ನಿಸಿದಾಗ ಕೈಯಲ್ಲಿದ್ದ ವಿಸ್ಕಿ ಗ್ಲಾಸು ಕೆಳಗಿಟ್ಟು ಅಡುಗೆ ಮನೆಗೆ ನಡೆದ. ಇಡೀ ಬಂಗಲೆ ನಿರ್ಮಾನುಷವಾಗಿತ್ತು. ಅಡುಗೆಯವರು, ಆಳುಗಳು, ತೋಟದ ಮಾಲಿ–ಈಗೀಗ ಮನೆಯಲ್ಲಿ ಯಾರು ಇರುವುದಿಲ್ಲ. ಅವರವರ ಕೆಲಸ ಮುಗಿಸಿ ಹೊರಟು ಹೋಗಿರುತ್ತಾರೆ. ಅಡುಗೆಯವರು ಮಾಡಿಟ್ಟ ಸಾರಿನ ಪಾತ್ರೆಯ ಮುಚ್ಚಳ ಸರಿಸಿ ಆಗಷ್ಟೇ ಹಾಕಿದ ವಗ್ಗರಣೆ ವಾಸನೆ ಕೋಣೆಯ ತುಂಬ ಪಸರಿಸಿತು. ಆ ಪಾತ್ರೆಯೊಳಕ್ಕೆ ಗಿರಿಬಾಬು ಸರಿಯಾಗಿ ಎಣಿಸಿ ಆರು ಮಾತ್ರೆ ಹಾಕಿದ. ಇನ್ನು ಸ್ವಲ್ಪ

ಹೊತ್ತಿಗೆ ಏಳುತ್ತಾಳೆ ಮೃಣಾಲಿನಿ. ತಿಳಿಸಾರು ತಿನ್ನದೆ ಅವಳ ಊಟ ಮುಗಿಯುವದಿಲ್ಲ. ಬೆಳಗ್ಗೆ ಅವಳ ನೆತ್ತರಿನೊಳಕ್ಕೆ ಸೇರಿಕೊಂಡು ಕರಗಿದ ಮಾತ್ರೆ ಈ ತನಕ ಕೆಲಸ ಮಾಡಿದೆ ಅಂದುಕೊಂಡು ಇನ್ನೂ ಈ ಆರು ಮಾತ್ರೆಯೂ ಸಾರಿನಲ್ಲಿ ಕರಗಿ ರಕ್ತ ಸೇರಿಕೊಂಡು ಬಿಟ್ಟರೆ ನಾಳೆ ಮದ್ಯಾಹ್ನದ ತನಕ ಏಳಲಾರಳು. ಅವಳ ಕಣ್ಣುಗಳಲ್ಲಿನ್ನು ನಿದ್ರೆ ಕೆನೆಗಟ್ಟಿಕೊಂಡಿತ್ತು. ನೇರವಾಗಿ ಅವಳನ್ನು ಡೈನಿಂಗ್ ಟೇಬಲ್ಲಿಗೆ ಕರೆದೊಯ್ದು ಗಿರಿಬಾಬು ತಾನೇ ಕೈಯಾರ ಉಣಬಡಿಸಿದ. ಎರಡು ಸಲ ಕಲೆಸಿಕೊಂಡು ಅನ್ನ ಸಾರು ತಿಂದಳು ಮೃಣಾಲಿನಿ. ಊಟ ಮುಗಿಯುವ ಹೊತ್ತಿಗೆ ಅವಳಿಗೆ ಮೈಯಲ್ಲಿ ಜೋಮು. ತಾನೆ ಕರೆದೊಯ್ದು ಅವಳನ್ನು ಕೆಳಮನೆಯ ಕೋಣೆಯಲ್ಲಿ ಮಲಗಿಸಿದ. ಆವಾಗ ಗಿರಿಬಾಬುವಿನ ಮುಖದಲ್ಲೊಂದು ವಂಚಕ ಸಮಾಧಾನದ ನಗೆ ಬೀರಿ ಹೊರಗಡೆ ಹೋದ.

ತನಗೆ ನಂಬಿಕೆಯಿಂದ ಇದ್ದವನ್ನು ತನಗೆ ಬೇಕಾದಂತೆ ಬಳಸಿಕೊಂಡು ಅವಳು ಪ್ರತಿ ದಿನ ಸತ್ತು ಹುಟ್ಟುವಂತೆ ಶೋಷಣೆ ಮಾಡುತ್ತಾನೆ. ಲೈಂಗಿಕತೆಯಷ್ಟೇ ಅಲ್ಲದೆ ಅವಳು ಮಾನಸಿಕವಾಗಿಯು ಕುಸಿಯುವಂತೆ ನೋಡಿಕೊಳ್ಳುತ್ತಾನೆ. ಜಗನ್ಮೋಹನರಾವ್‌ನ ಕೊಲೆ ಕೋಸಿನಲ್ಲಿ ಶಿಶಿರಚಂದ್ರನನ್ನು ಜೈಲು ಪಾಲು ಮಾಡಿದ ಗಿರಿ ಹೊರಗಡೆ ಇನ್ನೊಂದು ಕೊಲೆಗಾಗಿ ಕಾಯುತ್ತಿದ್ದ. ಈಗ ಆತನಿಗೆ ಬೇಕಾದುದು ಮೃಣಾಲಿನಿಯೊಂದಿಗಿನ ಲೈಂಗಿಕ ಸಂಬಂಧವಲ್ಲ, ಶರ್ಮಿಳೆಯ ಜೊತೆ ಸಂಬಂಧ ಬೆಳೆಸುವುದು ಆಗಿರಲಿಲ್ಲ. ಅದೆಲ್ಲವನ್ನು ಮೃಣಾಲಿನಿಯಲ್ಲಿ ಪಡೆದುಕೊಂಡಿದ್ದ. ಆತ ಶ್ರಾವಣಿ ಒಬ್ಬಳನ್ನು ಮುಗಿಸಿದರೆ ಮೃಣಾಲಿನಿ ಹೇಗೋ ನನ್ನ ಮಾತು ಕೇಳುತ್ತಾಳೆ. ಇಡೀ ಪವರ್ ಟವರ್ಸ್ ಏಳು ನೂರು ಕೋಟಿ ಆಸ್ತಿಗೆ ವಾರಸುದಾರನಾಗುವೆ ಎಂಬ ನಂಬಿಕೆ ಗಿರಿ ಬಾಬುವಿನದಾಗಿತ್ತು. ಆದರೆ ಶಿಶಿರಚಂದ್ರ ಶ್ರಾವಣಿಯ ಮನೆಯಲ್ಲೇ ಇದ್ದುಕೊಂಡು ಅವಳ ತಾಯಿಗೆ ಯಾವುದೇ ರೀತಿ ಗಂಡಾಂತರ ಒದಗದಂತೆ ಗಿರಿಬಾಬುವಿಗೆ ಗೊತ್ತಿಲ್ಲದಂತೆಯೆ ಎಚ್ಚರಿಕೆಯಿಂದ ವ್ಯವಸ್ಥೆ ಮಾಡುತ್ತಿದ್ದ ಆತನೊಂದಿಗೆ ಸೈಕಲ್ ಸುರೇಶ ಕೂಡ ಆತನಿಗೆ ಸಾಥ್ ಕೊಟ್ಟಿದ್ದ. ಇತ್ತ ಶ್ರಾವಣಿ ಪೋಲಿಸ್ ಅಧಿಕಾರಿ ಸಿಂಗ್ ಜೊತೆಗೆ ವ್ಯವಸ್ಥಿತ ಯೋಜನೆಯೊಂದಿಗೆ ಬಂಗಲೆಗೆ ಬಂದಾಗ ಗಿರಿಬಾಬು ಧೈರ್ಯದಿಂದ ಎಲ್ಲವನ್ನು ಎದುರಿಸಲಾರಂಭಿಸಿದಾಗ ಶ್ರಾವಣಿ ಹೀಗೆ ಹೇಳುತ್ತಾಳೆ. ತಿಂಗಳುಗಟ್ಲೆ, ವರ್ಷಗಟ್ಲೆ, ದಶಕಗಟ್ಲೆ ಏನೂ ಮಾಡದೆ ಅಪ್ಪನ ಆಸ್ತಿಯನ್ನು, ಅಪ್ಪನ ಮನೆಯನ್ನು, ಹೆಂಡತಿಯನ್ನು, ಸಂಸಾರವನ್ನು ಒಂದಿಷ್ಟು ಜವಾಬ್ದಾರಿಯಿಲ್ಲದೆ ಅನುಭವಿಸುತ್ತಾ ಬಂದು ಬಿಟ್ರಿ ಎಂದು ಹಲಬುತ್ತಾಳೆ. ಆದರೆ ಇದ್ಯಾವುದನ್ನು ಲೆಕ್ಕಿಸದೇ ಇದ್ದ ಗಿರಿ ನಂತರ ಮೃಣಾಲಿನಿಗೆ ನಿದ್ರೆಯಿಂದ ಎಚ್ಚರವಾಗುತ್ತದೆ. ಆ ಸಂದರ್ಭದಲ್ಲಿ ಅವಳು ಗಿರಿಬಾಬುವಿನ ಕಡೆಯಾಗಿ ಮಾತನಾಡುತ್ತಾಳೆ ಎಂದು ನಿರೀಕ್ಷಿಸಿದ ಆದರೆ ಅವಳು ಎಲ್ಲ ಆಪಾದನೆಗಳನ್ನು, ತನ್ನ ಮೇಲಾದ ಲೈಂಗಿಕ ಶೋಷಣೆ ಮತ್ತು ಮಾನಸಿಕ ಶೋಷಣೆಯನ್ನು, ತನ್ನ ಗಂಡ ಜಗನ್ಮೋಹನರಾವ್‌ನನ್ನು ಕೊಲೆ ಮಾಡಿದ್ದು ಗಿರಿಬಾಬುವೇ ಎಂದು ಹೇಳಿದಾಗ ಗಿರಿಬಾಬು ಕಂಗಾಲಾಗಿ ಹೋಗಿದ್ದ.

ಮೃಣಾಲಿನಿಯ ಜವಾಬ್‌ನಿಂದಾಗಿ ಗಿರಿಬಾಬು ಜೈಲು ಪಾಲಾದ. ನಂತರ ಜೈಲಿನಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿಸಿದಾಗ ಎಚ್.ಐ.ವಿ. ಪಾಜಿಟಿವ್ ಎಂದು ಗೊತ್ತಾದಾಗ ಜೈಲಿನಲ್ಲೆ ನೇಣು ಹಾಕಿಕೊಂಡು ಮರಣ ಹೊಂದಿದ.

ಅಧ್ಯಾಯ ೫

ಶೋಷಿತ–ಪೋಷಿತ ಸಂಬಂಧ

ಅಧ್ಯಾಯ ೫

ಶೋಷಿತ ಮತ್ತು ಪೋಷಿತ ಸಂಬಂಧ

ನಾವು ಬದುಕುತ್ತಿರುವ ಸಮಾಜದಲ್ಲಿ ಮೇಲ್ವರ್ಗ, ಕೆಳವರ್ಗ ಎಂಬ ವ್ಯವಸ್ಥೆ ಪ್ರಚಲಿತವಿರುವುದು ಕಂಡುಬರುತ್ತದೆ. ಮೇಲ್ವರ್ಗದವರು ಕೆಳವರ್ಗದವರಿಗೆ ಶೋಷಣೆ ಮಾಡುತ್ತಾ ಬಂದಿರುವುದನ್ನು ಪ್ರಾಚೀನ ಕಾಲದಿಂದ ಇವತ್ತಿನವರೆಗೂ ಗಮನಿಸಬಹುದು. ಅಲ್ಲದೆ ಪ್ರಮುಖ ಸಾಹಿತ್ಯ ಕೃತಿಗಳಲ್ಲಿಯೂ ದಾಖಲಾಗಿವೆ. ಆದರೆ ಶೋಷಣೆ ಎನ್ನುವುದು ಏಕಮುಖವಾಗಿರುವುದಿಲ್ಲ. ಅದು ಭಿನ್ನ ವಿಭಿನ್ನ ಸ್ವರೂಪದಲ್ಲಿರುತ್ತದೆ. ಅಲ್ಲದೆ ಕಾದಂಬರಿ ಪ್ರಕಾರ ಸಾಹಿತ್ಯದಲ್ಲಿ ಶೋಷಣೆಯ ವಿವಿಧ ಮುಖಗಳನ್ನು ಗುರುತಿಸಬಹುದಲ್ಲದೆ. ಶೋಷಿತ ಸಮುದಾಯದಲ್ಲಿಯೆ ಪೋಷಿತ ಮನಸ್ಕರು ಇರುತ್ತಾರೆ ಎಂಬುದನ್ನು ರವಿಯವರು 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿ ಪಾತ್ರಗಳಿಂದ ಗುರುತಿಸಬಹುದಾಗಿದೆ. ಬೆಂಗಳೂರಿನ ವೇಶ್ಯಾಗೃಹದಲ್ಲಿ ಲಕ್ಷ್ಮೀದೇವಿ ಎಂಬ ವೇಶ್ಯೆ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳನ್ನು ಇಟ್ಟುಕೊಂಡು ತನ್ನ ವೃತ್ತಿಯನ್ನು ನಡೆಸುತ್ತಿರುತ್ತಾಳೆ. ಒಂದು ಹೆಣ್ಣು ಮತ್ತೊಂದು ಹೆಣ್ಣನನ್ನು ಲೈಂಗಿಕ ಕಾರ್ಯಕರ್ತೆಯನ್ನಾಗಿ ದೇಹ ಮಾರಿಕೊಂಡು ದುಡ್ಡು ಸಂಪಾದಿಸುವ ದಂಧೆಯಲ್ಲಿ ನಿರತಳಾಗಿರುತ್ತಾಳೆ. ಹೆಣ್ಣು ಅತಿ ಮುಖ್ಯವಾಗಿ ಕಾಪಾಡಿಕೊಳ್ಳಬೇಕಾದುದು ಶೀಲ. ಅದನ್ನೇ ಮಾರಿಕೊಳ್ಳುವಂತೆ ಮಾರಿಕೊಂಡು ಪುರುಷರಿಂದ ದುಡ್ಡು ಸಂಪಾದಿಸುತ್ತಿರುತ್ತಾಳೆ. ಶೋಷಣೆ ಎನ್ನುವುದು ಸ್ತ್ರೀಯರ ಲೈಂಗಿಕತೆಯ ಮೇಲೆ ಹೆಚ್ಚು ಕೇಂದ್ರಿಕೃತವಾಗಿರುವುದು ತಿಳಿದುಬರುತ್ತದೆ. ಆದ್ದರಿಂದ ಲಕ್ಷ್ಮೀದೇವಿಯಂತಹ ಪಾತ್ರ ಸೃಷ್ಟಿಸಿ ಶೋಷಣೆಯ ಸ್ವರೂಪವನ್ನು ಮನದಟ್ಟು ಮಾಡಿದ್ದಾರೆ. ಆದರೆ ಈ ಶೋಷಣೆ ಕೊನೆಯಲ್ಲ. ಅದಕ್ಕೂ ಮೀರಿದ ಒಂದು ಉಜ್ವಲವಾದ ಭವಿಷ್ಯ ನಮ್ಮ ಮುಂದಿನ ಭವಿಷ್ಯದಲ್ಲಿದೆ ಎಂಬುದನ್ನು ರವಿಯವರ ಕಾದಂಬರಿಯಲ್ಲಿ ಗುರುತಿಸಬಹುದು. ಅದೊಂದು ರಾತ್ರಿ ಗೆಳೆಯರ ಬಲವಂತಕ್ಕೆ ಬಿದ್ದು ಟ್ಯಾನರಿ ರಸ್ತೆಯ ಲಕ್ಷ್ಮೀದೇವಿಯ ಸುಖದ ಮನೆಗೆ ಜಗನ್ಮೋಹನರಾವ್ ಬಂದಿದ್ದ. ವರಾಂಡದ ಬೆಂಚಿನ ಮೇಲೆ ತೊಯ್ದ ಗುಬ್ಬಿಯಂತೆ ಕುಳಿತ ಆಕೃತಿಯೊಂದಿತು. ಅಲ್ಲಿದ್ದ ಎಲ್ಲ ಹುಡುಗಿಯರು ಆತನನ್ನು ಕಂಡು ಗೇಲಿ ಮಾಡುತ್ತಿದ್ದರೆ, ಆತನ ಕಣ್ಣುಗಳು ಒಳಕೋಣೆಯಲ್ಲಿ ಮುದುಡಿ ಕುಳಿತ ಹದಿನಾಲ್ಕು ವರ್ಷದ ಹುಡುಗಿಯೊಬ್ಬಳನ್ನು ಕಂಡು ಸುಮ್ಮನೆ ದಿಟ್ಟಿಸುತ್ತಿದ್ದವು. ಇದನ್ನು ಗಮನಿಸಿದ ಲಕ್ಷ್ಮೀದೇವಿ ಈ ಹುಡುಗಿ ನಿನ್ನ ಸುಖಕ್ಕೆ ಬೇಕಾ ಅಂತಾ ಕೇಳಿದ್ದಳು.

ಖರೀದಿಗಲ್ಲ ಅವಳು ನಂಗೇ ನಂಗೇ ಬೇಕು ಅಂದವನೇ ಎದ್ದು ಹೋಗಿದ್ದ ಹಿಂತಿರುಗಿದವನ ಕಿಸೆಯ ತುಂಬಾ ನೋಟು ಆತ ಅವತ್ತಿನ ತನಕ ಉಳಿಸಿಟ್ಟ ಹಣವನ್ನೆಲ್ಲ ಸುರಿದು ಆ ಹದಿನಾಲ್ಕರ ಹುಡುಗಿಯನ್ನು ಲಕ್ಷ್ಮೀದೇವಿಯ ಸುಖದ

ಮನೆಯಿಂದ ಬಿಡಿಸಿಕೊಂಡು ಹೊರಬಂದ. ಟ್ಯಾನರಿ ರಸ್ತೆಯ ಗುಂಟ ಮಾತನಾಡುತ್ತ ನಡೆದಾಗ ಆ ಹುಡುಗಿಗೆ ಇಂಗ್ಲಿಷ್ ಬರುದನ್ನು ನೋಡಿ ತುಂಬಾ ಸಂತೋಷ ಪಟ್ಟು, ಅವಳು ಬಿಟ್ಟ ಶಾಲೆಗೆ ಮತ್ತೆ ಸೇರಿಸಿ, ಪುಸ್ತಕ ತಂದುಕೊಟ್ಟು ನೀನು ಚೆನ್ನಾಗಿ ಓದು ಜಬೀನ್. ನೀನು ಓದಿ ದೊಡ್ಡವಳಾಗಬೇಕು ಜಬೀನ್. ದೊಟ್ಟವಳಾಗಿ ನನಗೆ ಆಸರೆಯಾಗಬೇಕು ಜಬೀನ್. ನಂತರ ಆತನ ಬಾಯಲ್ಲಿ ಯಾವಾಗ ನೋಡಿದರೂ ಒಂದೇ ಮಂತ್ರ. ಜಬೀನ್, ಜಬೀನ್, ಜಬೀನ್! ತಾಯಿ ಸತ್ತ ಹುಡುಗಿ. ಅವರಪ್ಪ ಲಕ್ಷ್ಮೀದೇವಿಯ ಮನೆಗೆ ಮಾರಿ ಹೋಗಿದ್ದ. ಆದರೆ ಜಗನ್ಮೋಹನರಾವ್ ಆಕೆಯನ್ನು ಚೆನ್ನಾಗಿ ಓದಿಸಿ ಪೋಷಿಸುತ್ತಾ ಏಳು ನೂರು ಕೋಟಿ ಆಸ್ತಿಯ ಪವರ್ ಟವರ್ಸ್‌ನ ಜನರಲ್ ಮೇನೇಜರ್ ಶರ್ಮಿಳೆಯನ್ನಾಗಿ ಪರಿವರ್ತಿಸಿದ. ಆಪತ್ತ್ ಕಾಲದ ಬಾಂಧವನಾಗಿ ಬಂದ ಜಗನ್ಮೋಹನರಾವ್‌ನ ಪೋಷಣೆಯಿಂದ ಒಂದು ಹೆಣ್ಣು ಜೀವ ಅನುಭವಿಸುವ ನೋವಿನಿಂದ, ಆ ಒಂದು ನರಕದ ಸನ್ನಿವೇಶದಿಂದ ಬಿಡಿಸಿಕೊಂಡು ಒಂದು ಆಕೆಗೊಂದು ಭವಿಷ್ಯ ರೂಪಿಸಿದ. ಸ್ತ್ರೀ ಪಾತ್ರಗಳನ್ನು ತುಂಬಾ ವಿಭಿನ್ನವಾಗಿ ಚಿತ್ರಿಸಿರುವ ರವಿಯವರು ತಮ್ಮ ಕಾಬಂಬರಿಯಾದ 'ನೀ ಹಿಂಗ ನೋಡಬ್ಯಾಡ ನನ್ನ'ದಲ್ಲಿಯ ಅಷ್ಟೇ ಜಾಗರೂಕತೆಯಿಂದ ಪಾತ್ರ ಸೃಷ್ಟಿಸಿದ್ದಾರೆ. 'ಹೆಣ್ಣು ಅಬಲೆಯಲ್ಲ ಸಬಲೆ' ಅವಳಿಗೆ ಒಂದಿಷ್ಟು ಸಹಾಯ ಮತ್ತು ಭದ್ರತೆಯನ್ನು ಒದಗಿಸಿದರೆ ಅವಳು ಯಾವುದೇ ಕೆಲಸ ಕಾರ್ಯದಲ್ಲಿ ಹಿಂದೆ ಸರಿಯುವುದಿಲ್ಲ, ಅವಳ ಸಾಧನೆಗೆ ಸಹಕಾರದ ಅವಶ್ಯಕತೆಯಿದೆ ಎಂಬುದನ್ನು ಶರ್ಮಿಳೆಯ ಪಾತ್ರದ ಮೂಲಕ ಸಂದೇಶ ಕೊಟ್ಟಿದ್ದಾರೆ. ಒಂದು ವೇಳೆ ಆ ಚಿಕ್ಕ ಹುಡುಗಿಯನ್ನು ಆ ನರಕ ಮನೆಯಲ್ಲೇ ಬಿಟ್ಟು ಬಂದಿದ್ದರೆ ಅವಳ ಜೀವನ ಯಾವ ಹಂತದಲ್ಲಿ ರೂಪಗೊಳ್ಳುತ್ತಿತ್ತು? ಆದರೆ ರವಿಯವರು ಆ ಪಾತ್ರಕ್ಕೆ ಪೋಷಣೆಯ ಪಾತ್ರ ಸೃಷ್ಟಿಸಿ ಸ್ತ್ರೀ ಸಾಮಾಜಿಕವಾಗಿ, ಸ್ವತಂತ್ರ್ಯವಾಗಿ ಬದುಕಲು ಅನುವು ಮಾಡಿಕೊಟು ಅವಳಿಗೂ ಸಮಾಜದಲ್ಲಿ ಸ್ಥಾನಮಾನ, ಗೌರವ ದೊರಕುವಂತೆ ಮಾಡಿದ್ದಾರೆ. ಇದರಿಂದ ರವಿಯವರಿಗಿರುವ ಸ್ತ್ರೀಪರ ಕಾಳಜಿಯನ್ನು ಗುರುತಿಸಬಹುದು.

ಲೈಂಗಿಕತೆಯು ಮನುಷ್ಯ ಪ್ರವೃತ್ತಿಯ ಸಹಜ ಅಭಿವ್ಯಕ್ತಿ. ಇದು ಎಲ್ಲರಲ್ಲೂ ಇರುವಂತಹದು. ಆದರೆ ಅಭಿವ್ಯಕ್ತಿಯು ಭಿನ್ನವಾಗಿರುತ್ತದೆ. ಯಾಕೆಂದರೆ ಕಾಮವು ಶರೀರದ ಭಿನ್ನ ಭಿನ್ನ ರೂಪಗಳಲ್ಲಿ ಅಡಗಿಕೊಂಡಿರುವ ಸೌಂದರ್ಯ ಮತ್ತು ಆನಂದವಾಗಿದೆ. ಅದು ಕಾಲಕ್ಕಣುಗುಣವಾಗಿ ಉದ್ಭವವಾಗುತ್ತದೆ, ಆದರೆ ಲೈಂಗಿಕ ಕ್ರಿಯೆ ಕೇವಲ ದೈಹಿಕವಾಗಿದ್ದರೆ, ಅದರ ಸಂಬಂಧ ಗಟ್ಟಿಯಾಗಿರುವುದಿಲ್ಲ. ಹೆಣ್ಣಿಗೆ ಸಂತಾನಭಾಗ್ಯ ಪವಿತ್ರವಾದದು. ಹೆಣ್ಣಾದವಳು ತನ್ನ ಜೀವನದಲ್ಲಿ ಅನುಭವಿಸುವ ಆತ್ಮಾನಂದದ ಕ್ಷಣವೆಂದರೆ ತಾಯಿಯಾಗುವ ಹೊತ್ತು. ಹೆಣ್ಣಿನ ಜನ್ಮ ಸಾರ್ಥಕವಾಗುವುದೇ ತಾಯ್ತನದಲ್ಲಿ. ತಾಯಿಯಾಗದ ಹೊರತು ಯಾವ ಸ್ತ್ರೀಗೂ ನೆಮ್ಮದಿ ಸಿಗುವುದಿಲ್ಲ ತಾಯಿಯಾಗದ ಹೆಣ್ಣಿನ ಜೀವನ ನಿರರ್ಥಕವಾದುದು ಎಂಬ ಭಾವನೆ ಭಾರತೀಯ ಸಂಸ್ಕೃತಿಯಲ್ಲಿದೆ. ಆದ್ದರಿಂದ ವೇಶ್ಯೆಯರಲ್ಲಿಯೂ ತಾಯ್ತನದ

ಹಂಬಲವಿರುತ್ತದೆ ಎಂಬುದನ್ನು 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಪ್ರಶಾಂತಿನಿ ಪಾತ್ರದ ಮೂಲಕ ಗುರುತಿಸಬಹುದು.

'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಪೋಷಿತ ಪಾತ್ರವನ್ನೆ ಹೆಚ್ಚಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಹೆಣ್ಣು ಮಕ್ಕಳನ್ನು ಮಾರಾಟ ಮಾಡಿ ವೇಶ್ಯಾವೃತ್ತಿಗೆ ಅಡಿಮಾಡಿರುವುದನ್ನು ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ, ಟಿ.ವಿ. ಮಾಧ್ಯಮಗಳಲ್ಲಿ ಗಮನಿಸುತ್ತೆವೆ. ಅದೇ ರೀತಿ ಈ ಕಾದಂಬರಿಯಲ್ಲಿ ಪ್ರಶಾಂತಿನಿ ಹೂ ಅಂಗಡಿ ಇಡಲು ಸಹಾಯ ಹಸ್ತಕ್ಕಾಗಿ ವಿಶ್ವಂ ಇನ್ಸ್‌ಪೆಕ್ಟರ್ ಹತ್ತಿರ ಹೋದಾಗಾ ಆತ ಹೇಳಿದ್ದು ಹೀಗೆ. ಡಬಲ್ ರೋಡಿನ ಉದ್ದಕ್ಕೂ ಅಂಗಡಿಗಳಿವೆ. ದೊಡ್ಡ ದೊಡ್ಡ ಫರ್ಮ್‌ಗಳೇ ಇವೆ. ಮಲ್ಟಿ ನಾಷ್ಯನಲ್ ಕಂಪನಿಗಳ ಕಚೇರಿಗಳಿವೆ. ತಾನು ಹೇಳಿದರೆ ಯಾವ ಕಟ್ಟಡದ ಮೆಟ್ಟಿಲ ಮೇಲೆ ಇವಳು ಹೂವಿನ ಬುಟ್ಟಿ ಇಟ್ಟುಕೊಂಡರೂ ಅವರು ಬೇಡವೆನ್ನಲಾರರು.

ಆದರೆ ಮೆಟ್ಟಿಲ ಮೇಲೆ ಇಟ್ಟುಕೊಂಡು ಮಾರೋದು ಬೇಡ. ಒಂದು ಚಿಕ್ಕ ಅಂಗಡೀನೇ ಕೋಡಸ್ತಿನಿ. ಅಡ್ವಾನ್ಸ ಬೇಡ. ನಿಮ್ಮ ಕೈಲಾದಷ್ಟು ಬಾಡಿಗೆ ಕೊಡಿ. ಅದು ನನ್ನ ಸ್ನೇಹಿತರದೆ ಇದೆ. ನೀವು ದುಡೀಬೇಕು. ಸಾವಿರಾರು ಜನಕ್ಕೆ ಆದರ್ಶ ಆಗಬೇಕು. ಇದೆಲ್ಲ ಮಾಡ್ತಿರೋದಕ್ಕೆ ಪ್ರತಿಯಾಗಿ ನಾನು ಒಂದು ಕೇಳ್ತೀನಿ. ನೀವು ಇಲ್ಲ ಅನ್ನಬಾರ್ದು." ಮಾತು ನಿಲ್ಲಿಸಿದ ವಿಶ್ವಂ.

"ಏನು? ಪ್ರಶಾಂತಿನಿಯ ದನಿಯಲ್ಲಿ ಅಳುಕಿತ್ತು.

"ನಿನ್ನೆ ರಾತ್ರಿ ನಾನು ರೇಡ್ ಮಾಡಿದ ಮನೆಯೊಂದರಲ್ಲಿ ಎಸೆಸೆಲ್ಸಿ ಓದಿರೊ ಚಿಕ್ಕ ವಯಸ್ಸಿನ ಹುಡುಗಿಯೊಬ್ಬಳು ಸಿಕ್ಕುಬಿದ್ದಿದ್ದಾಳೆ. ಯಾರೋ ಮಾರಿ ಹೋದ ಹುಡುಗಿ. ಪ್ರಕರಣ ದಾಖಲಿಸಿ ಜೈಲಿಗೆ ಕಳಿಸೊಕೆ ನಂಗೆ ಮನಸಾಗಲಿಲ್ಲ. ಅವಳಿಗೂ ಆ ವೃತ್ತಿ ಬೇಡಾ ಅನ್ಸಿದೆ. ಅವಳಿಗೊಂದು ಕೆಲಸ ಕೊಡಿ. ಎರಡು ಹೊತ್ತಿನ ಊಟಕ್ಕೂ ಆಗುವಂತಹದ್ದು?" ಎಂದು ವಿಶ್ವಂ ಮಾತು ಮುಂದಿಟ್ಟಿದ್ದ. ಪ್ರಶಾಂತಿನಿಯು ಆ ವೃತ್ತಿಯಿಂದಲೆ ಹೊರ ಬಂದು ಹೊಸ ಬದುಕು ಪ್ರಾರಂಭಿಸಿದ್ದಳು.

ಆದ್ದರಿಂದ ಆ ವೃತ್ತಿಯ ನೋವು-ನಲಿವುಗಳ ತಿಳುವಳಿಕೆ ಇತ್ತು. ನನ್ನಂತೆಯೇ ಆ ಹುಡುಗಿಗೆ ಒಂದು ಬದುಕು ರೂಪಿಸಿಕೊಡಬೇಕೆಂದು ನಿರ್ಧರಿಸಿ ವಿಶ್ವಂ ಮಾತು ಒಪ್ಪಿಕೊಂಡು ಆ ಹುಡುಗಿಗೆ ಡೇಲಿಯಾ ಎಂದು ಹೆಸರಿಟ್ಟಳು. ಹೊಸ ಹೆಸರಿನೊಂದಿಗೆ ಹೊಸ ಪ್ರಪಂಚ, ಹೊಸ ಬದುಕು ಎಂಬಂತೆ ನಾನಾ ತೋಟಗಳನ್ನು ತಿರುಗಿದ ಪ್ರಶಾಂತಿನಿ ರಜನೀಗಂಧ, ಗ್ಲಾಡಿಯೋಸ್, ಸ್ಟಾರ್ ಡೈಜಿ, ಲಿಲ್ಲಿ, ಜರ್ಬರಾ, ಕಾರ್ನೆಶಿಯನ್, ಗೋಲ್ಡನ್ ಫ್ಲವರ್, ಬರ್ಡ ಆಫ್ ಪ್ಯಾರಾಡೈಸ್. ಹೀಗೆ ಎಲ್ಲ ಜಾತಿಯ ಹೂಗಳನ್ನು ತಂದಿಟಟ್ಟಳು. ಹೊಸ ಹುಡುಗಿ ಡೇಲಿಯಾಗೆ ಚಂದದ ಬಟ್ಟೆ ಕೊಡಿಸಿದಳು. ತನ್ನ ಮಗಳಂತೆ ಪೋಷಿಸಿದಳು. ಅನಾತ ಹೆಣ್ಣು ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ವೇಶ್ಯಾವೃತ್ತಿಗೆ ತಳ್ಳಿದಾಗ ಆ ಮಗುವಿನ ಮಾನಸಿಕ ಸ್ಥಿತಿ ಬದಲಾಗಿ

ಅದು ಆ ಪರಿಸರಕ್ಕೆ ಹೊಂದಿಕೊಂಡು ಬೆಳೆಯುತ್ತದೆ. ಮುಂದೆ ಅದಕ್ಕೆ ಹೊರಗಿನ ಪ್ರಪಂಚದ ಅರಿವೆ ಇಲ್ಲದಂತಾಗಿತ್ತದೆ. ಆದರೆ ರವಿಯವರು ತಮ್ಮ ಕಾದಂಬರಿ ಪಾತ್ರಗಳಲ್ಲಿ ಆ ಹೆಣ್ಣು ಮಕ್ಕಳಿಗೂ ಜೀವತುಂಬಿ ಪೋಷಣೆಯಿಂದ ಪ್ರಪಂಚ ನೋಡುವ ಭಾಗ್ಯ ಒದಗಿಸಿ ಸ್ತ್ರೀ ಪ್ರಾಪಂಚಿಕ ಲೋಕವನ್ನು ಅನಾವರಣಗೊಳಿಸಿದ್ದಾರೆ.

ಸಾಮಾನ್ಯವಾಗಿ ವೇಶ್ಯೆಯರಲ್ಲಿ ಕೆಲವೊಂದು ಲಕ್ಷಣಗಳನ್ನು ಗುರುತಿಸಬಹುದು. ಕಣ್ಣಲ್ಲಿ ಒಬ್ಬನನ್ನು ಕರೆಯವುದು, ಕೈಯಿಂದ ಬೇರೊಬ್ಬರನ್ನು ನೇವರಿಸುವುದು, ಬಾಯಿಂದ ಮತ್ತೊಬ್ಬನನ್ನು ಸುಖಪಡಿಸುವುದು. ಇಂತವರ ಈ ವೃತ್ತಿಯ ಮುಖ್ಯ ಉದ್ದೇಶ ಹಣ ಸಂಪಾದನೆ ಎಂದು ಬಲವಾಗಿ ನಂಬಿರುತ್ತಾರೆ. ಬಾಡಿಗೆಗೆ ಶರೀರವನ್ನು ಮಾರುವುದು, ಶರೀರವನ್ನು ಲಾಭಕ್ಕಾಗಿ ಉಪಯೋಗಿಸಿಕೊಳ್ಳುವುದು. ಇದು ಅವರ ದಿನನಿತ್ಯದ ರೂಢಿಯಾಗಿರುತ್ತದೆ. ಇಂತಹ ಕೀಳುಮಟ್ಟದ ವೇಶ್ಯೆಯರನ್ನು ಕುರಿತು ರವಿಯವರು ಅಷ್ಟೊಂದು ಅಶ್ಲೀಲವಾಗಿ ತಮ್ಮ ಕಾದಂಬರಿ 'ಹೇಳಿ ಹೋಗು ಕಾರಣ', 'ನೀ ಹಿಂಗ ನೋಡಬ್ಯಾಡ ನನ್ನ'ದಲ್ಲಿ ಚಿತ್ರಿಸಿಲ್ಲ. ಬದಲಾಗಿ ಸುಧಾರಣೆಯ ಪರಿಧಿಯಲ್ಲಿ ವೇಶ್ಯೆಯರನ್ನು ಅನಾವರಣಗೊಳಿಸಿದ್ದಾರೆ. 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ವೇಶ್ಯೆಯರ ಮನೆಗಳಲ್ಲಿ ಒಬ್ಬ ಗಂಡಸಿನ ಆಗಮನ ಮತ್ತು ನಿರ್ಗಮನಗಳಿಗೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಬರೋ ಪ್ರತಿ ಗಂಡಸು ಹಣ ತರ್ತಾನೆ. ಅವನು ಹೊರಟು ಹೋಗುವಾಗ ಯಾರಿಗೂ ನೋವಾಗುವುದಿಲ್ಲ. ಏಕೆಂದರೆ ಬಾಗಿಲಲ್ಲಿ ಮತ್ತೊಬ್ಬ ಗಂಡಸು ನಿಂತಿರ್ತಾನೆ. ಇವನು ಹೋದ್ರೆ ಇನ್ನೊಂದಿಷ್ಟು ದುಡ್ಡು ಬರುತ್ತೆ. ಹೋಗದಿದ್ರೆ ಇರೋ ದುಡ್ಡೇನೂ ಜಾಸ್ತಿಯಾಗಲ್ಲ. ವೇಶ್ಯಾ ಗೃಹಗಳಲ್ಲಿ ಗಂಡಸರು ಬಂದು ಹೋಗುವ ಬಗ್ಗೆ ಬೇರೇನೇ ತರಹದ ಲೆಕ್ಕಾಚಾರಗಳಿವೆ. ಗಂಡಸು ಬರೋ ತನಕ ಬರಲಿ ಅಂತಾ ಕಾಯ್ತಾ ಇರ್ತಾರೆ. ಬಂದ ಮರುಘಳಿಗೆಯಿಂದಲೇ, ಇವನು ಬೇಗ ಹೋಗಿ ಮತ್ತೊಬ್ಬ ಗಂಡಸು ಬರಲಿ ಅಂತಾ ಬಯಸೋಕೆ ಶುರು ಮಾಡ್ತಾರೆ. ಇಲ್ಲಿ ದುಡ್ಡು ಸಂಪಾದನೆ ಇರುತ್ತದೆ. ಆದರೆ ಶೃಂಗಾರ ಚೇಷ್ಟೆಗಳು, ಅಶ್ಲೀಲ ಸನ್ನಿವೇಶಗಳನ್ನು ಚಿತ್ರಿಸದಿರುವುದು ಕಂಡುಬರುತ್ತದೆ.

ಆದರೆ ಕಾದಂಬರಿಗಳಲ್ಲಿ ವೇಶ್ಯಾವೃತ್ತಿಯಿಂದ ಸ್ತ್ರೀಯರ ಮೇಲಾಗುವ ಲೈಂಗಿಕ ಶೋಷಣೆಯನ್ನು ಎಳೆಯೆಳೆಯಾಗಿ ಚಿತ್ರಿಸಿದ್ದಾರೆ. ಸುಂದರವಾದ ಹುಡುಗಿ. ಅಷ್ಟೇ ಚಂದದ ಹೆಸರು. ಜಲಪಾತದಂತ ಜಡೆ. ಮಿನುಗು ಮಿನುಗು ಕಣ್ಣು. ಕಣ್ಣಂಚಲ್ಲಿ ತಣ್ಣಗಿನ ಕನಸು. ಇಡೀ ಮನೆಯಲ್ಲಿ ಪ್ರಶಾಂತಿನಿಯದೇ ಕಲರವ. ಅಪ್ಪ ರೈಲ್ವೆ ಇಂಜಿನ್ ಡ್ರೈವರು. ಅಮ್ಮ ಪುಟ್ಟ ಶಾಲೆ ಇಟ್ಟಿದ್ದಳು. ಎಂಥ ಚೆಂದ ಇಂಗ್ಲೀಷು ಬರುತ್ತಿತ್ತು ಇವಳಿಗೆ. ಬಿಳಿ ಬಟ್ಟೆಂದರೆ ಪಂಚಪ್ರಾಣ. ಬಿಳೀ ಲಂಗ, ಬಿಳೀ ಕುಪ್ಪಸ, ಬಿಳೀ ದಾವಣಿ, ಬಿಳೀ ಬೆನ್ನು, ಅದರ ಮೇಲೆ ಕಡುಗಪ್ಪು ಜಲಪಾತದಂತಹ ಜಡೆ. ಅವಳು ಕಾಲೇಜಿಗೆ ಹೊರಟು ನಿಂತರೆ ಅಮ್ಮ ಎಲ್ಲಿದ್ದರೂ ಓಡಿ ಬಂದು ಕತ್ತಲಾಗೋದರೊಳಗಾಗಿ ಮನೆಗೆ ತಲುಪಿಕೊಂಡು ಬಿಡಮ್ಮಾ" ಅನ್ನುತ್ತಿದ್ದಳು.

ಆದರೆ ಅವಳು ಮನೆ ತಲುಪಿಕೊಳ್ಳಲಿಲ್ಲ. ಬದುಕು ಕತ್ತಲಾಗಿ ಹೋಯಿತು. ವೇಶ್ಯಾವೃತ್ತಿಗೆ ಆಹುತಿಯಾದಳು. ಒಮ್ಮೆ ವೇಶ್ಯೆ ಅನ್ನಿಸಿಕೊಂಡ ಸ್ತ್ರೀಯು ಸಮಾಜದಲ್ಲಿ ಮತ್ತೆಂದು ಮನುಷ್ಯಳೆಂದು ಬದುಕಲಾರಳು ಎಂಬುದನ್ನು ರವಿಯವರು ತಿರಸ್ಕರಿಸಿದ್ದಾರೆ. ವೇಶ್ಯಗೂ ಸಮಾಜದಲ್ಲಿ ಬದುಕಲು ಹಕ್ಕಿದೆ, ಅವಳು ಯಾವುದೇ ಉದ್ಯೋಗ ನಡೆಸಿಕೊಂಡು ಸ್ವಂತದೊಂದು ಜೀವನ ನಡೆಸಲು ಅರ್ಹಳು ಎಂಬುದನ್ನು ಮನಗಾಣಿಸಿದ್ದಾರೆ. ಆದರೆ ವೇಶ್ಯಾವೃತ್ತಿಯಲ್ಲಿ ಅನುಭವಿಸಿದ ಶೋಷಣೆ ಮರೆಯಲು ಸಾದ್ಯವೇ? ಅದು ಜೀವನ ಪರ್ಯಂತ ಜ್ಞಾಪಕದಲ್ಲಿರುತ್ತದೆ. ಅದರಿಂದ ಮಕ್ಕಳ ಮೇಲಾಗುವ ಪರಿಣಾಮವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ವೇಶ್ಯೆಯ ಮಗನ ಡೈರಿಯ ನೋಟವನ್ನು ಈ ರೀತಿ ನೋಡಬಹುದು. ಮುನ್ನೂರ ಅರವತ್ತೈದು ಪುಟ್ಟ ಪುಟ್ಟ ಹಾಳೆಗಳಿದ್ದ ಆ ಡೈರಿಯಲ್ಲಿ ಅಮ್ಮನ ಚಿತ್ರವಿತ್ತು. ಆಕೆಯ ಕಣ್ಣೀರಿದ್ದವು. ಶಿಶಿರ ಆಕೆಯ ಭಯಂಕರ ವ್ರಣಗಳನ್ನು ನೋಡಿದ್ದ. ಅವುಗಳ ನೋವಿಗೆ ಅವಳು ಮಾಡುತ್ತಿದ್ದ ಚೀತ್ಕಾರಗಳನ್ನೆಲ್ಲಾ ಹಿಡಿದಿಟ್ಟಿದ್ದ. ಇದೆಲ್ಲ ಯಾವತ್ತೋ ಬರೆದಿಟ್ಟ ಬರವಣಿಗೆ. ಆ ಚಿಕ್ಕ ವಯಸ್ಸಿನಲ್ಲಿ ತಾನಿನ್ನು ತನ್ನದೇ ದೇಹವನ್ನು ಸರಿಯಾಗಿ ನೋಡಿಕೊಂಡಿರಲಿಲ್ಲ. ಶಿಶಿರಚಂದ್ರ ಪ್ರತಿನಿತ್ಯ ನಗ್ನ ದೇಹಗಳನ್ನು ನೋಡಬಾರದ ಸ್ಥಿತಿಯಲ್ಲಿ ನೋಡಿದ್ದ. ಆ ಪೈಕಿ ಅಮ್ಮನದೂ ಒಂದು ದೇಹ. ಒಂದು ದಿನ ದೊಡ್ಡ ಗಿರಾಕಿಯೊಬ್ಬ ಅಮ್ಮನನ್ನ ಮೂಲೆ ರೂಮಿನಲ್ಲಿ ಹಾಕಿಕೊಂಡು ಹೊಡೆದ. ಅಮ್ಮ ಕಿಟಾರನೆ ಕಿರುಚಿದಳು. ಮನೆಯವರೆಲ್ಲ ಬಂದರು. ಆದರೆ ಯಾರೂ ಬಿಡಿಸಲಿಲ್ಲ. ಆತನು ತುಂಬಾ ಹೊತ್ತು ಅಮ್ಮನನ್ನು ಹೊಡೆದನು. ಆನಂತರ ಅಮ್ಮ ಹಿತ್ತಲಿನ ಬಚ್ಚಲಿಗೆ ಹೋಗಿ ಗಾಯಕ್ಕೆ ಪುಡಿ ಹಚ್ಚಿಕೊಂಡು ಅಳುತ್ತಿದ್ದಳು. ಯಾರೂ ಸಮಾಧಾನ ಮಾಡಲಿಲ್ಲ. ಅಲ್ಲಿಗೆ ಫಾದರ್ ಬಂದು ಅಮ್ಮನಿಗೆ ಏನೋ ಹೇಳಿದ ಅಮ್ಮ ಆತನ ಮುಂದೆ ಥುಕ್ಕನೆ ಉಗುಳಿದಳು. ಎದ್ದು ಹೋಗಿ ಗ್ಲಾಸಿನಲ್ಲಿ ಆ ಗಿರಾಕಿ ಬಿಟ್ಟು ಹೋಗಿದ್ದನ್ನು ಕುಡಿದಳು. ಅಳುವುದನ್ನು ನಿಲ್ಲಿಸಿದಳು. ಫಾದರ್ನನ್ನು ಬೈದಳು. ಮನೆಯವರೆಲ್ಲ ಬೈದರು. ನಾನು ಒಳಗೆ ಬೈದುಕೊಂಡೆ. ಫಾದರ್ ಸೂಳೇ ಮಗನೇ! ಎಂದು ಬರೆದಿದ್ದ.

"ಅಮ್ಮನ ರೂಮಿನಲ್ಲಿ ವಾಸನೆ. ಅವಳೀಗ ಕೆಲಸಕ್ಕೆ ಹೋಗುತ್ತಿಲ್ಲ. ದೊಡ್ಡ ಗಿರಾಕಿಯೂ ಬರುತ್ತಿಲ್ಲ. ಬಂದರೆ ಹೊಡೆಯುತ್ತಾನೆ. ಹೊಡೆದು ಹಣ ಕೊಡುತ್ತಾನೆ. ಡಾಕ್ಟರು ಬರುತ್ತಾನೆ. ಔಷಧಿ ಕೊಡುತ್ತಾನೆ. ಫಾದರ್ ಒಳ್ಳೆಯವನು" ಎಂದು ಇನ್ನೊಂದು ಕಡೆ ಬರೆದಿದ್ದ. ಈ ವೇಶ್ಯವೃತ್ತಿಯ ಬದುಕು ಅದರಿಂದಾಗುವ ನೋವು ಎಲ್ಲವೂ ಚಿಕ್ಕ ವಯಸ್ಸಿನ ಮಕ್ಕಳ ಮೇಲೆ ಎಷ್ಟೊಂದು ಪ್ರಭಾವ ಬೀರುತ್ತದೆ ಎಂಬುದನ್ನು ಗಮನಿಸಬಹುದು.

ವೇಶ್ಯಾ ಕುಟುಂಬದ ಸ್ಥಿತಿಗತಿಯು ಅಸಹನೀಯಯುವಾಗಿದ್ದು, ವೇಶ್ಯೆಯರು ವೇಶ್ಯಾವಟಿಕೆ ವೃತ್ತಿಯಿಂದಲೆ ಬದುಕು ಸಾಗಿಸುವ ಅನಿವಾರ್ಯತೆ ಇರುತ್ತದೆ. ಅದನ್ನು ತೊರೆದು ಸ್ವಾವಲಂಬಿ ಜೀವನ ಸಾಗಿಸಲು ಪ್ರಯತ್ನಿಸಿದರು ಯಶಸ್ವಿಯಾಗುವುದಿಲ್ಲ.

ಇದರಿಂದಾಗಿ ವಯಸ್ಸಾದ ವೇಶ್ಯೆಯರು ತಮ್ಮ ಜೀವನವನ್ನು ಸಾಗಿಸಲು ತಮ್ಮ ಹೆಣ್ಣು ಮಕ್ಕಳನ್ನೊ ಇಲ್ಲವೊ ದತ್ತು ಪುತ್ರಿಯರನ್ನೋ, ಇಲ್ಲವೋ ಮಾರಾಟದ ಮೂಲಕ ಆಯ್ಕೆ ಮಾಡಿಕೊಳ್ಳುತ್ತಾರೆ. ವೇಶ್ಯಾ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಪ್ರೇರೇಪಿಸುವುದನ್ನು ರವಿಯವರು 'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿಯಲ್ಲಿ ಗುರುತಿಸಬಹುದು. ಪ್ರಶಾಂತನಿಗೆ ಸುಮಾರು ನಲವತ್ತೈದು ವರ್ಷಗಳಿರಬಹುದು. ಮೈಯೆಲ್ಲ ಮಾಂಸದ ಮುದ್ದೆಯಾಗಿ ಪರಿವರ್ತಿತವಾಗಿರುವುದನ್ನು ವಯಸ್ಸಾದ ವೇಶ್ಯೆಯಾದ ಲಕ್ಷ್ಮೀದೇವಮ್ಮನ ಕನ್ನಡಕದ ಹಿಂದಿನ ಕಣ್ಣುಗಳು ತುಂಬಾ ಹತ್ತಿರದಿಂದ ನೊಡಿವೆ. ಅವಳ ಅನಿಸಿಕೆ ಪ್ರಕಾರ ಪ್ರಶಾಂತಿನಿ ಪ್ರತಿ ರಾತ್ರಿ ಸತ್ತಿದ್ದಾಳೆ. ಪ್ರತಿ ಸಂಜೆ ಹುಟ್ಟಿದ್ದಾಳೆ. ಅವಳ ಬದುಕಿಗೆ ಸುರ್ಯೋದಯವಾಗಲೇ ಇಲ್ಲ. ವೇಶ್ಯಾವೃತ್ತಿಯ ಬದುಕಿನ ಕರಾಳತೆಯನ್ನು ಗಮನಿಸಬಹುದು. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂದು ಹೇಳುತ್ತೇವೆ. ಈ ಮಾತಿಗೆ ಹೋಲಿಸಿದರೆ ಪ್ರಶಾಂತಿನಿ ಯಾವ ಸ್ತರದಲ್ಲಿ ನಿಲ್ಲುತ್ತಾಳೆ? ಅವಳು ವೇಶ್ಯೆಯಾಗಿ ಬದುಕು ಸಾಗಿಸುತ್ತಿದ್ದರು ಇಂಗ್ಲಿಷ್ ಮಾತಾಡಲು ಬರುತ್ತಿತ್ತು. ಒಂದು ವೇಳೆ ಮಾತಾಡಲು ಹೋದರೆ ಬಂದ ಗಿರಾಕಿಗಳು ಇಂತಹ ಕಸುಬು ಕಲಿತೋಳಿಗೆ ಅಷ್ಟಿಷ್ಟು ಇಂಗ್ಲಿಷ್ ಕಲಿಯೋದು ಕಷ್ಟವಾ ಅಂತ ಅಸಹ್ಯವಾಗಿ ನಗುತ್ತಿದ್ದರು. ಈ ಬದುಕಿಗೆ ಬಂದವಳು ಯಾವ ಸ್ವತಂತ್ರಕ್ಕೂ ಅರ್ಹಳಲ್ಲ ಎಂಬುದನ್ನು ಪುಷ್ಟೀಕರಿಸುತ್ತದೆ. ಇಷ್ಟೆಲ್ಲಾ ನೋವು ಅನುಭವಿಸಿದ ಅವಳು ನನ್ನದು ಅಂತಾ ಒಂದು ಬದುಕು ಕಟ್ಟಿಕೊಳ್ಳಲೇಬೇಕು. ಸ್ವತಂತ್ರವಾಗಿ ಬದುಕಬೇಕು ಅಂದುಕೊಂಡಾಗಲೆ ಅವಳ ಕಡೆ ಬಂದ ಗಿರಾಕಿಗಳಲ್ಲಿ ಒಬ್ಬ ಬಾಳು ಕೊಡುತೇನೆ ಎಂದಾಗ ಅವಳಿಗೆ ತುಂಬಾ ಸಂತೋಷವಾಯಿತು. ಅದೇ ದಿನ "ನಾನಿನ್ನು ಬೇರೆ ಮನೆ ಮಾಡ್ತಿನಿ" ಅಂತಾ ಪ್ರಶಾಂತಿನಿ ನಿರ್ಧರಿಸಿದಾಗ ಕಸುಬಿನ ಒಡತಿ ಲಕ್ಷ್ಮೀದೇವಮ್ಮ ತಿಳಿಹೇಳಿದ್ದಳು. ಮನೆ ಮಾಡುವ ಉಸಾಬರಿ ಬೇಡಾ. ಈ ಸಮಾಜ ಒಬ್ಬಂಟಿ ಹೆಂಗಸರನ್ನು ಬದುಕಗೊಡುವುದಿಲ್ಲ. ಈ ಕಸುಬಿಗೆ ಬಂದವಳು ಮತ್ತೆ ಯಾವ ಬದುಕಿಗೂ ವಾಪಸ್ಸು ಹೋಗಲಾರಳು.

ಸಮಾಜದಲ್ಲಿ ಒಮ್ಮೆ ಇವಳು ವೇಶ್ಯೆ ಎಂದು ಗೊತ್ತಾದರೆ ಅವಳ ಬದುಕು ನರಕವಲ್ಲದೆ ಜನರು ಅವಳನ್ನು ನೋಡುವ ದೃಷ್ಟಿಕೋನವೆ ಬದಲಾಗುತ್ತದೆ. ಅವಳೊಂದಿಗೆ ರಾತ್ರಿ ದೇಹ ಸುಖ ಪಡೆಯುವ ಗಂಡಸರಿಗೆ ಅವಳು ಹೊರಗಡೆ ಬೇರೆ ಬದುಕು ಅರಸಿ ಬದುಕುತ್ತೇನೆ ಎಂದರೆ ಬಿಡುವುದಿಲ್ಲ. ದೈಹಿಕ ಸುಖಕ್ಕೆ ಮಾತ್ರ ಅವಳು ಬೇಕು ನಿಜ ಜೀವನದಲ್ಲಿ ಅವಳೊಂದಿಗೆ ಇರಲು ಯಾರು ಬಯಸುವುದಿಲ್ಲ. ಒಂದು ವೇಳೆ ಬಯಸಿದರು ಜನ ಅವಳನ್ನು ಹೀಯಾಳಿಸಿ ಜೀವಂತವೆ ಕೊಂದು ಹಾಕುತ್ತಾರೆಂಬುದನ್ನು ಊಹಿಸಬಹುದು. ಆದರೂ ಸಹಿತ ಒಬ್ಬ ಗಿರಾಕಿ ಬಾಳು ಕೊಡುತ್ತೇನೆ ಎಂದಾಗ ಪ್ರಶಾಂತಿನಿ ಬೇರೆ ಮನೆ ಮಾಡಿದಳು.

ಅವನು ಮೊದಲು ದಿನಾ ಬರುತ್ತಿದ್ದ. ಅವಳನ್ನ ಸಂತೋಷದಿಂದುಡುವಂತೆ ನಟಿಸಿದ. ಆಗ ಅವಳು ನನಗೂ ಒಂದು ಹೊಸ ಬದುಕು ಸಿಕ್ಕಿತೆಂಬ

ಸಂತೋಷದಲ್ಲಿದ್ದಳು. ಆದರೆ ಬರುಬರುತ್ತಾ ಅವನ ದರ್ಶನವೆ ಅಪರೂಪವಾಯಿತು. ಮುಂದೆ ಆತ ಬರುವುದನ್ನೆ ನಿಲ್ಲಿಸಿದ. ನಂತರದ ಬದುಕು ಮತ್ತೆ ಕತ್ತಲಾಗಿ ಹೋಯಿತು . ಅವಳು ಮೊದಲಿನಂತೆ ತೀರ ಇಳಿಸಂಜೆಯಲ್ಲಿ ಹೂ ಮುಡಿದುಕೊಂಡು ಮನೆಯ ಬಾಗಿಲಲ್ಲಿ ಗಿರಾಕಿಗಳಿಗಾಗಿ ಕುಳಿತುಕೊಳ್ಳಲು ಪ್ರಾರಂಬಿಸಿದಳು. ವೇಶ್ಯಾ ವೃತ್ತಿಯನ್ನು ತೊರೆದು ಸ್ವಾವಲಂಬಿ ಜೀವನ ಸಾಗಿಸಲು ಪ್ರಯತ್ನಿಸಿದರೂ ಯಶಸ್ವಿಯಾಗುವುದಿಲ್ಲ ಎಂಬುದನ್ನು ಗುರುತಿಸಬಹುದು.

'ನೀ ಹಿಂಗ ನೋಡಬ್ಯಾಡ ನನ್ನ' ಕಾದಂಬರಿ ಸ್ತ್ರೀ ಪಾತ್ರಗಳಲ್ಲಿ ಪೋಷಿತ ವೃತ್ತಿ ಸಂಬಂಧವನ್ನು ಗಮನಿಸಬಹುದು. ಪ್ರಶಾಂತಿನಿಯ ಮಗ ಶಿಶಿರಚಂದ್ರ ಸಂಭ್‌ಲಪುರಕ್ಕೆ ದುಡಿಯಲು ಬಂದ ಸಮಯದಲ್ಲಿ ಆಸ್ನಾಮದವಳಾದ ಗೋಮತಿ ಎಂಬ ಚಿಕ್ಕವಯಸ್ಸಿನ ಅಮ್ಮ ಇದ್ದರು ಅನಾಥಳಂತಿದ್ದ ಆ ಮಗುವನ್ನು ಸಾಕಿಕೊಂಡಿದ್ದ. ಅವಳ ಅಮ್ಮ ಕಲ್ಕತ್ತಾದಲ್ಲಿ ವೇಶ್ಯೆಯಾಗಿದ್ದಳು. ವೇಶ್ಯಾವೃತ್ತಿಯ ಪಾತ್ರಗಳನ್ನು ಹೆಚ್ಚಾಗಿ ಸೃಷ್ಟಿಸುವ ರವಿಯವರು ಅವರ ಮಕ್ಕಳು ಅನಾಥವಾಗುವುದನ್ನು ಅನಾವರಣಗೊಳಿಸಿದ್ದಾರೆ.

ಮಕ್ಕಳ ಮನಸ್ಸು ಹಸಿ ಗೋಡೆ ಇದ್ದಂತೆ. ಅವರು ಯಾವುದೆ ವೃತ್ತಿಗೆ ಇಳಿದರು ಮರಳಿ ಬೇರೆ ಬದುಕಿಗೆ ಬರಲಾರರು. 'ಆರು ವರ್ಷದ ಬುದ್ದಿ ಅರವತ್ತು ವರ್ಷದವರೆಗೆ' ಎಂಬ ಯುಕ್ತಿಯಂತೆ. ಆ ವಯಸ್ಸಿನಲ್ಲಿ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಅಂಶಗಳು ಅವರನ್ನು ಅದೇ ಬದುಕಿಗೆ ದೂಡಿ ಬಿಡುತ್ತದೆ. ಆದರೆ ಇಲ್ಲಿ ಗೋಮತಿಗೆ ಶಿಶಿರಚಂದ್ರ ಪೋಷಿತನಾಗಿ ಲಭಿಸಿದ್ದರಿಂದ ಅವಳ ಅಮ್ಮನಂತೆ ವೇಶ್ಯೆಯಾಗಲಿಲ್ಲ. ಇನ್ನೊಂದು ವಿಷಯವೆಂದರೆ ಶಿಶಿರಚಂದ್ರನ ತಾಯಿ ಕೂಡ ಮೊದಲು ವೇಶ್ಯೆಯಾಗಿ ಬದುಕು ಸಾಗಿಸಿದವಳು. ಆದ್ದರಿಂದ ಆ ಬದುಕಿನ ಸಂಪೂರ್ಣ ಪರಿಚಯ ಶಿಶಿರಚಂದ್ರನಿಗಿರುತ್ತದೆ. ತಾಯಿಯ ಆ ಬದುಕನ್ನು ಆತನಿಗೆ ತಿಳುವಳಿಕೆ ಬಂದ ಮೇಲೆ ಸಂಪೂರ್ಣವಾಗಿ ತಿರಸ್ಕರಿಸಿದ್ದ. ಆದ್ದರಿಂದ ಆತ ಗೋಮತಿಯು ಆ ದಾರಿ ಹಿಡಿಯಬಾರದು. ಅವಳು ಶಿಕ್ಷಣ ಪಡೆದು ಸಮಾಜದಲ್ಲಿ ಎಲ್ಲರಂತೆ ಬದುಕಬೇಕು ಎಂದು ಅಪೇಕ್ಷೆ ಪಡುತ್ತಾನೆ.

ಆದರೆ ಆತ ಕಳ್ಳತನದ ಆಪಾದನೆ ಮೇಲೆ ಜೈಲಿಗೆ ಹೊದ ಸಂದರ್ಭದಲ್ಲಿ ಗೋಮತಿಯನ್ನು ನೆನಪಿಸಿಕೊಂಡು ಅವಳು ಕೂಡ ಅಮ್ಮನಂತೆ ಟ್ಯಾನರಿ ರೋಡನ ತುದಿಯ ಬೋರ್‌ವೆಲ್ ಎದುರಿಗಿನ ಢಾಳ ಹಸುರಿನ ಬಣ್ಣದ ಬಾಗಿಲ ಹಿಂದೆ ಬದುಕುವ ಶಾಂತಮ್ಮನಂತೆ ವೇಶ್ಯೆಯಾಗಬಾರದು ಎಂದು ಚಡಪಡಿಸುತ್ತಾನೆ. ಆದರೆ ಶಾಂತಮ್ಮ ಈಗ ಮಗನ ಬಯಕೆಯಂತೆ ವೇಶ್ಯಾ ವೃತ್ತಿಯನ್ನು ತಿರಸ್ಕರಿಸಿ ಹೊಸ ಬದುಕಿನೊಂದಿಗೆ ಬದುಕುತ್ತಿದ್ದಾಳೆ. ಆ ಶಾಂತಮ್ಮನೆ ಮುಂದೆ ಪ್ರಶಾಂತಿನಿಯಾಗಿ ಹೊಸ ಹೆಸರಿನೊಂದಿಗೆ ಹೊಸ ಬದುಕಿಗೆ ಕಾಲಿಟ್ಟಿರುತ್ತಾಳೆ. ಶಿಶಿರ ಜೈಲು ಪಾಲಾದ ಮೇಲೆ ಗೋಮತಿ ಪ್ರಶಾಂತನಿಯ ಪೋಷಣೆಯಲ್ಲಿ ಬೆಳೆಯುತ್ತಾಳೆ.

ಶಿಶಿರಚಂದ್ರ ಸಂಭ್‌ಲ್‌ಪುರಕ್ಕೆ ಮರಳಿ ಬರುವುದಿಲ್ಲ ಎಂದು ಗೊತ್ತಾದಾಗ ಆತನ ತಾಯಿ ಹೊರಟು ಬರಲು ನಿಶ್ಚಯಿಸುತ್ತಾಳೆ. ಆದರೆ ಗೋಮತಿಯನ್ನು ಅಲ್ಲೇ ಬಿಟ್ಟು ಬರಲು ಮನಸಾಗಲಿಲ್ಲ. ಆಕೆ ಜನುಮದ ಕೊನೆಯಲ್ಲಿ ಹುಟ್ಟಿದ ಮಗಳು ಅನ್ನಿಸುವಷ್ಟು ಇಷ್ಟವಾಗಿದ್ದಾಳೆ. ಅವಳಿಗಾದರೂ ಬೇರೆ ಯಾರಿದ್ದಾರೆ? ಕರೆದುಕೊಂಡು ಬಂದೆ. ಈಗ ವಾರಣಾಸಿಯಲ್ಲಿದ್ದೇನೆ. ಗೋಮತಿಗೆ ಒಂದು ಶಾಲೆ ಹುಡುಕಿದ್ದೇನೆ ಎಂದು ಮಗನಿಗೆ ಪತ್ರದ ಮೂಲಕ ತಿಳಿಸಿದ್ದಳು. ಅಲ್ಲದೆ ಗೋಮತಿ ಈಗ ಬೆಳೆಯುತ್ತಿದ್ದಾಳೆ. ರಾತ್ರಿ ಅವಳಿಗೆ ಊಟ ಮಾಡಿಸಿ, ತಾನೂ ಒಂದು ತುತ್ತು ತಿಂದು ಅವಳು ನಿದ್ದೆ ಮಾಡಿ ಬಿಡುವ ಮೊದಲೆ ಅವಳ ತಲೆ ಬಾಚಿ ಜಡೆ ಹಾಕಿ ಬಿಡುತ್ತಿದ್ದಳು. ಯಾಕೆಂದರೆ ಬೆಳಗ್ಗೆ ಇಬ್ಬರಿಗೂ ಹೊರಡುವ ಅವಸರ. ಗೋಮತಿ ತಾನೇ ಎದ್ದು ಸ್ನಾನ ಮಾಡಿ, ತಾನೇ ಯೂನಿಫಾರ್ಮ ಹಾಕಿಕೊಂಡು, ಕೊರಳಿಗೆ ಟೈ ಕಟ್ಟಿಕೊಂಡು ಬೂಟು ತೊಟ್ಟು, ಶಾಲೆಗೆ ಹೋಗುವಷ್ಟು ಸ್ವತಂತ್ರವಾಗಿರುತ್ತಾಳೆ. ಪದ್ಮಾಸನ ಹಾಕಿಕೊಂಡು ಕುಳಿತು, ದೊಡ್ಡ ದನಿಯಲ್ಲಿ ದೇವರ ನಾಮ ಹಾಡುತ್ತಾಳೆ. ಪ್ರಶಾಂತಿನಿಯನ್ನು 'ಅಮ್ಮ' ಅಂತಲೇ ಅನ್ನುತ್ತಾಳೆ ಅನ್ನುವುದನ್ನು ಗಮನಿಸಿದಾಗ ಪೋಷಣೆಯೊಂದಿಗೆ ಸ್ತ್ರೀಯರಿಗೆ ಶಿಕ್ಷಣದ ಅಗತ್ಯತೆ ಇದೆ ಎಂಬುದನ್ನು ಪುಷ್ಟೀಕರಿಸಿದ್ದಾರೆ.

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಕನ್ನಡ ಪತ್ರಿಕೋದ್ಯಮ ಹಾಗೂ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ರವಿ ಬೆಳಗೆರೆ ತಮ್ಮ ಬರಹಗಳ ಮೂಲಕ ಬೃಹತ್ ಓದುಗ ಸಮೂಹವನ್ನು ಸೃಷ್ಟಿಸಿಕೊಂಡಿರುವುದು ಅತಿಶಯೋಕ್ತಿಯೇನಲ್ಲ. ಇಂಗ್ಲೀಷ್, ಹಿಂದಿ, ಉರ್ದು, ತೆಲುಗು ಭಾಷೆಗಳಲ್ಲಿ ಪರಿಣಿತರಾಗಿರುವ ರವಿಯವರು ಆ ಭಾಷೆಗಳಲ್ಲಿನ ಅಪರೂಪದ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಗೇಬ್ರಿಯಲ್, ಗಾರ್ಸಿಯಾ ಮಾರ್ಕ್ವೆಜ್, ಖುಷ್‌ವಂತ್ ಸಿಂಗ್, ಹುಸೇನ ಜಾದಿ, ಪ್ರೊತಿಮಾ ಬೇಡಿ, ಚಲಂ, ವಿನೋದ ಮೆಹ್ತಾ, ಜಪೋ ರಜನೀಶ, ಬ್ರಿಗೇಡಿಯರ್ ಜಾನ, ಪಿ.ದಳವಿ, ಮನೋಹರ ಮಳಗಾಂವಕರ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ಆಪ್ತವಾದ ಶೈಲಿಯಲ್ಲಿ ಅನುವಾದ ಮಾಡಿದ್ದಾರೆ. ಕಳೆದ ೩೦ ವರ್ಷದ ಅವಧಿಯಲ್ಲಿ ಪತ್ರಿಕೋದ್ಯಮದ ಜೊತೆ ಜೊತೆಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸುತ್ತಾ ಎರಡರಲ್ಲೂ ಜನಪ್ರಿಯತೆಯನ್ನು ಗಳಿಸಿಕೊಂಡವರು. ಸುಮಾರು ೬೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ರವಿ ಬೆಳಗೆರೆ ಕನ್ನಡದ ಅಪರೂಪ ಬರಹಗಾರರು. ಅವರ ಕೃತಿಗಳು ಕೂಡಾ ತುಂಬಾ ವೈವಿಧ್ಯಮಯವಾದವುಗಳು ಕಥೆ, ಕಾದಂಬರಿ, ಅಂಕಣ ಬರಹ, ಆತ್ಮಕಥನ, ಜೀವನ ಚರಿತ್ರೆ, ಅನುವಾದ, ಪತ್ರ ಸಾಹಿತ್ಯ, ಪ್ರವಾಸ ಕಥನ, ಯುದ್ಧ, ವರದಿಗಾರಿಕೆ, ಇತಿಹಾಸ, ರಾಜಕೀಯ, ಅಪರಾಧ, ಭೂಗತ ಜಗತ್ತು, ವಾಮಾಚಾರ, ತನಿಖೆ ಹೀಗೆ ವಿಸ್ತಾರಗೊಳ್ಳುತ್ತಾ ಸಾಗುತ್ತದೆ. ರವಿಯವರ ಕೃತಿಗಳ ವೈವಿಧ್ಯತೆ, 'ನಾಟಕ' ಪ್ರಕಾರವೊಂದನ್ನು (ಈ ಹಿಂದೆ ನಾಟಕವನ್ನು ರಚಿಸಿದ್ದರು. ಅವು ಅಧಿಕೃತವಾಗಿ ಎಲ್ಲೂ ಪ್ರಕಟಗೊಂಡಿಲ್ಲ) ಹೊರತು ಪಡಿಸಿದರೆ ಉಳಿದೆಲ್ಲಾ ಸಾಹಿತ್ಯ ಪ್ರಕಾರಗಳಲ್ಲಿಯು ಅವರು ಕೃತಿಗಳನ್ನು ರಚಿಸಿದ್ದಾರೆ. ಮುದ್ರಣ ಮಾಧ್ಯಮದ ಜೊತೆಗೆ ಎಲೆಕ್ಟ್ರಾನಿಕ್ ಮಾಧ್ಯಮದ (ದೂರದರ್ಶನ, ರೇಡಿಯೊ, ಅಂತರ್ಜಾಲ, ಸಿಡಿ) ಮೂಲಕವೂ ಓದುಗರನ್ನು ಶ್ರೋತೃಗಳನ್ನು, ವೀಕ್ಷಕರನ್ನು ತಲುಪಿದ್ದಾರೆ. ಚಲನ ಚಿತ್ರಗಳಿಗೂ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಬರೆದಿರುವ ರವಿಯುವರು ಕೆಲವು ಚಲನಚಿತ್ರಗಳಲ್ಲಿ ದೂರದರ್ಶನದ ಧಾರಾವಾಹಿಗಳಲ್ಲೂ ನಟಿಸಿದ್ದಾರೆ. ಜೊತೆಗೆ 'ಮುಖ್ಯಮಂತ್ರಿ ಐ ಲವ್ ಯು' ಎಂಬ ಕನ್ನಡ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ಕಥೆ ಸಂಭಾಷಣೆಯನ್ನು ಬರೆಯುವುದರೊಂದಿಗೆ, ಆ ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಇವೆಲ್ಲವೂ ಅವರ ಸೃಜನಶೀಲತೆಯ ವಿವಿಧ ರೂಪಗಳನ್ನು ಪರಿಚಯಿಸುತ್ತವೆ.

ತಮ್ಮ ಆತ್ಮಕಥನ ಖಾಸ್‌ಬಾತನ್ನು ಕೂಡಾ ಕಥೆಯೇನೊ ಎಂಬಂತೆ ಸೊಗಸಾಗಿ ಬರೆಯಬಲ್ಲ ರವಿ ಅತಿ ಚಿಕ್ಕ ವಯಸ್ಸಿನಲ್ಲೆ (೨೪ ವರ್ಷ) ಅನುವಾದ

(ವಿವಾಹ: ಹುಟ್ಟು ಮತ್ತು ಪೂರ್ವೋತ್ತರ) ಕ್ಕಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಪಡೆದವರು. ೨೧ನೇ ವಯಸ್ಸಿನಲ್ಲಿ ಬರೆದ 'ದಾರಿ' ಕಥಾ ಸಂಕಲನಸ ಕಥೆಗಳ ವಸ್ತು, ಭಾಷೆ, ನಿರೂಪಣಾ ಕ್ರಮ ವಿಶಿಷ್ಟವಾದದ್ದು. ಅದರಲ್ಲೂ 'ಹಂತ' ಕಥೆ ಓದುಗಾರನ್ನು ಬೇರೊಂದು ಜಗತ್ತಿಗೆ ಕರೆದೊಯ್ದು ಅಚ್ಚರಿಯನ್ನುಂಟು ಮಾಡುತ್ತದೆ. ಕಥೆಗಳಲ್ಲಿ ಕೂಡಾ ರವಿ ಸ್ತ್ರೀ ಪಾತ್ರಗಳನ್ನು ಪರಿಣಾಮಕಾರಿಯಾಗಿ 'ವೇಷಗಳು' ಕಥೆ ಶಿವಿ ಮುಂತಾದ ಸ್ತ್ರೀ ಪಾತ್ರಗಳ ಮೂಲಕ ಸ್ತ್ರೀಯರ ಅಂತರಂಗದಲ್ಲಿಯ ನೋವಿನ ಕದತಟ್ಟುವ ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ಕಾದಂಬರಿ ಸಾಹಿತ್ಯದಲ್ಲಿಯೂ ರವಿಯವರು ಸ್ತ್ರೀಯರ ಮಾನಸಿಕ ತೊಳಲಾಟ, ವೇಶ್ಯಾವೃತ್ತಿ ಜೀವನ, ಈ ಜೀವನದಿಂದ ಅಂತರಂಗದ ನೋವುಗಳನ್ನು 'ಹೇಳಿ ಹೋಗು ಕಾರಣ' ಕಾದಂಬರಿಯ, ಕಸೂತಿ ಕಾವೇರಮ್ಮ ಮುಂತಾದ ಪಾತ್ರಗಳ ಮೂಲಕ ಸ್ತ್ರೀಯರ ಅಂತರಂಗದಲ್ಲಿನ ನೋವಿನ ಕದತಟ್ಟುವ ಪ್ರಯತ್ನ ಮಾಡಿದ್ದಾರೆ. ಪ್ರಮುಖ ಸ್ತ್ರೀ ಪಾತ್ರವಾದ ಊರ್ಮಿಳೆಯ ಮಾನಸಿಕ ಅಸ್ಥಿಮಿತತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವುದರ ಮೂಲಕವು ಸ್ತ್ರೀಯರ ಸೂಕ್ಷ್ಮ ಹೃದಯ ಭಾವನೆಯ ಕದ ತಟ್ಟುವ ಪ್ರಯತ್ನ ಮಾಡಿದ್ದಾರೆ. ಪ್ರಾರ್ಥನಾ ಪಾತ್ರದ ಮೂಲಕ ಪ್ರೀತಿಯಲ್ಲಿ ಬದಲಾಗುವ ಸ್ತ್ರೀಯರ ನಡುವಳಿಕೆ ಮತ್ತು ಆತುರದ ನಿರ್ಣಯದಿಂದ ಅವಳು ಅನುಭವಿಸುವ ಮಾನಸಿಕ ಮತ್ತು ದಾಂಪತ್ಯದಲ್ಲಿ ಬಿರುಕು ತರುವುದರ ಮೂಲಕ ಸಮಾಜದಲ್ಲಿ ಪ್ರೀತಿಯ ಪರ ಮತ್ತು ವಿರೋಧಗಳ ನಡುವೆ ಸ್ತ್ರೀ ಜೀವನ ಪಯಣವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ರವಿ ಬೆಳಗೆರೆಯವರ ಕಾದಂಬರಿ 'ಕವಿರಾಜ ಮಾರ್ಗವಲ್ಲ. ಇದು ಕಾಮರಾಜ ಮಾರ್ಗ' ಕಾದಂಬರಿ ಕಥಾವಸ್ತು ಕುರಿತು ಮುನ್ನುಡಿ ರೂಪದಲ್ಲಿ ಕಾದಂಬರಿಯ ಸೃಷ್ಟಿಯಲ್ಲಿ ರವಿ ಬೆಳಗೆರೆಯವರ ಚಾಣಾಕ್ಷತೆಯನ್ನು ಅವರ ಸ್ನೇಹಿತರಲ್ಲಿ ಒಬ್ಬರಾದ ವಿಶ್ವೇಶ್ವರ ಭಟ್ ಹೇಳುವುದು ಹೀಗೆ. "ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದಿನ ಮಾತು. ಆಗ ನಾನು ಕರ್ನಾಟಕ ಯೂನಿವರ್ಸಿಟಿಯಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದೆ. ಧಾರವಾಡದ ರಜತಗಿರಿಯಲ್ಲಿ ರೂಮು ಮಾಡಿಕೊಂಡಿದ್ದೆ. ಆಗ ರವಿ ಬೆಳಗೆರೆ 'ಸಂಯುಕ್ತ ಕರ್ನಾಟಕ'ದ ಸಾಪ್ತಾಹಿಕ ಪುರವಣಿಯ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದ. ನಮ್ಮ ಗೆಳೆತನ ಅದ್ಯಾವಾಗ ಏಕವಚನಕ್ಕೆ ತಿರುಗಿತೋ? ಇಬ್ಬರಿಗೂ ನೆನಪಿಲ್ಲ. 'ಅಣ್ಣಾ, ಒಂದು ಸಂಜೆ ಊಟಕ್ಕೆ ಬಾರೋ. ನನಗೆ ಅಡುಗೆ ಮಾಡಿಕೊಳ್ಳುವಾಗ ನಿನಗೂ ಒಂದು ಹಿಡಿ ಅಕ್ಕಿ ಹಾಕಿ ಬೇಯಿಸಿರುತ್ತೇನೆ ಅಂತ ಪತ್ರ ಬರೆದೆ. ಊಟದ ವಿಷಯದಲ್ಲಿ ಅವನು ಮಾತು ತಪ್ಪುವವನಲ್ಲ. ಬಂದೇ ಬಿಟ್ಟ. ಬಂದವನೇ ಉಣ್ಣಲು ಕುಳಿತ. ಒಂದು ಹಿಡಿ ಅಕ್ಕಿ ಹೆಚ್ಚಿಗೆ ಹಾಕಿದ್ದೇನೋ ನಿಜ. ಆದರೆ ಎಷ್ಟು ದಿನಗಳ ದ್ವೇಷವಿತ್ತೊ ಅವನಿಗೆ ನನ್ನ ಮೇಲೆ. ಉಂಡ ಉಂಡ ಉಂಡ: ಒಂದೇ ಸಮನೆ ಉಂಡ. ಕಡೆಗೆ ರೂಮಿನಲ್ಲಿದ್ದ ನಮಗ್ಯಾರಿಗೂ ಒಂದು ಹಿಡಿ ಅನ್ನ ಉಳಿಯಲಿಲ್ಲ. 'ಇವನು ದೈತ್ಯ' ಅಂದುಕೊಂಡೆ. ಆದರೆ ಊಟವೊಂದೇ ಅಲ್ಲ:

ಬರೆಯುವುದರಲ್ಲೂ ಅವನು ದೈತ್ಯನೇ. ಇದು ಅಣ್ಣನ ಅರವತ್ತನೇ ಪುಸ್ತಕವೆಂಬುದೇ ಅವನ ಬರಣಿಗೆಯ ವೇಗಕ್ಕೆ, ಸೃಷ್ಟಿಸಿಕೊಂಡಿರುವ ಓದುಗ ಸಮೂಹಕ್ಕೆ ಸಾಕ್ಷಿ.

'ಕಾಮರಾಜ ಮಾರ್ಗ' ಕಾದಂಬರಿಯ ಕಥಾವಸ್ತುವೇ ರಾಜಕೀಯ. ಸಾಮಾನ್ಯವಾಗಿ ರಾಜಕೀಯ ಕಾದಂಬರಿಗಳು ತುಂಬಾ ರುಚಿಕರವಾಗಿರುವುದಿಲ್ಲ. ಆದರೆ ರವಿ ಬೆಳಗೆರೆಯವರ ಯಾವ ಬರಹವೂ ರುಚಿಹೀನವಾಗಿರುವುದಿಲ್ಲ. ಅದರಲ್ಲೂ ಮನುಷ್ಯ ಸಂಬಂಧಗಳ ಕುರಿತು ಬರೆಯುವಾಗ ರವಿ ಬೆಳಗೆರೆ ಅತ್ಯಂತ ಸೂಕ್ಷ್ಮ, ಭಾವುಕ ಮತ್ತು ಚತುರ. ಬರವಣಿಗೆಯ ಕ್ರಾಫ್ಟ್ ಪಳಗಿಸಿಕೊಂಡಿರುವ ಲೇಖಕ. 'ಕಾಮರಾಜ ಮಾರ್ಗ' ಒಂದು ಸುದೀರ್ಘ ಕಾದಂಬರಿ. ವಿಚಿತ್ರವೆಂದರೆ, ಇದು ಆರಂಭವಾಗುವುದು ನನ್ನ ಅವ್ಯಕ್ತ ರೆಫರೆನ್ಸಿನೊಂದಿಗೆ. ಅವು ದಿಲ್ಲಿಯಲ್ಲಿ ನಾನು ಮಂತ್ರಿಯೊಬ್ಬರ ವಿಶೇಷ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ದಿನಗಳು. ದಿಲ್ಲಿಗೆ ಬಂದ ರವಿ ಬೆಳಗೆರೆ ಒಂದೆರಡು ದಿನ ನನ್ನೊಂದಿಗೆ ಉಳಿದುಕೊಂಡಿದ್ದ. ಆಗ ಮಂತ್ರಿಯಾಗಿದ್ದಾಕೆಯೊಬ್ಬಳ ಬಳಿ ಅಡುಗೆಯವನಾಗಿದ್ದ ವ್ಯಕ್ತಿಯೊಬ್ಬ ನನ್ನನ್ನು ಕಾಣಲು ಬಂದಿದ್ದ. ನಾನು ಕೆಲಸ ಮಾಡುತ್ತಿದ್ದ ಮಂತ್ರಿಗಳ ಬಳಿ ಅವನಿಗೆ ಕೆಲಸವಿತ್ತು. ಮತ್ತೇನಿಲ್ಲ; ಅವನು ಆ ಮಹಿಳಾ ಮಂತ್ರಿಯಿಂದ ಬಿಡುಗಡೆ ಪಡೆದು ಬೇರೆ ಯಾವುದಾದರೂ ಹೋಟೆಲಿನಲ್ಲಿ ಬಾಣಸಿಗನಾಗಿ ವರ್ಗಾವಣೆ ಮಾಡಿಕೊಡುವಂತೆ ದುಂಬಾಲು ಬಿದ್ದಿದ್ದ. ಅವನದು ಕೇಂದ್ರ ಸರ್ಕಾರಿ ನೌಕರಿ. ಇವತ್ತಿಗೂ ಕೇಂದ್ರ ಸರ್ಕಾರ ಪ್ರವಾಸೋದ್ಯಮ ಖಾತೆ ದೇಶಾದಾದ್ಯಂತ ಹೋಟೇಲ್‌ಗಳನ್ನು ನಡೆಸುತ್ತದೆ. ಅಲ್ಲಿನ ನೌಕರರನ್ನು ಸರ್ಕಾರವೆ ವಿವಿಧ ಮಂತ್ರಿಗಳ ಮನೆಗಳಿಗೆ ನೌಕರರನ್ನಾಗಿ, ಅಡುಗೆಯವನನ್ನಾಗಿ ಕಳಿಸಿಕೊಡುತ್ತದೆ. ಹಾಗೆ ಕಳಿಸಲ್ಪಟ್ಟ ಈ ಬಾಣಸಿಗನನ್ನು ಅವಿವಾಹಿತೆಯಾದ, ಕಡೆಗೆ ಸನ್ಯಾಸಿನಿಯಾಗಿಯೂ ಆದ ಮಹಿಳೆಯೊಬ್ಬಾಕೆ ತನ್ನ ಅಂತರಂಗದೊಳಕ್ಕೆ ಬಿಟ್ಟುಕೊಂಡಳು. ಆದರೆ ಅಡುಗೆಯವನು ವಿವಾಹಿತ. ಮನೆಯಲ್ಲಿ ಹೆಂಡತಿಯಿದ್ದಾಳೆ. ನೌಕರಿಗೆ ಹೋದರೆ ಸಚಿವೆ ದುಂಬಾಲು ಬೀಳುತ್ತಾಳೆ ಇಬ್ಬರನ್ನೂ ಸುಧಾರಿಸಲಾಗದೆ ಈ ಮನುಷ್ಯ ಕಂಗಾಲಾಗಿದ್ದ. ಸಚಿವೆಯ ಮನೆಯಿಂದ ಯಾವದಾದರೂ ಹೋಟೆಲಿಗೆ ವರ್ಗಾವಣೆ ಮಾಡಿಸಿ ಪುಣ್ಯ ಕಟ್ಟುಕೊಳ್ಳಿ ಅಂತ ವಿನಂತಿಸಲು ಆತ ಭೂಪಾಲದಿಂದ ದಿಲ್ಲಿಗೆ ಬಂದಿದ್ದ. ಅವನು ಮೊದಲು ನನ್ನೊಂದಿಗೆ ಆನಂತರ ನಮ್ಮ ಮಂತ್ರಿಗಳೊಂದಿಗೆ ಮಾತನಾಡಿದಾಗ ನಮ್ಮೊಂದಿಗೆ ಇದ್ದದ್ದು ರವಿ ಬೆಳಗೆರೆ.

ಈ ಘಟನೆಯೇ ಸವಿಸ್ತಾರ, ಸುಧೀರ್ಘ ಕಾದಂಬರಿಯೊಂದರ ಆರಂಭದ ಅಧ್ಯಾಯವಾಗಿರುತ್ತದೆ ಎಂಬ ಕಲ್ಪನೆಯೆ ನನಗಿರಲಿಲ್ಲ. ಇದು ನಡೆದು ಅನೇಕ ವರ್ಷಗಳೇ ಆಗಿವೆ. ಇಷ್ಟು ಕರಾರುವಕ್ಕಾಗಿ ನೆನಪಿಟ್ಟುಕೊಂಡಿದ್ದಾನಲ್ಲಾ ಅಂತ ಬೆಳಗೆರೆ ಬಗ್ಗೆ ಆಶ್ಚರ್ಯವಾಗುತ್ತದೆ. ಆದರೆ ಅದಕ್ಕಿಂತ ಹೆಚ್ಚಿನ ಆಶ್ಚರ್ಯ, ಕೂತೂಹಲ, ಕೆಲವೊಮ್ಮೆ ಅಸಹ್ಯವನ್ನು ಮೂಡಿಸುವುದು ನಮ್ಮ ರಾಜಕೀಯ ನಾಯಕರ–ನಾಯಕಿಯರ ಖಾಸಗಿ ಬದುಕು. ಅದನ್ನು ಎಳೆಯೆಳೆಯಾಗಿ, ಕೆಲವಡೆ ಹಸಿಬಿಸಿಯಾಗಿ

ಓದುಗರ ಎದುರಿಗೆ ಹರವಿಡುವುದು 'ಕಾಮರಾಜ ಮಾರ್ಗ'. ಒಮ್ಮೊಮ್ಮೆ ಇದು ನಮಗೆ ಪರಿಚಯವಿರುವವರ ಕಥೆಯೇ ಅಲ್ಲವಾ ಅನಿಸುತ್ತದೆ. ಆದರೆ ಕಾದಂಬರಿಕಾರನ ಕಣ್ಣು ಸರಳ ಪರಿಚಯದ ಆಚೆಗೂ ಹೊಕ್ಕು ಬರುತ್ತದೆ.

ಒಟ್ಟಾರೆಯಾಗಿ ರಾಜಕಾರಣಿ ಸಮೂಹ ಅಥವಾ ಚಿತ್ರನಟಿಯರ ಬಗ್ಗೆ ಕೀಳು ಭಾವನೆಯಿರಿಸಿಕೊಂಡು ಬರೆಯಲು ಕುಳಿತರೆ, ಇಂತಹ ಒಳಗಣ್ಣು ತೆರೆದುಕೊಳ್ಳುವುದಿಲ್ಲ. ನಿಜಕ್ಕೂ ರವಿ ಬೆಳಗೆರೆ ಕಾದಂಬರಿಯ ಪಾತ್ರಗಳನ್ನು ಯಾವುದೇ ನಂಜು ಇಟ್ಟುಕೊಳ್ಳದೆ ಚಿತ್ರಿಸುತ್ತಾ ಹೋಗಿದ್ದಾರೆ"[7] ಎಂದು ರವಿ ಬೆಳಗೆರೆಯವರ ಕಾದಂಬರಿ ಬರಹ ಕುರಿತು ಮೆಚ್ಚಿಗೆ ಮಾತುಗಳನ್ನಾಡಿದ್ದಾರೆ.

ಅಪರಾಧವನ್ನು ತುಂಬಾ ವೈಭವೀಕರಿಸಿ ಬರೆಯುತ್ತಾರೆ ಎಂಬ ಅಪವಾದ ರವಿಯವರ ಮೇಲಿದ್ದರೂ ಅವರ ಕ್ರೈಂ ಕೃತಿಗಳಲ್ಲಿ ಅಪರಾಧಿಗಳ ಮನಸ್ಸಿನಲ್ಲಿ ಮನುಷ್ಯತ್ವದ ಸೆಳಕನ್ನು ಹುಡುಕಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಕೇವಲ ಕ್ರೈಂ ಬರಹಕ್ಕೆ ಸೀಮಿತವಾಗಿರದೆ ಅದರಾಚೆಗೂ ಸಾಹಿತ್ಯವನ್ನು ವಿಸ್ತರಿಸಿದವರು. ರವಿಯವರು ಬಹುತೇಕ ಕನ್ನಡಿಗರಿಗೆ ಪರಿಚಿತವಾಗಿಯೆ ಉಳಿದಿದ್ದ ಶ್ರೇಷ್ಠ ಭಾರತೀಯ ಇಂಗ್ಲಿಷ್ ಲೇಖಕ 'ಮನೋಹರ್' ಮಳಗಾಂವಕರರನ್ನು ಕನ್ನಡಕ್ಕೆ ಪರಿಚಯಿಸಿ ಅವರ ಅಪರೂಪದ ಕೃತಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ ಹೆಗ್ಗಳಿಕೆ ರವಿಯವರದು. ಅತ್ಯಮೂಲ್ಯವಾದ ಕೃತಿಗಳನ್ನು ರಚಿಸಿ ಅನುವಾದಿಸಿ ಕನ್ನಡಕ್ಕೆ ಕೊಡುಗೆಯಾಗಿ ನೀಡುವ ಮೂಲಕ ಕನ್ನಡ ಸಾಹಿತ್ಯ ಜಗತ್ತನ್ನು ಶ್ರೀಮಂತಗೊಳಿಸಿದ್ದಾರೆ. ವ್ಯಾಪಕವಾಗಿ ಹಾಗೂ ವೈವಿಧ್ಯಮವಾಗಿ ಬರೆದಿರುವ ರವಿಯವರ ಎಲ್ಲಾ ಕೃತಿಗಳು (ಕಥೆಗಳನ್ನು ಹೊರತುಪಡಿಸಿ) ವಿಮರ್ಶೆಯ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ವಿಷಾದನೀಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರವಿ ಬೆಳಗೆರೆ ಸ್ಥಾನಮಾನ ಅವರ ಬರವಣಿಗೆಯನ್ನು ಕುರಿತಂತೆ ಲೇಖಕರಾದ 'ಜೋಗಿ' (ಗಿರೀಶರಾವ) ಹೀಗೆ ಹೇಳಿದ್ದಾರೆ.

"ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರವಿ ಬೆಳಗೆರೆ ಸ್ಥಾನಮಾನವೇನು ಅನ್ನುವ ಪ್ರಶ್ನೆಗೆ ಉತ್ತರಿಸುವ ಅಗತ್ಯವಿಲ್ಲ. ಯಾಕೆಂದರೆ ಚರಿತ್ರೆಯ ನಿರ್ಮಾಪಕರು ಯಾರು? ಎಂಬ ಪ್ರಶೆಗೆ ತುಂಬಾ ಅಸಮರ್ಪಕವಾದ ಉತ್ತರ ಸಿಗುತ್ತದೆ. ಇವತ್ತು ಕನ್ನಡದಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುವುದು ರವಿಬೆಳಗೆರೆಯವರ ಕೃತಿ. ಎರಡನೇ ಸ್ಥಾನ ಡಾ. ಎಸ್.ಎಲ್. ಭೈರಪ್ಪ. ಮೂರನೇ ಸ್ಥಾನ ತೇಜಸ್ವಿ ಇದ್ದಾರೆ.

ಸಂತೋಷದ ಸಂಗತಿಯೆಂದರೆ ಈ ಮೂವರು ವಿಮರ್ಶೆಯನ್ನು ಮೀರಿದವರು. ಕನ್ನಡ ಓದುಗ ಬಳಗವನ್ನು ಹೆಚ್ಚಿಸಿದವರು. ಇವರ ಪುಸ್ತಕ ಹೀಗಿದೆ ಎಂದು ಯಾರು ಸರ್ಟಿಫಿಕೇಟು ಕೊಡಬೇಕಾಗಿಲ್ಲ. ಹೇಗಿದ್ದರೂ ಓದುತ್ತಾರೆ. ಮತ್ತು ಹೇಗಿದೆ ಅನ್ನುವುದು ಎಲ್ಲರಿಗೂ ಗೊತ್ತಿರುತ್ತದೆ. ಯುಟಿಲಿಟಿ ಬಯಸುವ ಲೆಕ್ಕಾಚಾರದ ಓದುಗನಿಗೂ ಕೇವಲ ಆನಂದವನ್ನಷ್ಟೆ ಬಯಸುವ ನಿಜದ ಓದುಗರಿಗೂ ಏಕಕಾಲಕ್ಕೆ

ಸಂತೋಷ ಕೊಡುವಂತೆ ಬರೆಯಬಲ್ಲರು. ಈ ಮೂವರು ಕನ್ನಡ ಮಾತಿಗೆ ಬಂದರೆ ಪಾಪ್ಯುಲಾರಿಟಿ ಶತ್ರು ಎಂದು ಭಾವಿಸುವ ಬಹುದೊಡ್ಡ ಲೇಖಕರ ಬಳಗ ನಮ್ಮಲ್ಲಿದೆ. ಅವರ ಜನಪ್ರಿಯತೆಯ ಕಂಡು ವಿರೋಧಿಸುವ ಮಂದಿಯೆ ಹೆಚ್ಚು. ಹೆಚ್ಚು ಮಂದಿ ಓದಿದರೆ ಅದು ಒಳ್ಳೆಯ ಕೃತಿಯಲ್ಲ ಎಂಬ ಗುಮಾನಿ. ಹತ್ತು ವರ್ಷಗಳಲ್ಲಿ ಸಾವಿರ ಪ್ರತಿ ಖರ್ಚಾದರೆ ಅದು ಯಶಸ್ವಿ ಕಾದಂಬರಿ. ಅಂಥದ್ದರ ನಡುವೆ ಗೆದ್ದು ನಿಂತವರು ರವಿ ಬೆಳಗೆರೆಯವರು.

ಕನ್ನಡ ಸಾಹಿತ್ಯ ಚರಿತ್ರೆ ಹೀಗೆ ಅನೇಕರನ್ನು ಸಾಹಿತ್ಯ ಚರಿತ್ರೆಯ ಯಾವುದೇ ಕಾಲಘಟ್ಟಕ್ಕಾಗಲಿ ಪಂಥಕ್ಕಾಗಲೀ ಸೇರಿಸುವಲ್ಲಿ ಸೋತು ಕುಂತಿದೆ. ಅನಕೃ ರಾಮಮೂರ್ತಿ, ತರಾಸು, ಟಿ.ಕೆ. ರಾಮರಾವ, ದೇವುಡು, ತೇಜಸ್ವಿ, ಭೈರಪ್ಪ ಇವರೆಲ್ಲ ನವ್ಯವು ಅಲ್ಲದ, ನವ್ಯೋತ್ತರವು ಅಲ್ಲದ ಪ್ರಗತಿಶಿಲರೂ ಅಲ್ಲದ ಕನ್ನಡ ಓದುಗರನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತ ಹೋದವರು. ಕನ್ನಡದ ಕಣ್ತೆರಿಸಿದ ಲೇಖಕರು ಎಂದು ಕರೆಯಬಹುದಾದವರು. ಆ ಸಾಲಲ್ಲೆ ರವಿಬೆಳಗೆರೆ ಕೂಡಾ ಬರುತ್ತಾರೆ”[೨] ಎಂದಿದ್ದಾರೆ.

ಕೊನೆ ಟಿಪ್ಪಣಿ

೧. ಕವಿರಾಜ ಮಾರ್ಗವಲ್ಲ ಇದು ಕಾಮರಾಜ ಮಾರ್ಗ, ಪುಟ V, VI

೨. ಶರತ್ ಕಲ್ಕೋಡ್ (ಸಂ) ಫಸ್ಟ್‌ಹಾಫ್, ಪುಟ ೨೩೧

ಅನುಬಂಧ

ಅನುಬಂಧ

೧. ಸಂಕ್ಷಿಪ್ತ ಪರಿಚಯ

ರವಿ ಬೆಳಗೆರೆಯವರ ಪೂರ್ವಜರು ಆಂಧ್ರ ಪ್ರದೇಶದ ಮುಲಕನಾಡು ಪ್ರದೇಶದಿಂದ ೧೭ನೇ ಶತಮಾನದಲ್ಲಿ ಕರ್ನಾಟಕಕ್ಕೆ ವಲಸೆ ಬಂದು ಇಲ್ಲೇ ನೆಲೆಸಿದರು. ಮೈಸೂರ ಮಹಾರಾಜರು ನೀಡಿದ ಇನಾಮತಿ ಜಮೀನಿನಲ್ಲಿ ಜೀವನ ಸಾಗಿಸುತ್ತಿದ್ದರು. ರವಿ ಬೆಳಗೆರೆಯವರ ಮುತ್ತಜ್ಜ (ತಾಯಿಯ ತಾತ) ನರಸಿಂಹ ಭಟ್ಟರು ಕಂಚಿಯಲ್ಲಿ ವಿದ್ಯಾಭ್ಯಾಸ ಮಾಡಿ ಸಂಸ್ಕೃತದಲ್ಲಿ ಪ್ರಕಾಂಡ ಪಾಂಡಿತ್ಯ ಗಳಿಸಿಕೊಂಡು ಛಂದೋಬದ್ಧವಾಗಿ ಕಾವ್ಯ ರಚನೆ ಮಾಡುತ್ತಿದ್ದರು. ಇವರ ಮಗ ಚಂದ್ರಶೇಖರ ಶಾಸ್ತ್ರಿಗಳು ವೇದಗಳನ್ನೆಲ್ಲಾ ಅಧ್ಯಯನ ಮಾಡಿದವರು. ಬೆಳಗೆರೆ ಚಂದ್ರಶೇಖರ ಶಾಸ್ತ್ರಿಗಳ ಕಿರಿಯ ಮಗಳಾದ ಬೆಳಗೆರೆ ಪಾರ್ವತಮ್ಮನರು ರವಿಯವರ ತಾಯಿ. ಪಾರ್ವತಮ್ಮನವರು ಸ್ವತಃ ಕವಯಿತ್ರಿ ಹಾಗೂ ಕಥೆಗಾರ್ತಿಯಾಗಿದ್ದರು. ನವೋದಯ ಕಾಲ ಘಟ್ಟದ ಮೊದಲ ಕವಯಿತ್ರಿ ಬೆಳಗೆರೆ ಜಾನಕಮ್ಮ ರವಿಯವರ ದೊಡ್ಡಮ್ಮ. ಇವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಪುಟ್ಟಗ್ರಾಮ 'ಬೆಳಗೆರೆ' ಇದು ರವಿ ಬೆಳಗೆರೆಯವರ ತಾಯಿ ಪಾರ್ವತಮ್ಮನವರ ಹುಟ್ಟೂರು. ಆದರೆ ರವಿಬೆಳಗೆರೆಯವರು ಮಾರ್ಚ್ ೧೫-೧೯೫೮ ರಂದು ಬಳ್ಳಾರಿಯ ಸತ್ಯನಾರಾಯಣ ಪೇಟೆಯಲ್ಲಿ ಜನಿಸಿದರು. ಇವರು ಹುಟ್ಟಿ ಬೆಳೆದಿದ್ದು ಹಾಗೂ ಸಾಹಿತ್ಯಕ ಕೃಷಿ ಮಾಡಲು ಪ್ರಾರಂಭಿಸಿದ್ದು ಬಳ್ಳಾರಿಯಿಂದಲೇ. ಜೊತೆಗೆ ತಮ್ಮ ಸಂಪಾದಕತ್ವದಲ್ಲಿ 'ಬಳ್ಳಾರಿ ಪತ್ರಿಕೆ'ಯನ್ನು ಪ್ರಾರಂಭಿಸುವುದರ ಮೂಲಕ ಪತ್ರಕರ್ತರಾಗಿ ರೂಪುಗೊಂಡರು.

ಅವರು ತಮ್ಮ ೩೭ನೇ ವಯಸ್ಸಿನವರೆಗೆ ನೋವು, ನಿರಾಸೆ, ಅವಮಾನ, ಬಡತನ, ಸೋಲುಗಳೊಂದಿಗೆ ಜೀವನ ಕಳೆದ ರವಿ ಬೆಳಗೆರೆಯವರು. ನಂತರ ಸಾಧಿಸಿದ ಸಾಧನೆಗಳು ನಿಜಕ್ಕೂ ವಿಸ್ಮಯ ಮೂಡಿಸುತ್ತವೆ. ೧೯೯೫ ರಲ್ಲಿ ಪ್ರಾರಭಿಸಿದ 'ಹಾಯ್ ಬೆಂಗಳೂರ್!' ಪತ್ರಿಕೆ ಅವರ ಬದುಕಿನಲ್ಲಿ ಯಶಸ್ಸು, ಖ್ಯಾತಿಗಳ ಅಲೆಯನ್ನೇ ತಂದಿತು. ರವಿಯವರ ಆತ್ಮಕಥನ 'ಖಾಸ್‌ಬಾತ್' ಅವರ ಬದುಕಿನ ಏಳು-ಬೀಳು, ಸೋಲು-ಸಾಧನೆಗಳನ್ನು ಚಿತ್ರಿಸುತ್ತದೆ. 'ಬೆತ್ತಲೆಯಾದಷ್ಟು ಮನುಷ್ಯ ಮಾನವಂತನಾಗುತ್ತಾನೆ' ಎಂಬ ಸಿದ್ಧಾಂತವನ್ನು ಆದರ್ಶವಾಗಿಟ್ಟುಕೊಂಡಿರುವ ರವಿಯವರು ತಮ್ಮ ಆತ್ಮ ಕಥನದಲ್ಲಿಯೂ ಕೂಡಾ ಅದನ್ನೆ ಪಾಲಿಸಿದ್ದಾರೆ. ತಮ್ಮ ಬದುಕಿನ ನೋವು-ನಲಿವುಗಳನ್ನು ಪ್ರೇಮ ವೈಫಲ್ಯವನ್ನು, ನಿರ್ಲಜ್ಜ ಸ್ಥಿತಿಯನ್ನು, ಕುಡಿತದ ದಿನಗಳ ಇವೆಲ್ಲವನ್ನು ಅತ್ಯಂತ ಪ್ರಾಮಾಣಿಕವಾಗಿ, ಸ್ಪಷ್ಟವಾಗಿ ಚಿತ್ರಿಸಿಕೊಂಡಿದ್ದಾರೆ. ಅವರ ಸಾಧನೆಗಳನ್ನು ಕೂಡಾ ಆತ್ಮಕತೆಗೆ ಒಳಗಾಗದಂತೆ

ಬರೆದಿದ್ದಾರೆ. ರವಿಬೆಳಗೆರೆಯವರು ತಮ್ಮ ಇಡೀ ಬದುಕಿನ ಚಿತ್ರಣವನ್ನು ತಮ್ಮದೇ ಆದ ಬರವಣಿಗೆಯಲ್ಲಿ ಕೆಲವೇ ಸಾಲುಗಳಲ್ಲಿ, ವಿಶಿಷ್ಟವಾದ ಶೈಲಿಯಲ್ಲಿ ಓದುಗರಿಗೆ ಪರಿಚಯಿಸಿಕೊಳ್ಳುವ ಶೈಲಿ ಹೀಗೆ......

ಬರವಣಿಗೆಯೊಂದರಿಂದಲೆ ಅನ್ನ ಮತ್ತು ಆತ್ಮ ಸಂತೋಷ ದುಡಿದುಕೊಳ್ಳಲು ತೀರ್ಮಾನಿಸಿದಂತೆ ಬದುಕುತ್ತಿರುವವನು ನಾನು. ಬರವಣಿಗೆಯನ್ನು ಬಿಟ್ಟು ಬೇರೆ ಏನನ್ನೂ ಮಾಡಲು ನನಗೆ ಬಾರದು ಅಂತ ತಿರ್ಮಾನಿಸಿ ಆಗಿದೆ.

ನನಗೀಗ ನಲವತ್ತನಾಲ್ಕು ವರ್ಷ ವಯಸ್ಸು. ಹುಟ್ಟಿದ್ದು ೧೯೫೮ರ ಮಾರ್ಚ್ ೧೫ರಂದು, ಬಳ್ಳಾರಿಯಲ್ಲಿ. ಎರಡು ವರ್ಷ ತುಮಕೂರಿನ ಸಿದ್ದಗಂಗಾ ಹೈಸ್ಕೂಲಿನಲ್ಲಿ ಓದಿದುದನ್ನು ಬಿಟ್ಟರೆ ಬಿ.ಎ.ವರೆಗಿನ ವ್ಯಾಸಂಗ ನಡೆದದ್ದು ಬಳ್ಳಾರಿಯಲ್ಲಿ. ನಂತರ ಓದಿದ್ದು ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗಾಗಿ; ಧಾರವಾಡದಲ್ಲಿ. ಕೆಲಕಾಲ ಬಳ್ಳಾರಿ, ಹಾಸನ ಮತ್ತು ಹುಬ್ಬಳ್ಳಿಯ ಕಾಲೇಜುಗಳಲ್ಲಿ ಇತಿಹಾಸ ಉಪನ್ಯಾಸಕನಾಗಿ ಕೆಲಸ ಮಾಡಿದೆ. ಅದಕ್ಕೆ ಮುಂಚೆ ಮತ್ತು ಅದರ ನಂತರ ಸರಿಸುಮಾರು ಒಂಭತ್ತು ವೃತ್ತಿ ಬದಲಿಸಿದೆ. ಹೈಸ್ಕೂಲು ಮೇಷ್ಟ್ರು, ಹೋಟೆಲ್ ಮಾಣಿ, ರೂಮ್ ಬಾಯ್, ರಿಸೆಪ್ಷನಿಸ್ಟ್, ಹಾಲು ಮಾರುವ ಗೌಳಿ, ದಿನಪತ್ರಿಕೆ ಹಂಚುವ ಹುಡುಗ, ಮೆಡಿಕಲ್ ರಿಪ್ರಸೆಂಟೇಟಿವ್, ಪ್ರಿಂಟಿಂಗ್ ಪ್ರೆಸ್ ಮಾಲಿಕ, ಥೇಟರನಲ್ಲಿ ಗೇಟ್ ಕೀಪರ್, ಕಾಲೇಜಿನಲ್ಲಿ ಉಪನ್ಯಾಸಕ, ಮನೆಪಾಟದ ಮೇಷ್ಟು ಹೀಗೆ ನಾನಾ ಕಡೆ ಮೈಕೈ ಮೆತ್ತಗಾಗಿಸಿಕೊಂಡು ದುಡಿದೆ. ಕರ್ನಾಟಕದ ಅಷ್ಟೂ ಪತ್ರಿಕೆಗಳಿಗೆ ಬರೆದೆ. ಅನೇಕ ಪತ್ರಿಕೆಗಳಿಗೆ ಕೆಲಸ ಮಾಡಿದೆ. ತುಂಬ ಚಿಕ್ಕ ವಯಸ್ಸಿಗೇ ನನಗಿಂತ ಜಾಸ್ತಿ ವಯಸ್ಸಾದ ಪತ್ರಿಕೆಗಳಿಗೆ ಸಂಪಾದಕನಾದೆ. ಈತನಕ ಸರಿಸುಮಾರು ಇಪ್ಪೈದು ಪುಸ್ತಕಗಳು ಪ್ರಕಟವಾಗಿವೆ. ಖುಷ್ವಂತ್ ಸಿಂಗ್, ಚಲಂ, ಪ್ರೊತಿಮಾ ಬೇಡಿ, ಬ್ರಿಗೇಡಿಯರ್ ಜಾನ್.ಪಿ. ದಳವಿ, ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್, ವಿನೋದ್ ಮೆಹ್ತಾ ಮುಂತಾದವರ ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕ್ಯಾಡೆಮಿಯವರು ಪ್ರಶಸ್ತಿ ಕೊಟ್ಟಿದ್ದಾರೆ. ಸಣ್ಣ ಕತೆ ನನ್ನ ಅತಿ ಇಷ್ಟದ ಪ್ರಕಾರ. ಅದರಲ್ಲೂ ಪ್ರಶಸ್ತಿ ಬಹುಮತಿಗಳು ಬಂದಿವೆ.

ಸದ್ಯಕ್ಕೆ ನಾನು 'ಹಾಯ್ ಬೆಂಗಳೂರು!' ಕನ್ನಡ ವಾರ ಪತ್ರಿಕೆಯ ಹಾಗೂ 'ಓ ಮನಸೇ' ಪಾಕ್ಷಿಕದ ಸಂಪಾದಕ. ಪ್ರಾರ್ಥನಾ ಎಜುಕೇಶನ್ ಸೊಸೈಟಿಯ ಸಂಸ್ಥಾಪಕ ಕಾರ್ಯದರ್ಶಿ. ಒಬ್ಬ ಹೆಂಡತಿ ಮೂವರು ಮಕ್ಕಳ ತಂದೆ. ನನ್ನ ಬಗೆಗಿನ ಉಳಿದ ವಿವರಗಳು ಅನ್ ಇಂಟರೆಸ್ಟಿಂಗ್'!

ರವಿ ಬೆಳಗೆರೆ

೨. ಪ್ರಕಟಿತ ಕೃತಿಗಳು

ರವಿ ಬೆಳಗೆರೆಯವರು ಇದುವರೆಗೆ ಬರೆದಿರುವ ಪ್ರಕಟಿತ ಕೃತಿಗಳು

೧. ಅಗ್ನಿ ಕಾವ್ಯ (ಕವನ ಸಂಕಲನ)

೨. ದಾರಿ (ಕಥಾ ಸಂಕಲನ) ಮೊ. ಮು. ೧೯೮೦

೩. ಪಾ.ವೆಂ. ಹೇಳಿದ ಕಥೆ (ಕಥಾ ಸಂಕಲನ) ಮೊ. ಮು. ೧೯೯೫

೪. ಒಟ್ಟಾರೆ ಕಥೆಗಳು (೧೯೯೮ ತನಕ ಬರೆದ ಕಥೆಗಳ ಸಂಕಲನ) ೧೯೯೮

❖ ತೆಲುಗು ಅನುವಾದಿತ ಕೃತಿಗಳು

೫. ವಿವಾಹ: ಹುಟ್ಟು ಮತ್ತು ಪೂರ್ವೋತ್ತರ
ಮೂಲ: ತಾಪಿ ಧರ್ಮರಾವ್ ಅವರ 'ಪೆಳ್ಳಿದಾನಿ ಪುಟ್ಟು ಪೋರ್ವೋತ್ತರಾಲು'

೬. ನಕ್ಷತ್ರ ಜಾರಿದಾಗ [ಕಾದಂಬರಿ]
ಮೂಲ: ಯಂಡಮೂರಿ ವಿರೇಂದ್ರನಾಥ್ ಅವರ 'ಯುಗಾಂತಂ'

೭. ಚಾಲಂ [ಆತ್ಮ ಚರಿತ್ರೆ]
ಮೂಲ: ಗುಡಿಪಾಟು ವೆಂಕಟ ಚಾಲಂ

❖ ಇಂಗ್ಲಿಷ್ ಅನುವಾದಿತ ಕೃತಿಗಳು

೮. ಹಿಮಾಲಯನ್ ಬ್ಲಂಡರ್ [೧೯೬೨ ರ ಭಾರತ-ಚೀನಾ ಯುದ್ಧ ಕಥನ]
ಮೂಲ: ಬ್ರಿಗೇಡಿಯರ್ ಜಾನ್. ಪಿ. ದಳವಿ

೯. ರಾಜ ರಹಸ್ಯ [ರಾಜಕೀಯ-ತನಿಕೆ]
ಮೂಲ: ಸಿ. ದಿನಕರ್ ಅವರ 'Veerappan Prize Catch Rajkumar'

೧೦. ಟೈಂಪಾಸ್ [ಆತ್ಮ ಕಥನ]
ಮೂಲ: ಪ್ರೊತಿಮಾ ಬೇಡಿ

೧೧. ದಿ ಗಾಡ್ ಫಾದರ್ [ಕಾದಂಬರಿ]
ಮೂಲ: ಮಾರಿಯೋ ಫ್ಯೂಜೋ

೧೨. ಬ್ಲ್ಯಾಕ್ ಫ್ರೈಡೇ [೧೯೯೩ ರ ಮುಂಬೈ ಸರಣಿ ಸ್ಫೋಟ ಕುರಿತು]
ಮೂಲ: ಹುಸೇನ್ ಜೈದಿ

೧೩. ದಿ ಕಂಪೆನಿ ಆಫ್ ವಿಮೆನ್ [ಕಾದಂಬರಿ]
ಮೂಲ: ಖುಷ್‌ವಂತ್ ಸಿಂಗ್

೧೪. ಹಂತಕಿ ಐ ಲವ್ ಯೂ [ಕಾದಂಬರಿ]
ಮೂಲ: Basic Instinct ಇಂಗ್ಲೀಷ್ ಚಲನಚಿತ್ರ

೧೫. ದೆಲ್ಲಿ [ಕಾದಂಬರಿ] *
ಮೂಲ: ಖುಷ್‌ವಂತ್ ಸಿಂಗ್

೧೬. ನೀನಾ ಪಾಕಿಸ್ತಾನ? [ಪಾಕಿಸ್ತಾನದ ರಾಜಕೀಯ, ಭಯೋತ್ಪಾದನೆ, ಉಗ್ರಗಾಮಿ ಸಂಘಟನೆಯನ್ನು ಕುರಿತು]
ಮೂಲ: ಅಮೀರ್ ಮೀರ್ ಅವರ 'The true face of Jehadees; Inside Pakistan's network of terror'

೧೭. ದಂಗೆಯ ದಿನಗಳು [೧೮೪೭ರ ಸ್ವತಂತ್ರ್ಯ ಸಂಗ್ರಾಮವನ್ನು ಕುರಿತು]
ಮೂಲ: ಮನೋಹರ ಮಳಗಾಂವಕರ್ ಅವರ 'Deyil wind'

೧೮. ಅವನೊಬ್ಬನಿದ್ದ ಗೋಡ್ಸೆ [ಗಾಂಧಿ ಹತ್ಯೆ ಮತ್ತು ನಾಥೂರಾಮ್ ಗೋಡ್ಸೆಯನ್ನು ಕುರಿತು]
ಮೂಲ: ಮನೋಹರ ಮಳಗಾಂವಕರ್ ಅವರ 'The men Who Killed Gandhi'

೧೯. ನಿಜ್ಜ ಪ್ರೀತಿಸ್ತೀಯಾ? [ಕಾದಂಬರಿ] *
ಮೂಲ: ಆ್ಯನ್‌ರೂಲ್ ಅವರ 'If you really love me'

೨೦. ಮೇಹರ್ ಸಂದೀಪ್ ಹತ್ಯೆ
ಮೂಲ: ಹರೀಂದರ್ ಬವೇಜಾ [ಸಂಪಾದಕಿ]

❖ ಅಪರಾಧ [ಕ್ರೈಂ]

೨೧. ಪಾಪಿಗಳ ಲೋಕದಲ್ಲಿ I
೨೨. ಪಾಪಿಗಳ ಲೋಕದಲ್ಲಿ II
೨೩. ಭೀಮಾತೀರದ ಹಂತಕರು [ಬಿಜಾಪುರ ಜಿಲ್ಲೆಯ ಪಾತಕ ಲೋಕದ ಬಗ್ಗೆ]
೨೪. ಮೈಸೂರಿನ ಸೀರಿಯಲ್ ಕಿಲ್ಲರ್ ರವೀಂದ್ರ ಪ್ರಸಾದ್ * ಮು. ೧೯೯೮
೨೫. ಡಿ ಕಂಪೆನಿ [ಮುಂಬೈ ಭೂಗತ ಜಗತ್ತನ್ನು ಕುರಿತು]

❖ ಕಾದಂಬರಿಗಳು

೨೬. ಮಾಂಡೋವಿ
೨೭. ಹೇಳಿ ಹೋಗು ಕಾರಣ, ಮೊ. ಮು. ಸೆಪ್ಟಂಬರ್ ೨೦೦೩
೨೮. ನೀ ಹಿಂಗ ನೋಡಬ್ಯಾಡ ನನ್ನ, ಮೊ. ಮು. ಸೆಪ್ಟಂಬರ್ ೨೦೦೩
೨೯. ಅರ್ತಿ
೩೦. ಮಾಟಗಾತಿ, ಮೊ. ಮು. ೧೯೯೮
೩೧. ಸರ್ಪ ಸಂಬಂಧ, ಮೊ. ಮು. ಜೂನ್ ೨೦೦೦
೩೨. ಗೋಲಿಬಾರ್ [ರಾಜಕೀಯ]
೩೩. ಒಮರ್ಟಾ

೩೪. ರೇಷ್ಮೆ ರುಮಾಲು [ಇತಿಹಾಸ]

೩೫. ಕವಿರಾಜ ಮಾರ್ಗವಲ್ಲ ಇದು ಕಾಮರಾಜ ಮಾರ್ಗ, ಮೊ. ಮು ನವೆಂಬರ್ ೨೦೧೦

೩೬. ಯಂತ್ರ ತಂತ್ರ ಮಂತ್ರ *

೩೭. ಆಂಟಿ ನಿನ್ನೊಲುಮೆಯಿಂದಲೇ *

೩೮. ಜೊತೆ ಜೊತೆಯಲಿ *

೩೯. ಮಧ್ಯ ರಾತ್ರಿಯ ಆ ಮಗ್ಗಲು *

೪೦. ಯೌವ್ವನ ಜೋಪಾನ *

೪೧. ದಿ ಸೆಟ್ಲ್‌ಮೆಂಟ್ *

೪೨. ಕಾಲ್ ಸೆಂಟರ್ ಕಿಲ್ಲಿಂಗ್ *

೪೩. ಭವಾಲದ ಭೈರಾಗಿ *

೪೪. ಆತ್ಮಾ [ಭೂಗತ ಜಗತ್ತು] *

೪೫. ಪ್ರದೋಷ್ *

❖ ಜೀವನ ಚರಿತ್ರೆ

೪೬. ಸಂಜಯ [ಸಂಜಯ ಗಾಂಧಿ]

೪೭. ಇಂದಿರೆಯ ಮಗ ಸಂಜಯ

೪೮. ಡಯಾನ [ಬ್ರಿಟನ್ ರಾಜಕುಮಾರಿ ಡಯಾನ]

೪೯. ಪಾಪದ ಹೂ ಫೂಲನ್ [ಫೂಲನ್ ದೇವಿ]

೫೦. ಪ್ಯಾಸಾ

೫೧. ಸುಭಾಸ್ ಚಂದ್ರ ಬೋಸ್ *

೫೨. ಕೊಂಡಪಲ್ಲಿ ಸೀತಾರಾಮಯ್ಯ *

೫೩. ರಜನೀಶನ ಹುಡುಗಿಯರು

೫೪. ಜೀನಾ ಯಹಾಂ, ಮರ್‌ನಾ ಯಹಾಂ *

❖ ಜೀವನ

೫೫. ಬಾಟಮ್ ಐಟಮ್ I

೫೬. ಬಾಟಮ್ ಐಟಮ್ II

೫೭. ಬಾಟಮ್ ಐಟಮ್ III

೫೮. ಬಾಟಮ್ ಐಟಮ್ IV

೫೯. ಬಾಟಮ್ ಐಟಮ್ V

೬೦. ಬಾಟಮ್ ಐಟಮ್ VI

❖ ತನಿಖೆ

೬೧. ರಾಜೀವ್ ಹತ್ಯೆ ಏಕಾಯಿತು? ಹೇಗಾಯಿತು?

೬೨. ಗಾಂಧಿ ಹತ್ಯೆ ಮತ್ತು ಗೋಡ್ಸೆ [ಮಹಾತ್ಮಗಾಂಧಿ, ಇಂದಿರಾಗಾಂಧಿ, ಗೋಡ್ಸೆಯ ವ್ಯಕ್ತಿತ್ವ ಕುರಿತು]

೬೩. ಬಾಬಾ ಬೆಡ್ ರೂಂ ಹತ್ಯಾಕಾಂಡ

೬೪. ಆಶ್ರಮದ ರಾತ್ರಿಗಳು * (ಸ್ವಾಮಿ ಪ್ರೇಮಾನಂದನ ಆಶ್ರಮ ಕುರಿತು)

೬೫. ಒಂದು ಸಿ.ಬಿ.ಐ ಛಾರ್ಜ್‌ಶೀಟ್ *

❖ ಅಂಕಣ ಬರಹ

೬೬. ಲವ್‌ಲವಿಕೆ ಪ್ರೇಮ ಪತ್ರಗಳ ಸಂಕಲನ (ಭಾಗ ೧,೨,೩,೪)

೬೭. ಕೇಳಿ (ಪ್ರಶ್ನೋತ್ತರ ಸಂಕಲನ)

೬೮. ರವಿ ಕಂಡದ್ದು ರವಿ ಕಾಣದ್ದು (ಸಹ ಲೇಖಕ ಜೋಗಿಯೊಂದಿಗೆ)

❖ ಪ್ರವಾಸ ಕಥನ

೬೯. ಹಿಮಗರ್ಭ * [ಅರುಣಾಚಲ ಪ್ರದೇಶ ಯಾತ್ರೆಯ ಅನುಭವ ಕಥನ]

೭೦. ಕಾರ್ಗಿಲ್‌ನಲ್ಲಿ ಹದಿನೇಳು ದಿನ [ಕಾರ್ಗಿಲ್ ಯುದ್ಧ ಕಥನ]

೭೧. ಮುಸ್ಲಿಂ [ಅಫಘಾನಿಸ್ತಾನ್ ಯುದ್ಧ ಭೂಮಿಯ ಅನುಭವ ಕಥನ]

❖ ಬದುಕು

೭೨. ಖಾಸ್ ಬಾತ್ ೧೯೯೬
ಖಾಸ್ ಬಾತ್ ೧೯೯೭
ಖಾಸ್ ಬಾತ್ ೧೯೯೮
ಖಾಸ್ ಬಾತ್ ೧೯೯೯ — ೯ ಸಂಪುಟಗಳು
ಖಾಸ್ ಬಾತ್ ೨೦೦೦
ಖಾಸ್ ಬಾತ್ ೨೦೦೧
ಖಾಸ್ ಬಾತ್ ೨೦೦೨
ಖಾಸ್ ಬಾತ್ ೨೦೦೩
ಖಾಸ್ ಬಾತ್ ೨೦೦೪

❖ ಇತರೆ

೭೩. ಬಯಲು ಬಾಗಿಲಿಗೆ ನಿಂತ ಕಸಾಯಿ [ಜಾಲಿಯನ್ ವಾಲಾಬಾಗ್ ಹತ್ಯಾ ಕಥನ] *
೭೪. ಕೊಳ್ಳೇಗಾಲದ ಮಾಂತ್ರಿಕರು [ವಾಮಾಚಾರ]
೭೫. ಮನಸೇ.... [ಆಡಿಯೋ ಸಿ.ಡಿ]

❖ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿರುವ ಕೃತಿಗಳು

೧. ಕ್ರಮ ಸಂಖ್ಯೆ: ೧೫ ಮತ್ತು ೬೯ ಈ ಕೃತಿಗಳು ಕರ್ಮವೀರ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ.
೨. ಕ್ರಮ ಸಂಖ್ಯೆ: ೩೭ ಈ ಕೃತಿ 'ಓ ಮನಸೇ'.... ಪಾಕ್ಷಿಕ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ.
೩. ಕ್ರಮ ಸಂಖ್ಯೆ: ೧೯, ೩೬, ೩೮, ೩೯, ೪೦, ೪೧, ೪೨, ೪೩, ೪೪, ೪೫, ೫೧, ೫೨, ೫೪, ೬೪, ೬೫, ೭೩ ಈ ಕೃತಿಗಳು 'ಹಾಯ್ ಬೆಂಗಳೂರ್!' ವಾರಪತ್ರಿಕೆಯಲ್ಲಿ ಧಾರಾವಾಹಿಗಳಾಗಿ ಪ್ರಕಟಗೊಂಡಿವೆ.
೪. ಮೊ. ಮು – ಮೊದಲ ಮುದ್ರಣ.

೩. ಪ್ರಶಸ್ತಿ ಪುರಸ್ಕಾರಗಳು

೧. 'ವಿವಾಹ: ಹುಟ್ಟು ಮತ್ತು ಪೂರ್ವೋತ್ತರ' [ತೆಲುಗಿನಿಂಧ ಅನುವಾದಿಸಿದ] ಕೃತಿಗೆ ೧೯೮೪ ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೨. ಮಾಸ್ತಿ ಕಥಾ ಸ್ಪರ್ಧೆಯಲ್ಲಿ 'ವಂಧ್ಯಾ' ಕಥೆಗೆ ೧೯೯೦ರಲ್ಲಿ ಪ್ರಥಮ ಬಹುಮಾನ
೩. 'ಪಾ.ವೆಂ. ಹೇಳಿದ ಕಥೆ' ಕಥಾ ಸಂಕಲನಕ್ಕೆ ೧೯೯೭ರಲ್ಲಿ 'ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'
೪. 'ಹೇಳಿ ಹೋಗು ಕಾರಣ' ಕಾದಂಬರಿಗೆ ೨೦೦೩ರಲ್ಲಿ 'ಶಿವರಾಮ ಕಾರಂತ ಪ್ರತಿಷ್ಠಾನ ಪ್ರಶಸ್ತಿ'
೫. ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿಯ ಸಾಧನೆಗಾಗಿ ೨೦೦೭ರಲ್ಲಿ ಶಿವರಾಮ ಕಾರಂತ ಹುಟ್ಟೂರು ಪ್ರಶಸ್ತಿ
೬. ಜೀವಮಾನದ ಸಾಧನೆಗಾಗಿ ೨೦೦೭ ರಲ್ಲಿ 'ಮಾಧ್ಯಮ ಅಕಾಡೆಮಿ ಪ್ರಶಸ್ತಿ'.
೭. ಸಾಹಿತ್ಯ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿಯ ಸಾಧನೆಗಾಗಿ 'ರಾಜ್ಯೋತ್ಸವ ಪ್ರಶಸ್ತಿ'

ಪರಾಮರ್ಶನ ಗ್ರಂಥಗಳು:

೧. ರವಿ ಬೆಳಗೆರೆ : ನೀ ಹಿಂಗ ನೋಡಬ್ಯಾಡ ನನ್ನ
ಭಾವನಾ ಪ್ರಕಾಶನ, ಬೆಂಗಳೂರು, ಮು, ೨೦೦೩

೨. ರವಿ ಬೆಳಗೆರೆ : ಹೇಳಿ ಹೋಗು ಕಾರಣ,
ಭಾವನಾ ಪ್ರಕಾಶನ, ಬೆಂಗಳೂರು, ಮು,
೨೦೦೩

೩. ರವಿ ಬೆಳಗೆರೆ : ಕವಿರಾಜಮಾರ್ಗವಲ್ಲ ಇದು ಕಾಮರಾಜಮಾರ್ಗ
ಭಾವನಾ ಪ್ರಕಾಸನ, ಬೆಂಗಳೂರು,
ನವೆಂಬರ, ಮು, ೨೦೧೦

೪. ಡಾ. ಇಂದಿರಾ ಆರ್. : ಮಹಿಳೆ, ಸಮಾಜ ಮತ್ತು ಸಂಸ್ಕೃತಿ ಕನ್ನಡ
ವಿಶ್ವವಿದ್ಯಾಲಯ, ಹಂಪಿ, ಮು, ೨೦೦೨

೫. ಡಾ. ಸುನಿತಾ ಶೆಟ್ಟಿ : ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು. ಕನ್ನಡ
ಅಧ್ಯಯನ ವಿಭಾಗ ಮುಂಬೈ, ಮು, ೨೦೦೦

೬. ಡಾ. ಶ್ರೀಮತಿ ಎಚ್.ಎಸ್.: ಸ್ತ್ರೀವಾದ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಶಿವಣಕರ್ ಎಸ್.ಎನ್. : ಭಾರತೀಯ ಮಹಿಳೆ ಸ್ಥಾನಮಾನ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ,ಮು,೨೦೦೧

೮. ಡಾ. ವರದಾ ಶ್ರೀನಿವಾಸ : ಮಹಿಳೆಯ ಸ್ಥಿತಿಗತಿ ಅಂದು ಇಂದು
ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು, ಮು,
೧೯೯೯

೯. ಗಿರಡ್ಡಿ ಗೋವಿಂದ ರಾಜ: ಕಾದಂಬರಿ ವಸ್ತು ತಂತ್ರ
ಸ್ನೇಹ ಪ್ರಕಾಶನ ಬೆಂಗಳೂರು, ಮು, ೧೯೮೭

ಪತ್ರಿಕೆಗಳು

೧. ಹಾಯ್ ಬೆಂಗಳೂರ್!, ವಾರ ಪತ್ರಿಕೆ, ಪುಟ, ೧೮

ಅಂತರ್ಜಾಲ ಮಾಹಿತಿ

http://ravibelagere.wordpress.com

http://haskannada.oneindia.in/column/ravibelagere/

www.kendasampige.com/article.php?id=307